41st Year of Publication. Phone: 3728.

ಪ್ರಜಾಪ್ರಭುತ್ವ ಅಂಕ 1976

ಪ್ರಭಾತ

ಬೆಲೆ 60 ಪೈಸೆ.

ಸಂಪುಟ: ೪೧. ಸಂಚಿಕೆ: ೫೧. | ಸಂಪಾದಕ: ಕುಡ್ವಿ ವಾಸುದೇವ ಶೆಣೈ. ರವಿವಾರ ತಾ. 25—1—1976 | VOL. 41. No 51

★ ಸಾಧನೆಗಳ ದಶಕ ★

ಇದೇ ತಾ. ೨೪ಕ್ಕೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಹತ್ತು ವರ್ಷಗಳ ಸೇವೆ ಪೂರೈಸುತ್ತಾರೆ. ಈ ಅವಧಿಯಲ್ಲಿ ಅವರ ಕೆಲವೊಂದು ಪ್ರಮುಖ ಚಟುವಟಿಕೆಗಳ ಹಾಗೂ ಸರ್ಕಾರ ಕೈಗೊಂಡ ನಿರ್ಧಾರಗಳ ವಿವರಣೆಯಿದೆ.

೧೯೬೬

ಜನವರಿ ೧೦ – ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿಯಾಗಿ ಶ್ರೀಮತಿ ಇಂದಿರಾ ಗಾಂಧಿ ಆಯ್ಕೆ.

ಜನವರಿ ೨೪–ಪ್ರಧಾನಿಯಾಗಿ ಶ್ರೀಮತಿ ಇಂದಿರಾಗಾಂಧಿಯಿಂದ ಅಧಿಕಾರ ಸ್ವೀಕಾರ-ಕೇಂದ್ರ ಸಂಪುಟದಿಂದ ಅಧಿಕಾರ ಸ್ವೀಕಾರ.

ನವೆಂಬರ್ ೧– ಪಂಜಾಬ್, ಹರಿಯಾನ ರಾಜ್ಯರಚನೆ–ಕೇಂದ್ರಾಡಳಿತ ಪ್ರದೇಶವಾಗಿ ಚಂಡೀಗಢ.

೧೯೬೭

ಜನವರಿ ೨೩–ದುರ್ಗಾಪುರದಲ್ಲಿ ದೇಶದ ಪ್ರಥಮ ಗ್ರಾಫೈಟ್ ಕಾರ್ಖಾನೆ ಆರಂಭ.

ಫೆಬ್ರುವರಿ ೧೫ – ನಾಲ್ಕನೇ ಮಹಾ ಚುನಾವಣೆ.

ಮಾರ್ಚ್ ೧೨– ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿಯಾಗಿ ಶ್ರೀಮತಿ ಗಾಂಧಿಯವರ ಆಯ್ಕೆ.

ಮಾರ್ಚ್ ೧೩ – ಶ್ರೀಮತಿ ಇಂದಿರಾ ಗಾಂಧಿ ನೇತೃತ್ವದಲ್ಲಿ ಹೊಸ ಕೇಂದ್ರ ಸಂಪುಟ ಅಧಿಕಾರಕ್ಕೆ.

ಆಗಸ್ಟ್ ೩೦ – ಅಹಮದಾಬಾದ್‌ದಲ್ಲಿ ಸಫಲ ಟಿ. ವಿ. ಪ್ರಸಾರ ಪ್ರಯೋಗ.

ನವೆಂಬರ್ ೨೦–ತುಂಬಾದಿಂದ ಭಾರತದಲ್ಲಿ ಸಜ್ಜುಗೊಳಿಸಿದ "ರೋಹಿಣಿ" ರಾಕೆಟ್ ಉಡಾವಣೆ.

ಡಿಸೆಂಬರ್ ೨೨ – ತ್ರಿಭಾಷಾ ಸೂತ್ರದ ವಿಧೇಯಕಕ್ಕೆ ಸಂಸತ್ತಿನ ಅನುಮೋದನೆ.

೧೯೬೮

ಜನವರಿ ೯, ೧೦ – ಚೀನೀ ಆಕ್ರಮಣದ ಸಮಯ ಘೋಷಿಸಿದ್ದ ತುರ್ತುಸ್ಥಿತಿ ಅಂತ್ಯ.

ಜೂನ್ ೮ – ಮುಂಬಯಿಯಲ್ಲಿ ಭಾರತ ನೌಕಾಪಡೆಗೆ 'ಭಟ್ಕಲ್' ಸೇರ್ಪಡೆ.

ಜುಲೈ ೫–ನೌಕಾ ಪಡೆಯಲ್ಲಿ ಜಲಾಂತರ್ಗಾಮಿ ವಿಭಾಗ ಆರಂಭ – ರಷ್ಯಾದಿಂದ ನೌಕಾ ಪಡೆಗೆ ಪ್ರಥಮ ಜಲಾಂತರ್ಗಾಮಿ ಸೇರ್ಪಡೆ.

ಅಕ್ಟೋಬರ್ ೨೩–ಭಾರತದಲ್ಲಿ ನಿರ್ಮಿಸಿದ ಯುದ್ಧನೌಕೆ "ನೀಲಗಿರಿ"ಯ ಸೇವೆ ಆರಂಭ.

೧೯೬೯

ಫೆಬ್ರುವರಿ ೧೩ – ಕೇಂದ್ರ ಸಂಪುಟ ಪುನರ್‌ರಚನೆ.

ಜುಲೈ ೧೬ – ಪ್ರಧಾನಿಗೆ ಹಣಕಾಸು ಖಾತೆ ವರ್ಗಾವಣೆ; ಮುರಾರ್ಜಿ ದೇಸಾಯಿ ರಾಜೀನಾಮೆ.

ಜುಲೈ ೧೯ – ೧೪ ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣ ಆಜ್ಞೆ.

ಆಗಸ್ಟ್ ೨೦ – ರಾಷ್ಟ್ರಪತಿಯಾಗಿ ಶ್ರೀ। ವಿ. ವಿ. ಗಿರಿ ಆಯ್ಕೆ.

ಅಕ್ಟೋಬರ್ ೨೬ – ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕುಲಪತಿಯಾಗಿ ಪ್ರಧಾನಿ ನೇಮಕ.

ನವೆಂಬರ್ ೧೪ – ರಾಷ್ಟ್ರಕ್ಕೆ 'ಆನಂದ ಭವನ'ದ ಸಮರ್ಪಣೆ.

೧೯೭೦

ಜನವರಿ ೧೦ – ಪ್ರಧಾನಿಯಿಂದ ತಾರಾಪುರದ ಪ್ರಥಮ ಅಣುಶಕ್ತಿ ಕೇಂದ್ರದ ಉದ್ಘಾಟನೆ.

ಜನವರಿ ೨೩ – ಹತ್ತು ವರ್ಷಕಾಲ ಹರಿಜನ, ಗಿರಿಜನ ಪ್ರತಿನಿಧಿಗಳಿಗೆ ಸಂಸತ್ತು, ವಿಧಾನಸಭೆಗಳಲ್ಲಿ ಸ್ಥಾನ ಮೀಸಲಿಡುವ ಆಜ್ಞೆ.

ಫೆಬ್ರುವರಿ ೯–ಪ್ರಧಾನಿಯಿಂದ ಕೋಟಾದಲ್ಲಿ ರಸಗೊಬ್ಬರ ಕಾರ್ಖಾನೆ ಉದ್ಘಾಟನೆ.

ಏಪ್ರಿಲ್ ೨ – ಅಸ್ಸಾಮಿನಲ್ಲಿ ಮೇಘಾಲಯ ಎಂಬ ಗುಡ್ಡಗಾಡು ರಾಜ್ಯ ರಚನೆ.

ಡಿಸೆಂಬರ್ ೨೭ – ಲೋಕಸಭಾ ವಿಸರ್ಜನೆ; ಮಧ್ಯಂತರ ಚುನಾವಣೆಗೆ ರಾಷ್ಟ್ರಪತಿ ಆಜ್ಞೆ.

೧೯೭೧

ಜನವರಿ ೨೫ – ಹಿಮಾಚಲ ಪ್ರದೇಶ ರಾಜ್ಯ ಅಸ್ತಿತ್ವಕ್ಕೆ.

ಮಾರ್ಚ್ ೧–ಐದನೇ ಮಹಾ ಚುನಾವಣೆ ಮತನೀಡಿಕೆ ಆರಂಭ.

ಮಾರ್ಚ್ ೧೪ – ಕಾಂಗ್ರೆಸ್ ಪಕ್ಷಕ್ಕೆ ವಿಜಯ— ಲೋಕಸಭೆಯಲ್ಲಿ ಕಾಂಗ್ರೆಸ್ಸಿಗೆ ೩೫೦ ಸ್ಥಾನ.



ಪ್ರಧಾನ ಸಚಿವೆ ಶ್ರೀಮತಿ ಇಂದಿರಾ ಗಾಂಧಿಯವರು,
ರಾಷ್ಟ್ರಪತಿ ಶ್ರೀ। ಫಕ್ರುದ್ದೀನ್ ಆಲಿ ಅಹಮ್ಮದ್ ದಂಪತಿಗಳೊಡನೆ.

ಮಾರ್ಚ್ ೧೮–ಶ್ರೀಮತಿ ಗಾಂಧಿ ನಾಯಕತ್ವದಲ್ಲಿ ಕೇಂದ್ರ ಸಂಪುಟ ಅಧಿಕಾರಕ್ಕೆ.

ಮೇ ೧೩ – ೧೦೦ ಜನರಲ್ ವಿಮಾ ಕಂಪೆನಿಗಳ ರಾಷ್ಟ್ರೀಕರಣ.

ಆಗಸ್ಟ್ ೯–ಭಾರತ-ರಷ್ಯಾಗಳ ನಡುವೆ ೨೦ ವರ್ಷಗಳ ಸ್ನೇಹ ಒಪ್ಪಂದಕ್ಕೆ ಸಹಿ.

ಸೆಪ್ಟೆಂಬರ್ ೧೬ – ಬಿಹಾರ, ಬಂಗಾಳಗಳ ೨೧೪ ಕಲ್ಲಿದ್ದಲು ಗಣಿಗಳ ರಾಷ್ಟ್ರೀಕರಣ.

ನವೆಂಬರ್ ೨೧ – ಭಾರತ ಪ್ರದೇಶಕ್ಕೆ ಬಂದ ಮೂರು ಪಾಕ್ ವಿಮಾನಗಳಿಗೆ ಇತಿಶ್ರೀ.

ಡಿಸೆಂಬರ್ ೩ – ತುರ್ತು ಪರಿಸ್ಥಿತಿ ಘೋಷಣೆ.

ಡಿಸೆಂಬರ್ ೬ – ಬಂಗ್ಲಾದೇಶ ಜನತಾ ಗಣರಾಜ್ಯಕ್ಕೆ ಭಾರತದ ಮನ್ನಣೆ.

ಡಿಸೆಂಬರ್ ೧೭ – ಯುದ್ಧಸ್ತಂಭನಕ್ಕೆ ಪಾಕ್ ಒಪ್ಪಿಗೆ.

ಡಿಸೆಂಬರ್ ೧೮ – ಪ್ರಧಾನಿಗೆ "ಭಾರತ ರತ್ನ" ಗೌರವ ನೀಡುವ ಬಗ್ಗೆ ಪ್ರಕಟಣೆ.

೧೯೭೨

ಜನವರಿ ೨೦- ಮೇಘಾಲಯ, ಅರುಣಾಚಲ ಪ್ರದೇಶ ರಚನೆ.

ಜನವರಿ ೨೧ – ಮಣಿಪುರ. ತ್ರಿಪುರ, ಮಿಜೋರಾಂ ಅಸ್ತಿತ್ವಕ್ಕೆ.

ಮಾರ್ಚ್ ೫ – ೧೬ ರಾಜ್ಯಗಳು ಹಾಗೂ ೨ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳಿಗೆ ಚುನಾವಣೆ.

ಮಾರ್ಚ್ ೧೮ – ಭಾರತ-ಬಂಗ್ಲಾ ಪ್ರಧಾನಿಗಳಿಂದ ಶಾಂತಿ ಬಯಕೆಯ ಜಂಟಿ ಘೋಷಣೆ.

ಮಾರ್ಚ್ ೧೯–ಭಾರತ-ಬಂಗ್ಲಾ ನಡುವೆ ೨೫ ವರ್ಷಗಳ ಸ್ನೇಹ ಒಪ್ಪಂದಕ್ಕೆ ಸಹಿ.

ಜೂನ್ ೨ – ಬಾಹ್ಯಾಕಾಶ ಆಯೋಗದ ರಚನೆ.

ಜುಲೈ ೩ – ಇಂದಿರಾಗಾಂಧಿ ಭುಟ್ಟೊ ಅವರಿಂದ ಸಿಮ್ಲಾದಲ್ಲಿ ಒಪ್ಪಂದಕ್ಕೆ ಸಹಿ.

ಆಗಸ್ಟ್ ೧೪-೧೫ – ಭಾರತ ಸ್ವಾತಂತ್ರ್ಯದ ಬೆಳ್ಳಿಹಬ್ಬ–ಸಂಸತ್ತಿನ ಮಧ್ಯರಾತ್ರಿ ಅಧಿವೇಶನ.

ಅಕ್ಟೋಬರ್ ೩ – ಪ್ರಧಾನಿಯಿಂದ ಬೊಕಾರೊ ಊದು ಕುಲುಮೆಯ ಉದ್ಘಾಟನೆ.

ಡಿಸೆಂಬರ್ ೨೦ – ಭಾರತ-ಪಾಕ್ ಪಡೆಗಳಿಂದ ಸ್ವಸ್ಥಾನಗಳಿಗೆ ವಾಪಸಾತಿ.

(೨ನೇ ಪುಟ ನೋಡಿರಿ)

ಜನಸಂಖ್ಯೆಯಲ್ಲಿ ಜಗತ್ತಿನ ರಾಷ್ಟ್ರಗಳಲ್ಲಿ ಭಾರತವು ಎರಡನೆಯದು

ಮಹಾನಗರಗಳಲ್ಲಿ ಕಲ್ಕತ್ತಾ ನಗರವು ಜಗತ್ತಿನಲ್ಲಿ ಏಳನೆಯದು; ಮುಂಬಯಿ ಹನ್ನೆರಡನೆಯದು.

ಭಾರತದಲ್ಲಿ ಹತ್ತು ವರ್ಷಕ್ಕೊಮ್ಮೆ ನಡೆಸುವ ವ್ಯವಸ್ಥಿತ ಜನಗಣತಿ ಕಾರ್ಯಕ್ಕೆ ೧೯೭೧ರ ಏಪ್ರಿಲ್‌ಗೆ ನೂರು ವರ್ಷಗಳು ತುಂಬಿದುವು. ಈ ಕಾರ್ಯಕ್ಕಾಗಿ ಮಿಲಿಯಗಟ್ಟಲೆ ಜನರನ್ನು ನೇಮಿಸಿಕೊಳ್ಳಲಾಗಿದ್ದು, ಅವರು ತಮ್ಮ ಬಿಡುವಿನ ವೇಳೆಯ ಕೆಲವು ತಾಸುಗಳನ್ನು ಇದಕ್ಕೆ ವಿನಿಯೋಗಿಸಿ, ಜನಗಣತಿ ಕಾರ್ಯವನ್ನು ಮುಗಿಸಿದರು. ಇವರಲ್ಲಿ ಬಹುಪಾಲು ಶಾಲಾ ಶಿಕ್ಷಕರಾಗಿದ್ದು, ಅವರಿಗೆ ಅಲ್ಪ ಪ್ರಮಾಣದ ಗೌರವಧನವನ್ನು ನೀಡಲಾಯಿತು. ಉಳಿದದರು ತಮ್ಮ ಸೇವೆಯನ್ನು ಯಾವ ವೇತನವನ್ನೂ ಪಡೆಯದೇ ನೀಡಿದರು.

ಈ ಕಾರ್ಯ ನಿರ್ವಹಣೆಯ ಒಟ್ಟು ವೆಚ್ಚ ಒಂದು ತಲೆಗೆ ಕೇವಲ ೪೦ ಪೈಸೆ. ಜನಗಣತಿಯ ತಪಶೀಲುಗಳನ್ನು ಅನಂತರ ಕಂಪ್ಯೂಟರ್‌ಗಳ ನೆರವಿನಿಂದ ೨೦ ಸಾವಿರ ಜನರು ಕಾರ್ಯನಿರ್ವಹಿಸುತ್ತಿರುವ ೧೦೦ ಕ್ಕೂ ಹೆಚ್ಚು ಗಣತಿಕೋಷ್ಟಕ ಕೇಂದ್ರಗಳಲ್ಲಿ ಸಂಸ್ಕರಿಸಲಾಗುವುದು.

೧೯೭೧ರ ಜನಗಣತಿಯ ಪ್ರಕಾರ ದೇಶದಲ್ಲಿ ಸುಮಾರು ೫೪೮ ಮಿಲಿಯ ಜನರಿದ್ದಾರೆ. (೫೪೮,೧೫೯,೬೫೨). ಎಂದರೆ ಪ್ರಪಂಚದ ಪ್ರತಿ ಏಳು ಜನರಲ್ಲಿ ಒಬ್ಬನು ಭಾರತೀಯ. ಭಾರತವು ಪ್ರಪಂಚದಲ್ಲಿ ಅತ್ಯಂತ ಜನಭರಿತ ದೇಶಗಳಲ್ಲಿ ಎರಡನೆಯ ಸ್ಥಾನವನ್ನು ಪಡೆದಿದೆ. ಮೊದಲನೆಯ ಸ್ಥಾನ ೭೫೦ ಮಿಲಿಯ ಜನಸಂಖ್ಯೆಯ ಚೀನಾಕ್ಕೆ ಸಲ್ಲುತ್ತದೆ. ಸೋವಿಯತ್ ರಷ್ಯಾದಲ್ಲಿ ೨೪೧ ಮಿಲಿಯ, ಅಮೆರಿಕದಲ್ಲಿ ೨೦೩ ಮಿಲಿಯ ಮತ್ತು ಜಪಾನ್‌ನಲ್ಲಿ ೧೦೩ ಮಿಲಿಯ ಜನರಿದ್ದಾರೆ.

೧೯೭೧ರ ಜನಗಣತಿಯ ಪ್ರಕಾರ ಜನಸಂಖ್ಯೆಯ ಪ್ರಮುಖ ಅಂಶಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಶೇಕಡಾ ೮೦ ಭಾಗ ಜನರು ಇನ್ನೂ ಸುಮಾರು ೫೭೬,೦೦೦ ಹಳ್ಳಿಗಳಲ್ಲೇ ವಾಸಿಸುತ್ತಿದ್ದಾರೆ. ಸುಮಾರು ೩ ಸಾವಿರ ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರ ಸಂಖ್ಯೆ ಉಳಿದ ಶೇಕಡಾ ೨೦ ಭಾಗ.

ಪುರುಷರ ಸಂಖ್ಯೆ ಹೆಚ್ಚು

ದೇಶದಲ್ಲಿ ಎಂದಿನಂತೆ, ಸ್ತ್ರೀಯರಿಗಿಂತ ಪುರುಷರ ಸಂಖ್ಯೆ ೨೦ ಮಿಲಿಯಗಳಷ್ಟು ಹೆಚ್ಚಾಗಿದೆ; ಎಂದರೆ, ೨೮೪,೦೪೯,೨೭೬ ಪುರುಷರು ಮತ್ತು ೨೬೪,೧೧೦,೩೭೬ ಸ್ತ್ರೀಯರಿದ್ದಾರೆ. ಕಳೆದ ದಶಕದಲ್ಲಿ ಜನಸಂಖ್ಯೆಯ ಹೆಚ್ಚಳದ ಅಂಶವು ಶೇಕಡಾ ೨೪.೮೦ ಭಾಗ, ಅದರ ಹಿಂದಿನ ದಶಕದಲ್ಲಿ ಇದರ ಪ್ರಮಾಣ ಶೇಕಡಾ ೨೧.೫೧ ಭಾಗ ಇದ್ದಿತು. ಈ ಬೆಳವಣಿಗೆಯ ಹೆಚ್ಚಳಕ್ಕೆ ಕಾರಣ, ಉತ್ತಮ ವೈದ್ಯಕೀಯ ಸೌಲಭ್ಯಗಳು, ರೋಗಗಳ ನಿಯಂತ್ರಣ ಮತ್ತು ಮರಣ ಸಂಖ್ಯೆಯ ಪ್ರಮಾಣದಲ್ಲಿನ ಕಡಿತ.

ಕಳೆದ ದಶಕದಲ್ಲಿ ಅಕ್ಷರಸ್ಥರ ಸಂಖ್ಯೆ ಆರು ಅಂಶಗಳಷ್ಟು ಹೆಚ್ಚಿದೆ. (ಶೇಕಡಾ ೨೮.೩೦ ಭಾಗದಿಂದ ಶೇಕಡಾ ೩೪.೪೫).

ಪಟ್ಟಣ ಪ್ರದೇಶಗಳ ಜನಸಂಖ್ಯೆ

ಪಟ್ಟಣ ಪ್ರದೇಶಗಳಲ್ಲಿ ಶೇಕಡಾ ೨೦ ಭಾಗ ಜನ ವಾಸಿಸುತ್ತಿದ್ದು, ಅವರಸಂಖ್ಯೆ ಸುಮಾರು ೧೦೯ ಮಿಲಿಯವಿದೆ, ಇದು ಜಪಾನಿನ ಜನಸಂಖ್ಯೆಗಿಂತಲೂ ಹೆಚ್ಚು. ಪಟ್ಟಣ ಪ್ರದೇಶಗಳ ಜನಸಂಖ್ಯೆಯಲ್ಲಿ ಶೇಕಡಾ ೫೫.೮೨ ಭಾಗ, ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯ ನಗರಗಳಲ್ಲಿ ವಾಸಿಸುತ್ತಿದ್ದಾರೆ.

ದೇಶದ ಒಂಭತ್ತು ಬೃಹತ್ ನಗರಗಳೆಂದರೆ, ಕಲ್ಕತ್ತ (೭ ಮಿಲಿಯ), ಬೃಹತ್ ಬೊಂಬಾಯಿ (೬ ಮಿಲಿಯ), ದೆಹಲಿ (೩.೬ ಮಿಲಿಯ), ಮದರಾಸು (೩.೨ ಮಿಲಿಯ), ಹೈದರಾಬಾದು (೧.೮ ಮಿಲಿಯ), ಬೆಂಗಳೂರು (೧.೭ ಮಿಲಿಯ), ಅಹಮದಾಬಾದು (೧.೭ ಮಿಲಿಯ), ಕಾನ್ಪುರ (೧.೩ ಮಿಲಿಯ) ಮತ್ತು ಪೂನಾ (೧.೧ ಮಿಲಿಯ).

ಕಲ್ಕತ್ತೆಯು ಜಗತ್ತಿನಲ್ಲಿ ಏಳನೆಯ ಬೃಹತ್ ಜನ ಬಾಹುಳ್ಯವುಳ್ಳ ನಗರವಾಗಿದೆ. ಬೊಂಬಾಯಿ ಹನ್ನೆರಡನೆಯದು. (೧೧.೫ ಮಿಲಿಯ ಜನಸಂಖ್ಯೆಯ ನ್ಯೂಯಾರ್ಕ್ ನಗರವು ವಿಶ್ವದ ಅತ್ಯಂತ ಬೃಹತ್ ನಗರ).

ಜನಸಂಖ್ಯೆಯ ತಡೆಗೆ ಭಾರತವು ಧೋರಣೆಯೊಂದನ್ನು ರೂಪಿಸಿದೆ. ನಾಗರಿಕರಿಗೆ ಉತ್ತಮ ಭವಿಷ್ಯ ಮತ್ತು ಸವಲತ್ತುಗಳನ್ನು ಕಲ್ಪಿಸುವುದೇ ಇದರ ಉದ್ದೇಶ. ಕುಟುಂಬಯೋಜನೆಯ ಬಗ್ಗೆ ಜನರಲ್ಲಿ ಅರಿವು ಹೆಚ್ಚುತ್ತಿದ್ದರೂ, ಜನಸಂಖ್ಯೆ ಏರಿಕೆಯ ಪ್ರಮಾಣವು ಕಡಿಮೆಯಾಗಿಲ್ಲವೆಂದು ಕಳೆದ ದಶಕದ ಅನುಭವದಿಂದ ತಿಳಿದುಬಂದಿದೆ. ಆದರೆ, ಮುಂಬರುವ ವರ್ಷಗಳಲ್ಲಿ ಜನಸಂಖ್ಯಾ ಏರಿಕೆಯನ್ನು ತಡೆಗಟ್ಟುವ ಆಶೆಯಿದೆ.

——

(೧ನೇ ಪುಟದಿಂದ)

೧೯೭೩

ಜನವರಿ ೩೦ – ಗಾಂಧಿ ಜೀವನ ಮತ್ತು ಕಾರ್ಯಗಳಿಗೆ ಸಂಬಂಧಿಸಿದ ಕಾಲಕೋಶ ಭೂಗರ್ಭಕ್ಕೆ.

ಫೆಬ್ರುವರಿ ೫ – ಪ್ರಧಾನಿಗೆ ಎಫ್. ಎ. ಓ. ಪದಕ ಪ್ರಶಸ್ತಿ.

ಏಪ್ರಿಲ್ ೨೪ - ಸಂವಿಧಾನ ತಿದ್ದುಪಡಿ ಮಾಡುವ ಹಕ್ಕು ಸಂಸತ್ತಿಗಿದೆಯೆಂದು ಸರ್ವೋಚ್ಚ ನ್ಯಾಯಾಲಯದ ತೀರ್ಪು.

೧೯೭೪

ಜನವರಿ ೨೮ – ಭಾರತ, ಶ್ರೀಲಂಕಾ ನಡುವೆ ಭಾರತ ಸಂಜಾತರನ್ನು ಕುರಿತ ಒಪ್ಪಂದ.

ಫೆಬ್ರುವರಿ ೨ – ಸಾಗರ ಸಾಮ್ರಾಟ್‌ನಿಂದ ಮುಂಬಯಿ ಕರಾವಳಿಯಲ್ಲಿ ಕಾರ್ಯಾರಂಭ.

೧೯೭೫

ಜನವರಿ ೧೦ – ಪ್ರಧಾನಿಯಿಂದ ನಾಗಪುರದಲ್ಲಿ ವಿಶ್ವ ಹಿಂದೀ ಸಮ್ಮೇಳನ ಉದ್ಘಾಟನೆ.

ಏಪ್ರಿಲ್ ೧೦ – ಮುಂಬಯಿ ಕರಾವಳಿಯಲ್ಲಿ ಪ್ರಧಾನಿಯಿಂದ ನಾಲ್ಕನೇ ತೈಲ ಬಾವಿ ಕೊರೆತ ಆರಂಭ.

ಏಪ್ರಿಲ್ ೧೯ – 'ಆರ್ಯಭಟ' ಉಡಾವಣೆ.

ಏಪ್ರಿಲ್ ೨೬ - ಭಾರತದ ೨೨ನೇ ರಾಜ್ಯವಾಗಿ ಸಿಕ್ಕಿಂ ಸೇರ್ಪಡೆ.

ಜೂನ್ ೧೨ – ಅಲಹಾಬಾದ್ ಶ್ರೇಷ್ಠ ನ್ಯಾಯಾಲಯದಿಂದ ಪ್ರಧಾನಿ ಆಯ್ಕೆ ಅನೂರ್ಜಿತ ಆಜ್ಞೆ.

ಜೂನ್ ೨೫ – ದೇಶದಲ್ಲಿ ಆಂತರಿಕ ತುರ್ತುಸ್ಥಿತಿ ಘೋಷಣೆ.

ಜುಲೈ ೧ – ಪ್ರಧಾನಿಯಿಂದ ಪ್ರಸಾರ ಭಾಷಣದಲ್ಲಿ ೨೦ಅಂಶಗಳ ಆರ್ಥಿಕ ಕಾರ್ಯಕ್ರಮ ಘೋಷಣೆ.

ಜುಲೈ ೪ - ೨೧ ಉಗ್ರಗಾಮಿ ಸಂಸ್ಥೆಗಳ ಬಹಿಷ್ಕಾರ.

ಜುಲೈ ೨೩ - ತುರ್ತುಸ್ಥಿತಿ ಘೋಷಣೆಗೆ ಲೋಕಸಭೆ ಅಂಗೀಕಾರ.

ಆಗಸ್ಟ್ ೧ – ಪ್ರಧಾನಿಯಿಂದ ಉಪಗ್ರಹ ಟಿ ವಿ ಪ್ರಸಾರ ಉದ್ಘಾಟನೆ.

ಸೆಪ್ಟಂಬರ್ ೭–ಅಸ್ವಸ್ಥ ವಿನೋಬಾಭಾವೆ ಭೇಟಿಯಾಗಲು ಪೌನಾರಿಗೆ ಪ್ರಧಾನಿ ಭೇಟಿ.

ಅಕ್ಟೋಬರ್ ೨೪ – ಜೀತದಾಳು ಪದ್ಧತಿ ರದ್ದುಮಾಡಿ ರಾಷ್ಟ್ರಪತಿ ಆಜ್ಞೆ.

ಡಿಸೆಂಬರ್ ೮ – ಪತ್ರಿಕೆಗಳ ಮೇಲೆ ನಿಯಂತ್ರಣ ವಿಧಿಸುವ ಮೂರು ಆಜ್ಞೆಗಳಿಗೆ ರಾಷ್ಟ್ರಪತಿ ಅಂಕಿತ.

ಡಿಸೆಂಬರ್ ೧೯ – ಗೋದಾವರಿ ನೀರು ಹಂಚಿಕೆ ಬಗ್ಗೆ ಒಪ್ಪಂದ.

ಡಿಸೆಂಬರ್ ೨೩ – ರಾಷ್ಟ್ರೀಯ ಭೌತಸಂಶೋಧನಾಲಯದ ಬೆಳ್ಳಿಹಬ್ಬ ಉದ್ಘಾಟನೆ.

ಡಿಸೆಂಬರ್ ೨೮ – ಚಂಡೀಗಢದಲ್ಲಿ ೭೫ನೇ ಕಾಂಗ್ರೆಸ್ ಸಮ್ಮೇಳನ ಆರಂಭ.

೧೯೭೬

ಜನವರಿ ೩ – ವಾಲ್ಟೇರ್‌ನಲ್ಲಿ ಪ್ರಧಾನಿಯಿಂದ ಭಾರತೀಯ ವಿಜ್ಞಾನ ಕಾಂಗ್ರೆಸ್ ಉದ್ದೇಶಿಸಿ ಭಾಷಣ.

ಜನವರಿ ೪ – ಪಗ್ವಾಷ್ ಸಮ್ಮೇಳನದಲ್ಲಿ ಪ್ರಧಾನಿ ಭಾಷಣ,

ಜನವರಿ ೧೨ – ನೈರೇರೆಗೆ ಜವಾಹರಲಾಲ್ ನೆಹರೂ ಪ್ರಶಸ್ತಿ ಪ್ರದಾನ.

—೦—

★ ಭಾರತದ ಮಹಿಳಾ ಪೋಲೀಸರು ★

ಮಹಿಳೆಯರನ್ನು ಪೋಲೀಸ್‌ದಳಕ್ಕೆ ಸೇರಿಸಿಕೊಳ್ಳುವ ಬಗ್ಗೆ ಹಿಂದೆ ಸಂಕೋಚವಿತ್ತು. ಈಗ ಅದರ ಸದ್ದಡಗಿದೆ. ಭಾರತೀಯ ಪೋಲೀಸ್ ಸೇವೆಗೆ ಮೂವರು ಮಹಿಳೆಯರ ಸೇರ್ಪಡೆ ಮತ್ತು ಇತರ ಪುರುಷರೊಡನೆ ಅವರು ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ ನಂತರ ಕೊಂಕು ನುಡಿಗಳ ಸೊಲ್ಲಡಗಿತು. ಅದಲ್ಲದೆ ಪೋಲೀಸ್ ಚಟುವಟಿಕೆಗಳು ಕೆಲವೊಂದು ಕ್ಷೇತ್ರಗಳಲ್ಲಿ ಮೂಲ ಬದಲಾವಣೆ ಹೊಂದಿರುವುದರಿಂದ ಹಲವಾರು ರಾಜ್ಯಗಳಲ್ಲಿ ಮಹಿಳೆಯರು ಪರಿಣಾಮಕಾರಿಯಾಗಿ ತಮ್ಮ ಅಸ್ತಿತ್ವವನ್ನು ಪ್ರತಿಪಾದಿಸಿದ್ದಾರೆ.

ತ್ವರಿತಗತಿಯಲ್ಲಿ ಬದಲಾಗುತ್ತಿರುವ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳು ಪೋಲೀಸ್ ಸಮಸ್ಯೆಗೆ ಹೊಸ ರೂಪಕೊಟ್ಟಿದೆ. ಹಲವಾರು ರಾಜ್ಯಗಳಲ್ಲಿ ರಾಜಕೀಯ ಚಳುವಳಿಗಳು, 'ಬಂದ್' ಗಳು. ಮತೀಯ ಗಲಭೆಗಳು ಮತ್ತು ವಿದ್ಯಾರ್ಥಿ ಚಳುವಳಿಗಳಲ್ಲಿ ಭಾಗವಹಿಸುವ ಮಹಿಳೆಯರ ಸಂಖ್ಯೆ ದಿನೆದಿನೇ ಏರುತ್ತಿದೆ. ಈ ಮಹಿಳೆಯರು ಪೋಲಿಸರಿಗೊಂದು ತಲೆನೋವು. ಶಿಸ್ತನ್ನು ಜಾರಿಗೆ ತರುವಾಗ ಮಹಿಳೆಯರೊಂದಿಗೆ ವ್ಯವಹರಿಸುವ ಸಮಸ್ಯೆಯೇ ಈ ತಲೆನೋವಿಗೆ ಕಾರಣ.

ಸರ್ಕಾರವು ರಚಿಸಿದ ಮಕ್ಕಳ ಕಾಯ್ದೆ, ವೇಶ್ಯಾವೃತ್ತಿ ನಿರೋಧಕ ಕಾಯ್ದೆ ಮುಂತಾದ ಸಾಮಾಜಿಕ ಕಾನೂನುಗಳು ಈ ಸಮಸ್ಯೆಯನ್ನು ಮತ್ತಷ್ಟು ಕ್ಲಿಷ್ಟಗೊಳಿಸಿದವು. ಶೈಕ್ಷಣಿಕ ಪ್ರಗತಿ, ರಾಜಕೀಯ ಪ್ರಜ್ಞೆ ಬೆಳವಣಿಗೆಗಳು ಮಹಿಳೆಯರನ್ನು ಸಾರ್ವಜನಿಕ ಚಳುವಳಿಗಳತ್ತ ಎಳೆದಿವೆ. ಇವೆಲ್ಲ ಕಾರಣಗಳು ಮಹಿಳಾ ಪೋಲಿಸರ ಅಗತ್ಯತೆಯನ್ನು ಮನದಟ್ಟುಮಾಡಿಕೊಟ್ಟವು.

ಇಂದು,ದೇಶದ ಬಹುತೇಕ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಹಿಳಾ ಪೋಲೀಸ್ ದಳಗಳಿವೆ. ರಾಜ್ಯಗಳಲ್ಲಿ ಮಹಾರಾಷ್ಟ್ರ ಮತ್ತು ಗುಜರಾತ್‌ಗಳಿಗೆ ಮೊದಲ ಎರಡು ಸ್ಥಾನಗಳು. ಕಳೆದ ಕೆಲವು ವರ್ಷಗಳಲ್ಲಿ ಮಹಿಳಾ ಪೋಲಿಸರ ಉಪಯುಕ್ತತೆ ಮತ್ತು ಸ್ಥಳೀಯ ಅವಶ್ಯಕತೆಗಳಿಂದಾಗಿ ಮಹಿಳಾ ಪೋಲಿಸರ ಸಂಖ್ಯೆ ಗಮನಾರ್ಹವಾಗಿ ಏರಿದೆ.

ತತ್ವತಃ ಮಹಿಳಾ ಪೋಲೀಸರಿಗೆ ಅವರ ಪುರುಷಸಹೋದ್ಯೋಗಿಗಳಷ್ಟೇ ಕಾರ್ಯಭಾರವನ್ನು ಹೊರಿಸಲಾಗಿದೆ. ಕಾನೂನಿನಲ್ಲಿಯೂ ಸಹ ಪುರುಷ ಮತ್ತು ಮಹಿಳಾ ಪೋಲಿಸರ ಮಧ್ಯೆ ಯಾವುದೇ ಭೇದಭಾವವಿಲ್ಲ. ಆದರೆ, ವಾಸ್ತವಿಕವಾಗಿ ಮಹಿಳಾ ಪೋಲೀಸರನ್ನು ಕೆಲವೊಂದು ವಿಶೇಷ ಮತ್ತು ಆಯ್ದ ಕಾರ್ಯಗಳಿಗಾಗಿ ಮಾತ್ರ ಬಳಸಿಕೊಳ್ಳಲಾಗುತ್ತಿದೆ. ಮಹಿಳೆಯರು ಮತ್ತು ಮಕ್ಕಳ ಅಪರಾಧಗಳ ತನಿಖೆಗೆ ನೆರವು ನೀಡುವುದು, ತಪ್ಪಿಸಿಕೊಂಡ ಹೆಂಗಸರು ಮಕ್ಕಳನ್ನು ಹುಡುಕುವುದು, ವೇಶ್ಯಾವಾಟಿಕೆಗಳಿಂದ ಅಪ್ರಾಪ್ತವಯಸ್ಸಿನ ಹೆಣ್ಣು ಮಕ್ಕಳನ್ನು ಬಿಡಿಸುವುದು, ಬಾಲಾಪರಾಧಗಳ ತನಿಖೆ, ಮಾಹಿತಿ ಸಂಗ್ರಹಣೆ ಮುಂತಾದ ಕಾರ್ಯಗಳನ್ನು ಅವರಿಗೆ ವಹಿಸಲಾಗುತ್ತಿದೆ. ಮಹಿಳಾ ಸಭೆಗಳು, ಸತ್ಯಾಗ್ರಹ, ಮೆರವಣಿಗೆಗಳು, ಮೇಳ ಮತ್ತು ಜಾತ್ರೆಗಳಲ್ಲಿ ಕಾನೂನು ಮತ್ತು ಶಿಸ್ತು ಪರಿಪಾಲನಾ ಕಾರ್ಯವನ್ನೂ ಸಹ ಮಹಿಳಾ ಪೋಲೀಸರು ನಿರ್ವಹಿಸುತ್ತಿದ್ದಾರೆ.

ಮಹಿಳಾ ಪೋಲೀಸರನ್ನು ನೇಮಕ ಮಾಡುವಾಗ ಎಲ್ಲಾ ರಾಜ್ಯಗಳಲ್ಲೂ ಪೋಲೀಸ್ ದಳದ ಸಾಮಾನ್ಯ ನಿಯಮಗಳನ್ನು ಅನುಸರಿಸಲಾಗುತ್ತಿದೆ. ಇನ್ಸ್‌ಪೆಕ್ಟರ್ ಅಥವಾ ಮೇಲ್ದರ್ಜೆಯ ಹುದ್ದೆಗಳಿಗೆ ಮಾತ್ರ ಸಮಾಜಸೇವೆಯ ಅನುಭವ ಅಥವಾ ಹೆಚ್ಚಿನ ಸಮಾಜ ವಿಜ್ಞಾನ ಶಿಕ್ಷಣಾರ್ಹತೆಗಳಿಗೆ ಆದ್ಯತೆ ನೀಡಲಾಗುವುದು.

ಮಹಿಳಾ ಪೋಲೀಸರಲ್ಲಿ ಹೆಚ್ಚಿನ ಸಂಖ್ಯೆ ಕಾನ್‌ಸ್ಟೇಬಲ್‌ಗಳು. ಮಹಿಳಾ ಪೋಲೀಸ್ ಪೇದೆಗಳ ಸಾಂಸ್ಕೃತಿಕ ಮತ್ತು ಸಾಮಾಜಿಕ ಮಟ್ಟ ಅಷ್ಟೇನೂ ಉಚ್ಚಮಟ್ಟದ್ದಲ್ಲವೆಂದು ಸಾಮಾನ್ಯ ಸಮೀಕ್ಷೆಯೊಂದರಿಂದ ತಿಳಿದು ಬಂದಿದೆ. ಸಾಮಾಜಿಕ ನ್ಯಾಯದ ಅನುಷ್ಠಾನದಲ್ಲಿ ಬೆಳೆಯುತ್ತಿರುವ ಪೋಲೀಸರ ಪಾತ್ರ ಮತ್ತು ಬದಲಾಗುತ್ತಿರುವ ಪೋಲಿಸರ ಹೊಣೆಗಳನ್ನು ಗಮನಿಸಿದಲ್ಲಿ ಕನಿಷ್ಠ ವಿದ್ಯಾರ್ಹತೆಯ ಮಹಿಳೆಯರ ನೇಮಕದಿಂದ ದೇಶದಲ್ಲಿ ಮಹಿಳಾ ಪೋಲೀಸ್ ದಳದ ಉದ್ದೇಶಗಳು ಈಡೇರಲಾರವೆಂದು ಹೇಳಬಹುದು.

ಕಾನೂನು ಜಾರಿಗೆ ತರುವಲ್ಲಿ ಮಹಿಳಾ ಪೋಲೀಸರಿಗೆ ವಿಶಿಷ್ಟ ಪಾತ್ರವಿದೆ. ಆದ್ದರಿಂದ ಮಹಿಳಾ ಪೋಲೀಸ್‌ದಳ ಸದೃಢವಾಗಿ ಬೆಳೆಯುವುದು ಅಗತ್ಯ. ಅವಶ್ಯವಿರುವ ಶಿಕ್ಷಣ ಮತ್ತು ಸಾಮಾಜಿಕ ಹಿನ್ನೆಲೆಯುಳ್ಳ ಮಹಿಳೆಯರನ್ನು ಮಹಿಳಾ ಪೋಲೀಸ್ ದಳಕ್ಕೆ ಆಕರ್ಷಿಸುವ ಸಲುವಾಗಿ ಕ್ರಮಗಳನ್ನು ಕೈಗೊಳ್ಳಬೇಕು. ಮಹಿಳಾ ಪೋಲೀಸರಿಗೆ ಅವರ ಸಾಮಾಜಿಕ ಹೊಣೆ ಮತ್ತು ಪಾತ್ರಗಳ ಬಗ್ಗೆ ಅರಿವುಮಾಡಿಕೊಡುವುದು ತರಬೇತಿ ಕಾರ್ಯಕ್ರಮದ ಅಂಶವಾಗಬೇಕು.

“ವಾರ್ತಾವರದಿ”ಯೆಂದರೇನು?

(What is News Reporting?)

(ಶ್ರೀ। ವೈ. ಮಹಾಲಿಂಗ ಭಟ್, ಬಿ. ಎ.)

ವ್ಯಕ್ತಿಗೂ, ಪತ್ರಿಕೆಗೂ ವಿಶೇಷ ವ್ಯತ್ಯಾಸವೇನೂ ಇಲ್ಲ. ಮೊದಲನೆಯದು ಮಾತನಾಡುವುದಾದರೆ, ಎರಡನೆಯದು ಮಾತನಾಡಿಸುವುದು—ಅಷ್ಟೆ.

‘ವಾರ್ತೆ’ಯೆಂದರೇನು?

‘ವಾರ್ತೆ’, ‘ಸುದ್ದಿ’ಗಳೆನ್ನುತ್ತೇವೆ ಹೊರತು, ಇವುಗಳ ಸ್ವಭಾವವೇನು, ಎಂತಿರಬೇಕು, ವಿಷಯಸಾಧನಗಳೇನು—ಇತ್ಯಾದಿ ವಿಚಾರಗಳ ಕುರಿತು ಹೆಚ್ಚಿನವರು ಗಮನಹರಿಯಿಸುವುದು ವಿರಳ. ಅಂದಮಾತ್ರಕ್ಕೆ ಈ ಕುರಿತು ವಿಶೇಷ ಚಿಂತನೆ ನಡೆಸುವುದು ಅಗತ್ಯವಿದೆ. ‘ವಾರ್ತೆ’ ಅಥವಾ ‘ಸುದ್ದಿ’ಯೆಂಬುದಕ್ಕೆ ಹಲವರು ವಿವಿಧ ವಿವರಣೆಗಳನ್ನು ಕೊಟ್ಟಿರುತ್ತಾರೆ. “ಇತ್ತೀಚೆಗಿನ ಘಟನೆ, ಅಥವಾ ಪರಿಸ್ಥಿತಿಯ ಮೇಲಿನ ವರದಿ,” ಎಂದು ಒಬ್ಬರೆಂದರೆ, ಇನ್ನೊಬ್ಬರು “ಪತ್ರಿಕೆಯಲ್ಲಿ ಪ್ರಕಟಗೊಂಡ ಘಟನೆಗಳ ವರದಿ”–ಎನ್ನುತ್ತಾರೆ. ನಿಜವಾಗಿ ನೋಡುವುದಿದ್ದರೆ ‘ವಾರ್ತೆ’ಯೆಂಬ ಪದಕ್ಕೆ –ಮಾನವ ಚಲನವಲನಗಳಿಗೆ ಸಂಬಂಧಪಟ್ಟು ಇಷ್ಟರವರೆಗೆ ಅಪ್ರಕಟಿತವಾಗಿದ್ದ ಕೆಲವೊಂದು ಹಿತಾಸಕ್ತಿ ಘಟನೆಗಳನ್ನು ಸಾರ್ವಜನಿಕರಿಗೆ ತಿಳಿಸುವ, ಅಥವಾ ಮನೋರಂಜನವನ್ನುಂಟುಮಾಡುವ ರೀತಿಯಲ್ಲಿ ವರದಿಮಾಡುವುದು — ಎನ್ನುವ ವಿವರಣಾತ್ಮಕ ಅರ್ಥವನ್ನು ಕೊಡಬಹುದು. ಹೀಗಿದ್ದರೂ, ಇದನ್ನು ಒಂದು ಪರಿಪೂರ್ಣವಾದುದೆಂದು ಹೇಳಲು ಬರುವಂತಿಲ್ಲ. ಯಾಕೆಂದರೆ, ಒಬ್ಬನಿಗೆ ಹಿಡಿಸಿದ ಸುದ್ದಿ ಇನ್ನೊಬ್ಬನಿಗೆ ಪಥ್ಯವಾಗುವಂತಿಲ್ಲ. ಉದಾಹರಣೆಗೆ-ಯುವಕರಿಗೆ ಹಿಡಿಸಿದುದು ಪ್ರಾಯಹೋದವರಿಗೆ ಸೇರದು. ಇದೇ ರೀತಿ ವಿದ್ಯಾವಂತರಿಗೆ ರುಚಿಸುವುದು ನಿರಕ್ಷರಕುಕ್ಷಿಗಳಿಗೆ ನಿರರ್ಥಕವೆನಿಸುವುದು! ಆದರೂ, ಮೇಲಿನ ಉಲ್ಲೇಖವು ಸರ್ವಸಾಮಾನ್ಯವಾಗಿ ಸಮರ್ಪಕವಾಗಬಹುದೆಂಬ ನೆಲೆಯಲ್ಲಿ ಮಾತ್ರ ಕೊಡಲಾಗಿದೆ.

ವಾರ್ತೆಯ ವೈಶಿಷ್ಟ್ಯ

ವಾರ್ತೆಯೆಂದರೆ ಅದರಲ್ಲಿ ಕೆಲವೊಂದು ಗುಣವೈಶಿಷ್ಟ್ಯಗಳು ಅಡಕವಾಗಿರಬೇಕು. ಮುಖ್ಯವಾಗಿ ಇದರಲ್ಲಿ — ಅವಿಳಂಬತೆ (Immediacy), ಸಾಮೀಪ್ಯತೆ (Proximity), ಪರಿಣಾಮ (Consequence, ಪ್ರಾಮುಖ್ಯತೆ (Prominence), ಕಾತರತೆ (Suspence), ವಿಲಕ್ಷಣತೆ (Oddity), ಘರ್ಷಣೆ (Conflict), ಶೃಂಗಾರ (Sex), ಉದ್ವೇಗಪ್ರೇರಕತೆ (Emotions) ಮತ್ತು ಪ್ರಗತಿ(Progress) ಎಂಬ ವಸ್ತುವಿಶೇಷತೆಗಳು ತನ್ಮಯಗೊಂಡಿರಬೇಕು.

ಜರೂರತನವಿಲ್ಲದ ವಾರ್ತೆ ಓದುಗರಲ್ಲಿ ನೀರಸ ಮನೋವೃತ್ತಿಯನ್ನು ಹುಟ್ಟಿಸುವುದು. ಪತ್ರಿಕೆಗಳಲ್ಲಿ ಆದಷ್ಟು ಹೊಸಹೊಸ ಸುದ್ದಿಗಳು ತುಂಬಿದ್ದರೆ ಜನತೆಯ ವಾಚನಾಭಿರುಚಿಯು ಕೆರಳುವುದಲ್ಲದೆ, ಅಂಥವುಗಳು ಸುಲಭವಾಗಿ ಜನಾದರಣೀಯವಾಗುವುದು. ಈ ದೃಷ್ಟಿಯಿಂದ ಪತ್ರಿಕೆಗಳ ವಾರ್ತಾ ಸಂಗ್ರಹಗಾರರು ತಮ್ಮ ಕಾರ್ಯಗಳಲ್ಲಿ ವಿಶೇಷ ಮೇಹನತ್ತು ವಹಿಸಿ ವರದಿಮಾಡಬೇಕು. ಮತ್ತು ವಾಚಕಲೋಕದ ದೃಷ್ಟಿಗೆ ಬೀಳದ ಹಳತು ವಿಷಯಗಳನ್ನು ಸಹ ಹೊಸತನದ ಬಣ್ಣದಿಂದ ಮೆರುಗುಗೊಳಿಸಿ ಸಾರ್ವಜನಿಕರ ಮುಂದಿಡಬಹುದು. ಇದರಿಂದಾಗಿ, ಆವಶ್ಯಕತೆಯ ನಾವೀನ್ಯತೆಗೆ ಚ್ಯುತಿಬರುವಂತಿಲ್ಲ. ಅಂತೂ, ವಾರ್ತೆಯನ್ನು–“ಅವಸರದ ಇತಿಹಾಸ”ವೆಂದು ತಿಳಿದುಕೊಂಡರೆ ಸರಿ.

ಎರಡನೆಯದೆಂದರೆ — ವಾರ್ತೆಯಲ್ಲಿರಬೇಕಾದ ಸಾಮೀಪ್ಯ ದೃಷ್ಟಿಭಾವ. ಪ್ರತಿಯೊಬ್ಬನೂ ಇತರ ಯಾವುದೇ ವಿಷಯಗಳಿಗಿಂತ ತನ್ನತನದ ಮೇಲೆ ಹೆಚ್ಚಿನ ಆಸಕ್ತಿಪೂರಿತವಾಗಿರುತ್ತಾನೆ. ಅನಂತರ–ತನ್ನ ವೃತ್ತಿ, ಮನೆ, ಸ್ನೇಹಿತರು, ಬಂಧುಬಾಂಧವರು–ಇತ್ಯಾದಿ ವಿಚಾರಗಳ ಮೇಲೆ ಮನಸ್ಸು ಹರಿಸುತ್ತಾನೆ ಮಾತ್ರ! ಉದಾಹರಣೆಗಾಗಿ – ಅಲ್ಜೀರಿಯಾದಲ್ಲಿ ಫ್ರೆಂಚ್ ಸೇನೆ ಐದುನೂರು ಜನ ಬಂಡಾಯಗಾರರ ಕಗ್ಗೊಲೆಗೈದರೆಂಬ ಸುದ್ದಿಗಿಂತ ನೆರೆಮನೆಯ ತರುಣಿಯೊಬ್ಬಳು ಭಗ್ನ ಪ್ರಣಯ ಜೀವನದಿಂದ ಬೇಸರಿಸಿ ಆತ್ಮಹತ್ಯೆಗೈದಳೆಂಬ ವಾರ್ತೆ ಓದುಗರಿಗೆ ಹೆಚ್ಚಿನ ಆಸಕ್ತಿಯನ್ನುಂಟುಮಾಡುವುದು! ಇನ್ನು–ಓದುಗನ ಮಗಳಿಗೆ ಶಾಲೆಯ ಸಂಗೀತಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಸಿಕ್ಕಿತೆಂಬ ವಾರ್ತೆ ಪತ್ರಿಕೆಯಲ್ಲಿ ಪ್ರಕಟವಾಯಿತೆಂದರೆ ಅದು ಇನ್ನಷ್ಟು ಹಿಡಿಸುವುದು.

ಸಾಮೀಪ್ಯತೆಗೆ ತೀರ ಹೊಂದಿಕೊಂಡಿರುವ ಮೂರನೆಯ ವಿಷಯವೆಂದರೆ–ಪರಿಣಾಮ ದೃಷ್ಟಿ. ಸಾರ್ವಜನಿಕ ಹಿತಾಸಕ್ತಿಗಳಿಗೆ ಸಂಬಂಧಪಟ್ಟ ಕೆಲವೊಂದು ಘಟಿತ ವಿಚಾರಗಳು ಯಾವ ಪರಿಣಾಮದಲ್ಲಿ ಅಂತಿಮಗೊಳ್ಳಬಹುದೆಂಬುದನ್ನು ಸುದ್ದಿಗಾರರು ಸರಿಯಾಗಿ ಮುನ್ಸೂಚನೆ ಕೊಡಬೇಕು. ಉದಾಹರಣೆಗಾಗಿ–ಕೇಂದ್ರ ಅರ್ಥಸಚಿವರು ಸಕ್ಕರೆ, ಸೀಮೆಎಣ್ಣೆ ಅಥವಾ ಗಿರಣಿಬಟ್ಟೆಗಳ ಮೇಲೆ ಶೇಕಡ ೨೫ರಷ್ಟು ಅಧಿಕ ತೆರಿಗೆ ಹೇರಲು ಸಂಕಲ್ಪಿಸಿದರೆಂದು ಊಹಿಸೋಣ. ಪತ್ರಿಕೆಗಳ ವಾರ್ತಾ ಸಂಗ್ರಹಗಾರರು –ಅರ್ಥಸಚಿವರ ಈ ತೆರನಾದ ತೆರಿಗಾ ಧೋರಣೆಯಿಂದ ಸಾರ್ವಜನಿಕ ವಲಯದಲ್ಲಿ ಯಾವ ತರದ ಪ್ರತಿಕ್ರಿಯೆಗಳೇಳಬಹುದು, ವಾಣಿಜ್ಯ ಕ್ಷೇತ್ರಗಳಲ್ಲಿ ಎಂಥ ಮಾರ್ಪಾಡುಗಳು ತಲೆಯೆತ್ತಬಹುದು, ದೇಶದ ಆರ್ಥಿಕಮಟ್ಟದಲ್ಲಿ ಯಾವತರದ ಬದಲಾಯಿತ ಪರಿಸ್ಥಿತಿಗಳು ಕಾಣಿಸಿಕೊಳ್ಳಬಹುದು–ಇತ್ಯಾದಿ ಪರಿಣಾಮ ಪ್ರಸಂಗಗಳ ಮುನ್ಸೂಚನಾ ವರದಿಕೊಡುವುದು ಅತ್ಯಾವಶ್ಯಕವಾಗಿದೆ.

ವಾರ್ತೆಯಲ್ಲಿರಬೇಕಾದ ನಾಲ್ಕನೆಯ ಗುಣವೆಂದರೆ–ಪ್ರಾಮುಖ್ಯತೆ. ವಾರ್ತಾಕ್ಷೇತ್ರದಲ್ಲಿ ಇದರ ಸ್ಥಾನವಾದರೋ ತೀರ ಅಲ್ಪಾವಧಿಯದಿದ್ದು ಜನಮನವನ್ನು ವಿಶೇಷವಾಗಿ ಸೆಳೆದುಕೊಳ್ಳುವಂತಿದೆ. ಅಂದರೆ ಚುನಾವಣಾಪ್ರಚಾರ, ಫಲಿತಾಂಶ, ನಾಯಕರನ್ನು ಆರಿಸಿಕೊಳ್ಳುವುದರಲ್ಲಿ ಶಾಸನಸಭಾಸದಸ್ಯರಲ್ಲುಂಟಾದ ಭಿನ್ನಾಭಿಪ್ರಾಯ, ಮಧ್ಯಸ್ಥಿಕೆಗಾರರೊಬ್ಬರ ಪರಿಶ್ರಮದಿಂದ ಇದು ನಿವಾರಿಸಲ್ಪಟ್ಟ ಬಗೆ; ಅಥವಾ ನಿಶ್ಶಸ್ತ್ರೀಕರಣದ ಕುರಿತಾದ ಮಾತುಕತೆ, ಉಚ್ಚಮಟ್ಟದ ಸಭೆ ಕರೆಯುವುದರ ಕುರಿತಾಗಿ ಶಕ್ತಿರಾಷ್ಟ್ರಗಳೊಳಗಿನ ಭಿನ್ನಾಭಿಪ್ರಾಯ, ಇಮ್ರ್ಯಾನಾಗಿ ಪಂಗಡದವರನ್ನು ಗಲ್ಲಿಗೇರಿಸಿದುದರ ವಿರುದ್ಧವಾಗಿ ತಲೆಯೆತ್ತಿದ ಚಳುವಳಿ—ಇತ್ಯಾದಿ ವಿಚಾರಗಳನ್ನು ತಿಳಿದುಕೊಳ್ಳುವುದಕ್ಕಾಗಿ ಜನರ ಮನಸ್ಸು ಕುತೂಹಲಗೊಂಡಿರುತ್ತದೆ, ಆದರೆ, ಈ ಅವಧಿಯು ಹೆಚ್ಚುಕಡಮೆ ಅಲ್ಪಾವಧಿಯದಾಗಿದ್ದು–ದೀರ್ಘಕಾಲದ ವರೆಗೆ ಜೀವಂತವಾಗಿರಲು ಸಾಧ್ಯವಿಲ್ಲ. ಈ ಅವಧಿಯ ನಂತರ ಮೇಲಿನ ವಿಚಾರಗಳು ತಮ್ಮ ಪ್ರಾಧಾನ್ಯತೆಗಳನ್ನು ಕಳೆದುಕೊಳ್ಳುತ್ತವೆ. ಅಂದಮೇಲೆ, ಪತ್ರಿಕೆಗಳು ಈ ತೆರನಾದ ಮುಖ್ಯ ಘಟನೆಗಳ ಮೇಲೆ ಹೆಚ್ಚಿನ ನಿಗಾ ಕೊಡಲೇಬೇಕಾಗುತ್ತದೆ.

ಐದನೆಯದಾಗಿ–ಕಾತರತೆ. ಪತ್ರಿಕೆಗಳು ಒಂದು ಘಟನೆಯ ಮೇಲೆ ವರದಿಮಾಡುವಾಗ ನಾಳೆಯ, ಅಥವಾ ಮುಂದಿನ ಪರಿಸ್ಥಿತಿ ಏನಾಗಬಹುದೋ, ಯಾವ ರೀತಿಯಾಗಬಹುದೋ ಎಂಬ ಕಾತರತೆಯನ್ನು ಓದುಗರಲ್ಲಿ ಕೆರಳಿಸುವಂತಿರಬೇಕು. ಇದರಿಂದಾಗಿ ವಾರ್ತಾ ಮಹತ್ವವು ಇನ್ನಷ್ಟು ಪ್ರಜ್ವಲಿಸುವಂತಾಗುತ್ತದೆ.

ವಾಸ್ತವತೆಯ ನೈಜ ಚಿತ್ರಣಗಳು ಕೆಲವೊಮ್ಮೆ ಜನಮನವನ್ನು ವಿಶೇಷ ಸೆಳೆಯುವುದಿಲ್ಲ. ಮಾಮೂಲಿನವುಗಳೆಂದು ಜನರು ಸುಮ್ಮಗಿದ್ದುಬಿಡುತ್ತಾರೆ. ಆದರೆ, ಏನಾದರೊಂದು ವಿಲಕ್ಷಣ ಘಟನೆಗಳು ಮೇಳೈಸಿ ಬಂದರೆ ಅವುಗಳತ್ತ ಕುತೂಹಲ ಮನಸ್ಕರಾಗಿ ದೃಷ್ಟಿಹರಿಯಿಸುತ್ತಾರೆ. ಉದಾಹರಣೆಗಾಗಿ–ಕಪ್ಪೆ ಸರ್ಪವೊಂದನ್ನು ನುಂಗಿತು, ಹೆಂಗಸೊಬ್ಬಳು ಮಂಗವೊಂದನ್ನು ಪ್ರಸವಿಸಿದಳು, ವಿಮಾನದಲ್ಲಿ ಮಗುವಿನ ಜನನ, ಸನ್ಯಾಸಿಯ ಪ್ರಣಯಚೇಷ್ಟೆ, ಸ್ಮಶಾನಕ್ಕೊಯ್ದ ಮೃತಶರೀರದಲ್ಲಿ ಜೀವಸಂಚಾರ, ಇಂತಿಂಥ ಊರಿನಲ್ಲಿ ಬೆಕ್ಕಿಗೆ ಮೂರು ಕೋಡು, ಶಸ್ತ್ರಕ್ರಿಯೆಯಿಂದ ಹುಡುಗ ಹುಡುಗಿಯಾದ — ಇತ್ಯಾದಿ ಸಾಧ್ಯತೆಗೆ ನಿಕಟವಲ್ಲದ ಅಥವಾ ಅಸಾಧ್ಯತೆಗೆ ದೂರವಾದ ಸಾವಿರಾರು ಘಟನೆಗಳು ‘ವಾರ್ತಾಗಿರಣಿ’ಗಾಗಿ ಉಪಯೋಗಿಸಿಕೊಳ್ಳುವಂತಹ ಕಚ್ಚಾಸಾಮಗ್ರಿಗಳಾಗಿರುತ್ತವೆ! ಮಾನವನಲ್ಲಿಯ ಕುತೂಹಲಪ್ರವೃತ್ತಿ ಸೀಮಾತಿರೇಕವಾದುದೆಂಬುದನ್ನು ಪತ್ರಿಕಾಕರ್ತರು ಲಕ್ಷ್ಯದಲ್ಲಿಟ್ಟು ಕಾರ್ಯೋನ್ಮುಖರಾದರೆಂದರೆ ಉಭಯತರ ಇಷ್ಟಾರ್ಥ ಸಿದ್ಧಿಸಿದಂತೆಯೇ. ಇದುವೇ ವಾರ್ತೆಯಲ್ಲಿರಬೇಕಾದ ಆರನೆಯ ಸಂಗತಿ.

ಏಳನೆಯದೆಂದರೆ—ಘರ್ಷಣೆ. ಜೀವನವೆಂದರೆ ಸ್ಪರ್ಧಾಮಯವಾದುದು, ತಿಕ್ಕಾಟಪೂರಿತವಾದುದು. ತೊಟ್ಟಿಲಿನಿಂದ ಪ್ರಾರಂಭವಾಗಿ ಮಸಣದ ವರೆಗಿನ ಮಾನವ ಜೀವಿತ–ಮಾನಸಿಕ, ನೈತಿಕ ಹಾಗೂ ಭೌತಿಕ ತಾಕಲಾಟಗಳಿಂದ ತೇದು ಹೋಗುವಂತಹುದು. ಆದ್ದರಿಂದ ‘ಘರ್ಷಣೆ’, ಅದು ಯಾವುದೇ ರೂಪದಿಂದ ಕೂಡಿದರೂ ಓದುಗ–ಪ್ರಾಯದ ಹಂಗನ್ನು ಸಹ ಲೆಕ್ಕಿಸದೆ ತಿಳಿದುಕೊಳ್ಳಲೆಳಸುತ್ತಾನೆ. ಪತ್ರಿಕೆಗಳು ಮಾನವನ ಈ ತೆರನಾದ ಹುಟ್ಟುಸ್ವಭಾವವನ್ನರಿತುಕೊಂಡು, ಅವುಗಳ ಬೆಳಕನ್ನು ತಮ್ಮಾವುಗಳಲ್ಲಿ ಚೆಲ್ಲಲು ಮೊದಲಾಗಬೇಕು.

ಶೃಂಗಾರವೈವಿಧ್ಯತೆಗಳನ್ನು ವಾರ್ತಾವರದಿಗಳಲ್ಲಿ ಸೇರಿಸಿಕೊಳ್ಳದಿದ್ದರೆ ಒಂದು ದೊಡ್ಡ ಲೋಪದೋಷವೇ ಆದೀತು. ‘ಘರ್ಷಣೆ’ಗಿರುವ ಒಂದು ಮಹತ್ವಪೂರ್ಣ ಸ್ಥಾನ ‘ಶೃಂಗಾರ’ ವಿಚಾರಗಳಿಗೂ ಇರುತ್ತದೆ.

ಕಾತರತೆ, ಘರ್ಷಣೆ ಮತ್ತು ಶೃಂಗಾರ ವಿಚಾರಗಳಲ್ಲಿ ಭಾವೋದ್ವೇಗದ ಹನಿ ಇರುವುದಾದರೂ – ವಾರ್ತಾವರದಿಯಲ್ಲಿ ‘ಭಾವೋದ್ವೇಗ’ಕ್ಕೆ ಒಂದು ಪ್ರತ್ಯೇಕ ಸ್ಥಾನವನ್ನೇ ಕೊಡಲಾಗಿದೆ. ಇದುವೆ, ವರದಿಯಲ್ಲಿರಬೇಕಾದ ಒಂಭತ್ತನೆಯ ಗುಣ. ಅಂತಾರಾಷ್ಟ್ರೀಯ ಅಥವಾ ರಾಷ್ಟ್ರೀಯ ವಲಯಗಳಲ್ಲಾಗುವ ರಾಜಕೀಯ ಮಾರ್ಪಾಟುಗಳಿಂದಾಗಿ ತಮ್ಮ ದೈನಂದಿನ ಚಟುವಟಿಕೆಗಳಿಗೆ ಹಾನಿ ಬರಬಹುದೇ ಎಂಬ ಕಳಕಳಿ ಜನತೆಯಲ್ಲಿ ಉದ್ಭವಿಸುವುದು ಸ್ವಾಭಾವಿಕ.

‘ಭಾವೋದ್ವೇಗ’ದೊಂದಿಗೆ ‘ಸಮೂಹ ಪ್ರಚೋದನೆ’ (Crowd-Instinct) ಯೆಂಬ ವಿಷಯವನ್ನು ಸಹ ಸೇರಿಸಿಕೊಳ್ಳಬಹುದು. ಉದ್ಘಾಟನಾ ಸಮಾರಂಭ, ಸತ್ಕಾರ ಕೂಟ, ಪೌರ ಸ್ವಾಗತ, ಸಾರ್ವಜನಿಕ ಸಭೆ ಮುಂತಾದುವುಗಳಲ್ಲಿ ವರದಿಗಾರನು-ತನ್ನ ವಾರ್ತಾ ವರದಿಯೊಂದಿಗೆ ಸಮೂಹದ ‘ಪ್ರತಿಕ್ರಿಯೆ’ಗಳನ್ನು ಹೊಂದಿಸಿಕೊಂಡು ಲೇಖನಿ ಹರಿಸಬೇಕು.

ಸಂದರ್ಶನಗಳು (Interviews)

ಪತ್ರಿಕೆಗಳಲ್ಲಿ ಪ್ರಕಟವಾಗುವ ಹೆಚ್ಚಿನ ವರದಿಗಳು ಬಹುಶಃ ಮೂರರಲ್ಲಿ ಎರಡಂಶಗಳಷ್ಟಿನವು – ಸುದ್ದಿಗಾರರ ಮುಖಾಮುಖಿ, ಅಥವಾ ಫೋನ್ ಸಂಭಾಷಣೆಗಳಿಂದ ತುಂಬಿಬರುವಂತಹುಗಳು. ಯಾರಾದರೂ ಗಣ್ಯ ವ್ಯಕ್ತಿಗಳು ಅಥವಾ ಹಿರಿಯ ಮುತ್ಸದ್ದಿಗಳಿಗೆ ತಕ್ಕ ಸವಾಲುಗಳನ್ನು ಹಾಕಿ ಅವರಿಂದ ಸೂಕ್ತ ಪ್ರತಿಕ್ರಿಯೆಗಳನ್ನು ನುಣುಚಿಸಿಕೊಳ್ಳುವುದು ಸುದ್ದಿಗಾರನಾದ

(೧೪ನೇ ಪುಟ ನೋಡಿರಿ)

ಏಳು ಕಡಲುಗಳನ್ನು ದಾಟಿದ ಭಾರತೀಯ ಸೀರೆ

ಭಾರತದ ಸೀರೆಗಳಿಗೆ ಈಗ ವಿದೇಶಗಳಲ್ಲಿ ಅಪಾರ ಬೇಡಿಕೆ. ಭಾರತವು ೧೯೭೪-೭೫ರಲ್ಲಿ ೭.೫ ಕೋಟಿ ರೂ.ಗಳಿಗಿಂತಲೂ ಹೆಚ್ಚು ಬೆಲೆಯ ಸೀರೆಗಳನ್ನು ರಫ್ತುಮಾಡಿತು. ಅನ್ಯ ಹವಾಮಾನ ಹಾಗೂ ವಿಭಿನ್ನ ರುಚಿಯ ಫ್ಯಾಷನ್ ಇರುವ ವಿದೇಶಗಳಲ್ಲಿ ಭಾರತೀಯ ಸೀರೆಗಳಿಗೆ ಶಾಶ್ವತ ಸ್ಥಾನ ಸಿಕ್ಕಿರುವುದು ನಿಜವಾದ ಹೆಗ್ಗಳಿಕೆಯೇ ಸರಿ.

ಸೀರೆಗಳ ರಫ್ತಿನಲ್ಲಿ ಹತ್ತಿ ಸೀರೆಗಳಿಗೆ ಅಗ್ರಸ್ಥಾನ. ಇವು ೧೯೭೪-೭೫ರಲ್ಲಿ ೩.೯ ಕೋಟಿ ರೂ. ವಿದೇಶೀ ವಿನಿಮಯ ಗಳಿಸಿದುವು. ವಿದ್ಯುತ್ ಮಗ್ಗಗಳಲ್ಲಿ ತಯಾರಾದ ಸೀರೆಗಳಿಂದ ೧೯೭೪-೭೫ರಲ್ಲಿ ೧.೧೩ ಕೋಟಿ ರೂ. ವಿದೇಶೀ ವಿನಿಮಯ ಗಳಿಕೆಯಾಯಿತು. ಬಂಗ್ಲಾದೇಶ ೧.೦೮ ಕೋಟಿ ರೂಪಾಯಿ ಬೆಲೆಯ ೪೪ ಲಕ್ಷ ಚದರ್ ಮೀಟರ್ ವಿದ್ಯುತ್ ಮಗ್ಗದ ಬೂದು ಬಣ್ಣದ ಸೀರೆ ಕೊಂಡಿತು. ವಿದ್ಯುತ್ ಮಗ್ಗದ ಇತರ ಬಗೆಯ ಸೀರೆಗಳಿಗೆ ದುಬಾಯಿ, ಸೂಡಾನ್ ಗಿರಾಕಿಗಳಾಗಿವೆ,

ಬಣ್ಣಹಾಕಿದ ಸೀರೆಗಳ ರಫ್ತಿನಿಂದ ೧೦ ಲಕ್ಷ ರೂ. ವಿದೇಶೀ ವಿನಿಮಯ ದೊರಕಿದೆ. ಇವುಗಳಿಗೆ ಸಿಂಗಪುರ, ಬ್ರಿಟನ್, ಮಲೇಶಿಯಾ ಮತ್ತು ಫ್ರಾನ್ಸ್‌ಗಳಲ್ಲಿ ಬೇಡಿಕೆ. ಚೆಲುಮಾಡಿದ ಸೀರೆಗಳ ರಫ್ತಿನಿಂದ ೭೦ ಲಕ್ಷ ರೂ. ವರಮಾನ ಬಂದಿದೆ. ಇವುಗಳನ್ನು ಪ್ರಧಾನವಾಗಿ ಬಂಗ್ಲಾದೇಶಕ್ಕೆ ಸರಬರಾಜು ಮಾಡಲಾಗಿದೆ. ಚೆಲುವೆ ಮಾಡಿದ ೧೪.೩ ಲಕ್ಷ ರೂಪಾಯಿ ಬೆಲೆ ಸೀರೆಗಳನ್ನು ರಷ್ಯಾ, ಪೂರ್ವ ಜರ್ಮನಿ ಮತ್ತು ಸೌದಿ ಅರೇಬಿಯಾಗೆ ಮಾರಾಟಮಾಡಲಾಯಿತು. ೧೦ ಲಕ್ಷ ರೂಪಾಯಿ ಬೆಲೆ ಕೈ ಮುದ್ರಣದ ಸೀರೆಗಳನ್ನು ನೇಪಾಳ, ಸೌದಿ ಅರೇಬಿಯಾ ಹಾಗೂ ಸೂಡಾನಿಗೆ ರಫ್ತು ಮಾಡಲಾಯಿತು

ರೇಷ್ಮೆ ಸೀರೆಗಳ ರಫ್ತಿನಿಂದ ಸುಮಾರು ೧.೯ ಕೋಟಿ ರೂಪಾಯಿ ವಿದೇಶೀ ವಿನಿಮಯ ಗಳಿಕೆಯಾಗಿದೆ. ಜರಿಯಿರುವ ಕೈಮಗ್ಗದ ರೇಷ್ಮೆ ಸೀರೆಗಳ ರಫ್ತಿನಿಂದ ೧೪ ಲಕ್ಷ ರೂಪಾಯಿ ಗಳಿಸಲಾಗಿದೆ. ಈ ರೇಷ್ಮೆ ಸೀರೆಗಳಿಗೆ ಬ್ರಿಟನ್, ಸಿಂಗಪುರ, ಕೀನ್ಯಾ ಮತ್ತು ಮೊರಿಷಿಯಸ್‌ನಲ್ಲಿ ಬೇಡಿಕೆಯಿದೆ. ಸುಮಾರು ೧.೦೨ ಕೋಟಿ ರೂಪಾಯಿ ಬೆಲೆಯ ಇತರ ವರ್ಗದ ರೇಷ್ಮೆ ಸೀರೆಗಳನ್ನು ಬ್ರಿಟನ್, ಸಿಂಗಪುರ, ಮಲೇಶಿಯಾ ಮತ್ತು ಪಶ್ಚಿಮ ಜರ್ಮನಿಗೆ ಸರಬರಾಜು ಮಾಡಲಾಗಿದೆ. ಕಸೂತಿ ಜರಿಯಿರುವ ಕೈಮಗ್ಗದ ರೇಷ್ಮೆ ಸೀರೆಗಳ ರಫ್ತಿನಿಂದ ೬೦ ಲಕ್ಷ ರೂಪಾಯಿ, ಕೃತಕ ಜರಿ ಕಸೂತಿ ಮಾಡಿರುವ ಸೀರೆಗಳ ರಫ್ತಿನಿಂದ ೧೩.೬ ಲಕ್ಷ ರೂಪಾಯಿ ಗಳಿಸಲಾಗಿದೆ.

ಭಾರತದಲ್ಲಿ ತಯಾರಾದ ಕೃತಕ ರೇಷ್ಮೆ ಸೀರೆಗಳಿಗೂ ವಿದೇಶಗಳಲ್ಲಿ ಅಪಾರ ಬೇಡಿಕೆಯಿದೆ. ೧೯೭೪-೭೫ರಲ್ಲಿ ಈ ಸೀರೆಗಳ ರಫ್ತಿನಿಂದ ೧.೭ ಕೋಟಿ ರೂ. ಗಳಿಸಲಾಯಿತು. ನೈಲಾನ್ ಸೀರೆಗಳಿಂದ ೪೪ ಲಕ್ಷ ರೂಪಾಯಿ ಗಳಿಕೆಯಾಯಿತು. ಈ ಸೀರೆಗಳಿಗೆ ಬ್ರಿಟನ್, ಫಿಜಿದ್ವೀಪ ಮತ್ತು ಸಿಂಗಪುರ ಪ್ರಮುಖ ಗಿರಾಕಿಗಳು. ಗಿರಣಿಗಳಲ್ಲಿ ತಯಾರಿಸಿದ ರೇಯಾನ್ ಸೀರೆಗಳನ್ನು ಸೂಡಾನ್, ಸೌದಿ ಅರೇಬಿಯಾ ಮತ್ತು ಮೊರಿಷಿಯಸ್‌ಗೆ ರಫ್ತುಮಾಡಿ ೨೦ ಲಕ್ಷ ರೂಪಾಯಿ ಗಳಿಸಲಾಯಿತು.

—೦—

ಸಾರ್ವಜನಿಕ ಕ್ಷೇತ್ರದ ಉದ್ಯಮಗಳು

೨೦೦ ಉದ್ಯಮಗಳ ಸ್ಥಾಪನೆಯೊಂದಿಗೆ ಕಳೆದ ಹತ್ತು ವರ್ಷಗಳಲ್ಲಿ ಸಾರ್ವಜನಿಕ ರಂಗದ ಉದ್ಯಮವು ಭಾರತದಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿದೆ. ಇವುಗಳ ಮೇಲೆ ಹೂಡಿದ ಬಂಡವಾಳ ೧೯೭೩-೭೪ರಲ್ಲಿ ೬೨೩೭೦ ಮಿಲಿಯಕ್ಕೇರಿದೆ. ಈಗ ಈ ಕ್ಷೇತ್ರವು ಉಕ್ಕು, ಭಾರಿ ಇಂಜಿನಿಯರಿಂಗ್ ಮತ್ತು ವಿದ್ಯುತ್ ಉಪಕರಣಗಳು, ಸಾರಿಗೆ ಉಪಕರಣಗಳು, ಪೆಟ್ರೋಲಿಯಂ ಮತ್ತು ರಾಸಾಯನಿಕ ವಸ್ತುಗಳು, ಸಿಮೆಂಟ್, ಕಾಗದ ಮತ್ತು ಔಷಧ ಮುಂತಾದ ಮಹತ್ವದ ಉದ್ಯಮಗಳನ್ನೊಳಗೊಂಡಿದೆ. ಮಾರಾಟವು ೧೯೭೩-೭೪ರಲ್ಲಿ ರೂ. ೬೮,೧೦೦ ಮಿಲಿಯದಷ್ಟಾಗಿದೆ; ರೂ. ೨೭೦೦ ಮಿಲಿಯ ಲಾಭ ಗಳಿಸಿದೆ.

—೦—

ಭಾರತೀಯ ರೈಲ್ವೆ

ಜಗತ್ತಿನಲ್ಲಿ ಎರಡನೇ ಬೃಹತ್ ರೈಲ್ವೆ

ಭಾರತೀಯ ರೈಲ್ವೆಯು ಏಷ್ಯಾದಲ್ಲಿಯೇ ಒಂದೇ ಆಡಳಿತದಡಿಯಲ್ಲಿನ ಅತ್ಯಂತ ಬೃಹತ್ ಜಾಲವಾಗಿದೆ, ಹಾಗೂ ವಿಶ್ವದಲ್ಲಿ ರಷ್ಯಾದ ನಂತರದ ಎರಡನೆಯ ಅತ್ಯಂತ ಬೃಹತ್ ರೈಲ್ವೆ ಉದ್ಯಮವಾಗಿದೆ. ಈಗ ಭಾರತೀಯ ರೈಲ್ವೆಯು ೬೦,೩೦೧ ಕಿ.ಮೀ. ಮಾರ್ಗವನ್ನು ಕ್ರಮಿಸುತ್ತಿದ್ದು, ಇದರಲ್ಲಿ ೩೦,೨೭೪ ಕಿ. ಮೀ. ಬ್ರಾಡ್ ಗೇಜ್, ೨೫,೫೫೭ ಕಿ. ಮೀ. ಮೀಟರ್ ಗೇಜ್ ಮತ್ತು ೪,೪೭೬ ಕಿ. ಮೀ. ನೆರೋ ಗೇಜ್ ಮಾರ್ಗಗಳಿವೆ.

ಸುಮಾರು ೫೦೫೨ ಕೋಟಿ ರೂ.ಗಳ ಬಂಡವಾಳ ಹೂಡಿರುವ ಈ ಬೃಹತ್ ಸಾರ್ವಜನಿಕ ರಂಗದ ಉದ್ಯಮವು ೧೪,೧೫೨ ಮಿಲಿಯ ರೂ.ಗಳ ವಾರ್ಷಿಕ ಒಟ್ಟು ಆದಾಯವನ್ನು ಗಳಿಸುತ್ತಿದೆ. ರೈಲ್ವೆಯು ೧,೮೭೪ ಮಿಲಿಯ ರೂ.ಗಳನ್ನು ದೇಶದ ಆದಾಯಕ್ಕೆ ನೀಡುತ್ತಿದೆ. ೦.೩೨ ಮಿಲಿಯ ದಿನಗೂಲಿಗಳನ್ನೊಳಗೊಂಡಂತೆ ೧.೭ ಮಿಲಿಯ ಕಾರ್ಮಿಕರಿಗೆ ಉದ್ಯೋಗ ನೀಡುವ ಏಕಮೇವ ಉದ್ಯಮವಾಗಿದೆ.

ಪ್ರತಿದಿನ ಸುಮಾರು ೧೧ ಸಾವಿರ ರೈಲುಗಳು ಓಡುತ್ತಿದ್ದು, ೭,೧೯೯ ನಿಲ್ದಾಣಗಳಿಂದ ಕೂಡಿರುವ ಮಾರ್ಗಗಳಲ್ಲಿ ೭.೩ ಮಿಲಿಯ ಪ್ರಯಾಣಿಕರನ್ನು ಹೊತ್ತೊಯ್ಯುವುದಲ್ಲದೆ, ೦.೬೦ ಮಿಲಿಯ ಟನ್ ಸಾಮಾನನ್ನು ಸಾಗಣೆ ಮಾಡುತ್ತಿವೆ.

ಈ ಬೃಹತ್ ಸಾರಿಗೆಯನ್ನು ನಿರ್ವಹಿಸಲು ಭಾರತೀಯ ರೈಲ್ವೆಯು ೮,೬೮೭ ಉಗಿ ಎಂಜಿನುಗಳು, ೧,೭೧೧ ಡೀಸಲ್ ಎಂಜಿನುಗಳು ಮತ್ತು ೭೯೯ ವಿದ್ಯುತ್ ಎಂಜಿನುಗಳು, ಸುಮಾರು ೩,೯೦,೯೭೦ ವ್ಯಾಗನುಗಳು, ೨೬,೧೨೮ ಪ್ರಯಾಣಿಕರ ಬೋಗಿಗಳು ಮತ್ತು ೨,೦೪೦ ವಿದ್ಯುತ್ ರೈಲು ಬೋಗಿಗಳನ್ನು ನಿರ್ವಹಿಸುತ್ತಿದೆ. ೧೯೫೦ರಲ್ಲಿ ರೈಲ್ವೆಯು ಕೇವಲ ೮,೧೨೦ ಉಗಿ ಎಂಜಿನುಗಳು, ೧೭ ಡೀಸಲ್ ಮತ್ತು ೭೨ ವಿದ್ಯುತ್ ಎಂಜಿನುಗಳು, ೧೩,೦೦೦ ಬೋಗಿಗಳು ಮತ್ತು ೨ ಲಕ್ಷ ವ್ಯಾಗನುಗಳನ್ನು ಹೊಂದಿತ್ತು. ಆಗ ಉದ್ಯೋಗಿಗಳ ಸಂಖ್ಯೆ ಸುಮಾರು ೯ ಲಕ್ಷವಿದ್ದಿತು. ೧೯೫೦-೫೧ರಲ್ಲಿ ಆದಾಯ ತರುವ ೭೩.೨ ಮಿಲಿಯ ಟನ್ ಸಾಮಾನನ್ನು ಸಾಗಿಸಲಾಗಿದ್ದರೆ, ೧೯೭೫-೭೬ರಲ್ಲಿ ಇದು ಸುಮಾರು ೨೧೦ ಮಿಲಿಯ ಟನ್‌ಗಳಿಗೇರಿತು.

—೦—

ಭಾರತದ ಬಿಸ್ಕತ್, ಚೊಕಲೇಟಿಗೆ ಅಪಾರ ವಿದೇಶೀ ಬೇಡಿಕೆ

ಈಗ ಭಾರತದ ಬೇಕರಿಗಳಲ್ಲಿ ತಯಾರಾದ ತಿನಿಸುಗಳಿಗೆ ವಿದೇಶಗಳಲ್ಲಿ ಅಪಾರ ಬೇಡಿಕೆ. ಭಾರತವು ೧೯೭೪-೭೫ರಲ್ಲಿ ೮೧ ಲಕ್ಷ ರೂ. ಬೆಲೆ ಬೇಕರಿ ತಿನಿಸುಗಳನ್ನು ರಫ್ತುಮಾಡಿತು. ಇದರಲ್ಲಿ ೧೨ ಲಕ್ಷ ಕೆ.ಜಿ. ಬಿಸ್ಕತ್ತುಗಳಿಂದ ೭೮.೨ ಲಕ್ಷ ರೂ. ಗಳಿಕೆಯಾಯಿತು.

ಭಾರತದ ಬಿಸ್ಕತ್ತುಗಳಿಗೆ ದುಬಾಯಿ ಮತ್ತು ನೇಪಾಳ ಪ್ರಮುಖ ಗಿರಾಕಿಗಳಾಗಿವೆ. ಇವು ಕಳೆದವರ್ಷ ತಲಾ ೨೬.೬ ಲಕ್ಷ ರೂ. ಹಾಗೂ ೨೨.೫ ಲಕ್ಷ ರೂ. ಬೆಲೆ ಬಿಸ್ಕತ್ತುಗಳನ್ನು ತರಿಸಿಕೊಂಡವು. ನೆದರ್‌ಲೆಂಡ್ಸ್, ಮಸ್ಕತ್, ಈಥಿಯೋಪಿಯ, ಬಹ್ರೇನ್, ಸೌದಿ ಅರೇಬಿಯಾ ಮತ್ತು ಥೈಲೆಂಡ್ ಇತರ ಗಿರಾಕಿಗಳಾಗಿವೆ. ಭಾರತದಲ್ಲಿ ತಯಾರಿಸುವ ಹೂರಣದ ಭಕ್ಷ್ಯ (ಪೇಸ್ಟ್ರಿ)ಗಳಿಗೆ ಹಂಗೇರಿ, ಕುವೈತ್, ಅಬಿದಾಬಿ, ಬಹ್ರೇನ್‌ಗಳು ಪ್ರಮುಖ ಗಿರಾಕಿಗಳು-


೧೯೭೪-೭೫ರಲ್ಲಿ ಸುಮಾರು ೫೦೦ ಟನ್ ಚೊಕಲೇಟ್‌ಗಳನ್ನು ರಫ್ತುಮಾಡಿ ೨೫ ಲಕ್ಷ ರೂ. ಗಳಿಸಲಾಯಿತು. ದುಬಾಯಿ ೧೦.೫ ಲಕ್ಷ ರೂ. ಬೆಲೆ ಚೊಕಲೇಟ್ ತರಿಸಿಕೊಂಡಿತು. ನೇಪಾಳ, ಮಸ್ಕತ್, ಬಹ್ರೇನ್ ಮತ್ತು ಕುವೈತ್ ಚೊಕಲೇಟಿನ ಇತರ ಪ್ರಮುಖ ಗಿರಾಕಿಗಳಾಗಿವೆ. ಸುಮಾರು ೧೮.೪ ಲಕ್ಷ ರೂ. ಬೆಲೆ ಚೊಕೊಲೇಟ್ ಬಲ್ಗೇರಿಯಾ, ಜೆಕೊಸ್ಲಾವೇಕಿಯಾ, ದುಬಾಯಿ ಮತ್ತು ಬಹ್ರೇನ್‌ಗಳಿಗೆ ರಫ್ತುಮಾಡಲಾಯಿತು. —೦—

ಇಸೋಫನ ನರಿ

ಇಸೋಫನ ಕತೆಗಳು ಜಗತ್ಪ್ರಸಿದ್ಧವಾಗಿವೆ. ಬಹುಶಃ ಜಗತ್ತಿನ ಎಲ್ಲ ಭಾಷೆಗಳಿಗೆ ಅನುವಾದಿತವಾಗಿವೆ.

ಕರ್ನಾಟಕದ ಉದ್ದಾಮ ಲೇಖಕರಲ್ಲೊಬ್ಬರಾಗಿದ್ದ ದಿ। ಎಮ್. ಎನ್. ಕಾಮತರವರು ರಾಷ್ಟ್ರಕವಿ ಗೋವಿಂದ ಪೈಯವರ ಸಮಕಾಲೀನರು. ಗೋವಿಂದ ಪೈ ಮತ್ತು ಕಾಮತರ ಶತಮಾನೋತ್ಸವಗಳು, ಒಂದೇ ಕಾಲದಲ್ಲೆಂಬಂತೆ (ಶ್ರೀ। ಕಾಮತರು ರಾಷ್ಟ್ರಕವಿಗಳಿಂದ ಕೇವಲ ಆರು ದಿನಗಳಿಗೆ ಕಿರಿಯರು)–1983ನೇ ಮಾರ್ಚಿ ತಿಂಗಳಲ್ಲಿ ಜರಗಬೇಕಾಗಿವೆ. ಇವರಿಬ್ಬರು ಮಹಾನ್ ಲೇಖಕರು ರಚಿಸಿದ ಸಾಹಿತ್ಯವನ್ನು ಈಗಿಂದಲೇ ಕೂಡಹಾಕಲಾಗುತ್ತಿದೆ.

ಶ್ರೀ। ಕಾಮತರು, ಇಸೋಫನ ಅನೇಕ ಕತೆಗಳಲ್ಲಿ ಬರುವ ನರಿಯ ಕುರಿತಾಗಿಯೇ, ತಮ್ಮದೇ ಆದ ರೀತಿಯಲ್ಲಿ ಒಂದೇ ಲೇಖನದಲ್ಲಿ ಕಥಿಸಿದ್ದರು. ಅದರ ಒಂದಂಶವನ್ನು ಮಾತ್ರ ಇಲ್ಲಿ ಕೊಡುತಿದ್ದೇವೆ.



ದಿ। ಎಮ್. ಎನ್. ಕಾಮತ್.

"ಈಸೋಪನ ನರಿ"ಯೆಂದರೆ,–ಆ ಕಟ್ಟು ಕತೆಗಳನ್ನು ಬರೆದ ಮಹನೀಯನು ಸಾಕಿದ ನರಿಯೆಂದಲ್ಲ; ಅವನ ಕಟ್ಟುಕತೆಗಳಲ್ಲಿ ಚರ್ಚಿತವಾಗಿರುವ ತಂತ್ರಪುರುಷನಾದ ನರಿಯೆಂದರ್ಥ. ಕಟ್ಟುಕತೆಗಳಲ್ಲಿ ಒಂದೊಂದು ವ್ಯಕ್ತಿಗೂ, ಒಂದೊಂದು ಪ್ರಾಣಿಗೂ, ನೈಸರ್ಗಿಕವಾದ ಒಂದೊಂದು ಪ್ರತ್ಯೇಕ ಗುಣವನ್ನಾರೋಪಿಸಿಕೊಂಡು, ಆ ಮೂಲಕ ಬಗೆ ಬಗೆಯ ನೀತಿಬೋಧೆಯು ಪ್ರಚಲಿತವಾಗಿದೆ. ನರಿಯೂ ಈ ಕತೆಗಳಲ್ಲಿ ಯುಕ್ತಿಯುಳ್ಳ ಪ್ರಾಣಿಯೆಂದೂ, ತನ್ನ ಚಾತುರ್ಯದ ದೆಸೆಯಿಂದ ವಿವಿಧ ವಿದ್ಯಮಾನಗಳಲ್ಲಿ ವಿಜಯಿಯಾದುದೆಂದೂ, ಕೆಲವೇಳೆ ಕಂಗೆಟ್ಟರೂ ತನ್ನ ನಾಚುಗೆಯನ್ನು ಹೆಗ್ಗಳಿಕೆಯನ್ನಾಗಿ ಮಾರ್ಪಡಿಸಿಕೊಂಡಿತೆಂದೂ, ಸ್ಪಷ್ಟವಾಗಿದೆ.

ಮೃಗಗಳಲ್ಲಿ ಸಿಂಹನೇ ರಾಜನೆಂದೂ, ನರಿಯೇ ಮಂತ್ರಿಯೆಂದೂ ಎಣಿಸಲಾಗಿದೆ. ಧೈರ್ಯ, ಒಲವು, ಗೌರವ ಮತ್ತು ವಾತ್ಸಲ್ಯ — ಇವು ಅರಸನಲ್ಲಿರಬೇಕಾದ ಗುಣಗಳು. ಸಿಂಹನ ಚಿತ್ರವನ್ನು ನೋಡುವುದರಿಂದಲೇ ಇವುಗಳು ವ್ಯಕ್ತವಾಗುವುವು. ಆದರೆ, ಗೊಂಡೆಬಾಲದ ಅರೆನಗುಮೊಗದ ಪುಕ್ಕತನ ಸೂಚಕವಾದ ಅಂಗಭಂಗವನ್ನುಳ್ಳ ಗಡ್ಡಮೀಸೆಗಳ ಸೊಬಗಿನ ನರಿಯನ್ನು ಕಂಡರೆ, ಅದನ್ನು ಮಂತ್ರಿಯೆನ್ನಲು ಕೆಲವರು ಹಿಂಜರಿಯಬಹುದು. ಸ್ವಪ್ರಯೋಜನಕ್ಕಾಗಿ ಯುಕ್ತಿಪೂರ್ವಕ ಸಾಧನೆಮಾಡುವವರು, ಇಂತಹ ಲಕ್ಷಣಗಳನ್ನು ತೋರಿಸಿಕೊಂಡು ಕೌಶಲ್ಯದಿಂದ ಅಪಜಯವನ್ನಾದರೂ ಜಯವೆಂದು ಹೇಳಿಸಿಕೊಳ್ಳುವರು. ಪರಂತು, ಸಿಂಹನ ಸಂಚಾರವೆಲ್ಲಿರುವುದೋ ಅದರ ಜತೆಯಲ್ಲೇ ನರಿಯು ಇದ್ದೇ ಇದ್ದು, ಮೃಗರಾಜನ ಭೋಜನಾನಂತರ ರಾಜಪ್ರಸಾದವನ್ನು ಸ್ವೀಕರಿಸಿಕೊಳ್ಳಲು ತಿರುಮೊಗದ ಭಿಕ್ಷಾರ್ಥಿಯಾಗಿರುವುದು. ಸಿಂಹನೂ ನರಿಯೊಡನೆ ಮೈತ್ರಿಯಿಂದಿರುವುದು, ಕಾಡುಗಳಲ್ಲಿನ ಆರೋಗ್ಯಸಾಧನೆಗೆ ಸಹಾಯಕ. ಸಿಂಹನು ಹಸಿವಿನುದ್ರೇಕದಿಂದ ಕೊಂದು ತಿನ್ನುವನಲ್ಲದೆ, ರಕ್ತಾಂಜಲಿಯನ್ನರ್ಪಿಸಿ, ಹುಲಿಯ ಹಾಗೆ ವನದೇವಿಗೆ ಬಲಿಪೂಜೆಮಾಡುವುದಿಲ್ಲ. ಆದುದರಿಂದ ಅವಶಿಷ್ಟವು ಹೆಚ್ಚೇ. ಇದು ಗಾಳಿ–ಬಿಸಿಲಿಗೆ ಬಿದ್ದುಕೊಳ್ಳುವ ಸಂಭವ. ಆ ಕೊಳೆಯು ಮತ್ತೆ ಹರಿವ ಮಳೆನೀರಿನಲ್ಲಿ, ಮಣ್ಣಲ್ಲಿ ಅಥವಾ ಗಾಳಿಯಲ್ಲಿ ಸೇರಿ, ಸುತ್ತುಮುತ್ತಲಿನ ಆರೋಗ್ಯವು ಕೆಡದ ಹಾಗೆ (ಮೊಸಳೆಯ ಬಾಯಿಯನ್ನು ಶುಚಿಯಾಗಿರಿಸುವ ಕಾಗೆಗಳಂತೆ) ಸಿಂಹನ ಭೋಜನಗೃಹವನ್ನು ನರಿಗಳು ಶುಚಿಗೊಳಿಸುವುವು.

ರಾಜಬುದ್ಧಿಯ ಸಿಂಹನಿಗೆ ಈ ಲಾಲಾಯಿತನಾದ ಜಂಬುಕನ ಲಕ್ಷಣಗಳು ತಿಳಿದೇ ಜಂಬುಕನನ್ನು ದೂರದಲ್ಲಿರಿಸಿ, ತನ್ನ ಆಹಾರ ಸ್ವೀಕಾರವು ಮುಗಿದೊಡನೆ, ಅಪೇಕ್ಷಿತನಿಗೆ ಉಳಿದುದನ್ನು ಬಿಟ್ಟು, ತಾನು ಬೇರೇ ಕಡೆಗೆ ತನ್ನ ದರ್ಬಾರು ಡೇರೆಯೊಂದಿಗೆ ತೆರಳುವನು. ಆದುದರಿಂದ ನರಿಯನ್ನು ಕೆಲವರು ಮಂತ್ರಿಯೆಂದೂ, ಕೆಲವರು 'ಬಟ್ಲರ್'ನೆಂದೂ ಅನ್ನುವುದಿದೆ.

ತನ್ನ ಆಹಾರವನ್ನು ತಾನೇ ಹುಡುಕಿಕೊಳ್ಳುವುದರಲ್ಲಿ ನರಿಗೆ ಆಲಸ್ಯವಿರಬಹುದು. ಉಪಾಯವಿರದಲ್ಲಿ ಮಾತ್ರ ತಾನಾಗಿ ಅಲೆದಾಡುವುದು. ಅದರಲ್ಲಿಯೂ ಹಿಂಡು ಹಿಂಡಾಗಿ ತಿರುಗುವುದರಿಂದ ಮತ್ತೊಬ್ಬನಾರೊ ಹಿಡಿದ ಕೊಳ್ಳೆಯ ಪಾಲು ದೊರೆವಂತೆ, ಪರಸ್ಪರ ಒಪ್ಪಂದವಿರುವಂತಿದೆ. ತಮ್ಮ ಜೀವನವನ್ನು ತಾವಾಗಿ ಸಾರ್ಥಕ ಮಾಡಿಕೊಳ್ಳಲಾರದವರು, ಹೀಗೆ ಪರಾರ್ಥಜೀವಿಗಳಾಗಿಯೂ, ಡಕಾಯಿತರಂತೆ ತಂಡ ಕಟ್ಟಿಕೊಂಡೂ ಇರುವುದಿದೆ.

●

ತನ್ನ ಮಗುವಿನ ಅನ್ನಪ್ರಾಶನದ ದಿನ,–ಮಿಷ್ಟಾಹಾರವಾದ ದ್ರಾಕ್ಷೆಯ ರಸವಾಗಲಿ, ಪುಷ್ಟಿಯಾದ ಕೋಳೀಸಾರಾಗಲೀ ಬೇಕಾಗಿದೆ. ಜಡನಾದ ನರಿಯಯ್ಯನು ಹಳ್ಳೀಗೌಡರ ಮನೆಗೆ ಹೊರಟನು. ತೋಟದಲ್ಲಿಯ ಮಂಟಪದ ಮೇಲೆ ಎತ್ತರದಲ್ಲಿ ಸುರಕ್ಷಿತವಾಗಿ ದ್ರಾಕ್ಷೆಬಳ್ಳಿಯ ಹಣ್ಣುಗೊಂಚಲುಗಳಿಂದ ತೂಗುತ್ತಿದೆ. ರಸಾಸ್ವಾದನಾಪೇಕ್ಷೆಯಿಂದ ನರಿಯ ನಾಲಗೆಯಿಂದ ಜೊಲ್ಲಿಳಿಯಿತು. ಆದರೆ. ಎತ್ತರವಾಗಿದೆ! ಹಾರಿತು, ನಾಲ್ಕಾರು ಬಾರಿ ಹಾರಿತು!! ಬಾಯಿಗೆ ನಿಲುಕದು. ಅಲ್ಲಿಯ ಹುಲ್ಲುಮನೆಯ, ಕಲ್ಲುಗುಪ್ಪೆಯ, ಒಣಹುಲ್ಲು ರಾಶಿಯ ಎಡೆಗಳಿಂದ ಹೇಡಿಗಳಾದ ಕೆಲವು ಪಾಪದ ಕೋಳೀಮರಿಗಳೂ ಈ ಕಡೆ ನೋಡಿ, ನಿಶ್ಯಬ್ದವಾಗಿ ನಗುತಿರಬಹುದು! ಜಾಗ್ರತೆ!–ಇವರಿದಿರಿನಲ್ಲಿ ನರಿಗೆ ಮಾನಭಂಗವುಂಟಾಗುವ ಸಂಭವ. ಅದಾಗಲೆ ನರಿಯ ವಿಚಕ್ಷಣತೆ, ಪ್ರೌಢಿಮೆ!

"ಈ ಬಾರಿ ನೆಗೆಯುವೆನಾದರೆ ಹಲ್ಲು ಹಲ್ಲಿನೆಡೆಯಲ್ಲೂ ನೂರಾರು ಗೊಂಚಲುಗಳಂತೆ ಹಣ್ಣುಗಳನ್ನು ಸೆಳೆದುಬಿಡಬಹುದು; ಆದರೆ, ಹಾಳುಬಳ್ಳಿಯೋ,—ಕೋಳಿಗಳ ಹಿಕ್ಕೆಯಲ್ಲಿ ಬೆಳೆದೆ! ನಿನ್ನ ಎಲೆಗಳೆಡೆಯಿಂದ ಬೀಸುವ ಗಾಳಿಯೇ ಹುಳಿನಾರುತ್ತಿದೆ! ನಿನ್ನ ಹಣ್ಣುಗಳೇನೋ ಹುಳಿಯಿರಬಹುದು! ನನ್ನಂಥ ಗೃಹಸ್ಥರ ಮನೆಯಲ್ಲಿ ಸಹಭೋಜನ ಕಾಲದಲ್ಲಿ ನಿನ್ನ ಅಗತ್ಯವೇನೂ ಇರದು"—

—ಎಂದು ಗಟ್ಟಿಯಾಗಿ, ನಿದ್ದೆಯಲ್ಲಿದ್ದ ಕೋಳಿಗಳಿಗೂ ಕೇಳಿಸುವಂತೆ, "ಹುಳಿ ಹುಳಿ ದ್ರಾಕ್ಷೆ-ಹುಳಿಹುಳಿ ದ್ರಾಕ್ಷೆ" ಎಂದು ಪುನಃ ಪುನಃ ಅರಚಲಾರಂಭಿಸಿತು. ನರಿಯ ಮಾನವು ಉಳಿಯಿತೋ, ಅಳಿಯಿತೋ ತಿಳಿಯದು. ಪರಂತು, ಪೇಚಾಟದಿಂದಲಾದರೂ ಸಾಧ್ಯವಾಗದುದನ್ನೇ ನಾಚಿಸಿಯಾದರೂ, ತನ್ನ ಗೌರವವನ್ನು ಉಳಿಸಿಕೊಂಡ ಈ ನರಿಯ ಕೌಶಲ್ಯವೂ; ಜೀವನೋದ್ಯೋಗದಲ್ಲಿ ನಿಷ್ಫಲರಾದರೂ (ಕಾಲ್ತಡವಿ ಬಿದ್ದವನು ಭೂಮಿಯನ್ನು ಕೆಳಕೊತ್ತಿದೆನೆಂದೆಣಿಸಿಹಿಗ್ಗಿಕೊಳ್ಳುತಿರುವಂತೆ) ಉದಿಷ್ಟವಾದುದನ್ನು ದೂರಿ, ತಮ್ಮನ್ನು ತಾವೇ ಬುದ್ಧಿವಂತರೆಂದುಕೊಳ್ಳುವ ಮನುಷ್ಯರ ಕೌಶಲ್ಯವೂ, ಒಂದೇಯಾಗಿರುವುವು.

○ ○ ○ ○

ಪುನಃ,—ಬೆಳುಹರಿಯಿತು. ಗೌಡರು ಇನ್ನೂ ಎದ್ದುದಿಲ್ಲ. ಸೂರ್ಯನು ಮೂಡುತ್ತಿದ್ದಾನೆಯೆ ನೋಡೋಣವೆಂದು ಒಂದು ಪುಟ್ಟ ಕೋಳಿಮರಿಯು ಮಾಡಿನ ಮೇಲೆ ನಿಂತು, ಕೊರಳೆತ್ತಿಕೊಂಡು ಮೂಡುದಿಕ್ಕನ್ನು ದಿಟ್ಟಿಸುತ್ತಿದೆ. ಇದೇ ತಾನೆ ನರಿಗೆ ಸಮಯ! ಕೂಡಲೇ ನರಿಯು ಮಮತೆಯ ಧ್ವನಿಯಲ್ಲಿ ಆ ಕೋಳಿಮರಿಗೆ,–

—"ನಮ್ಮ ಮನೆಯಲ್ಲಿ ಕಿರುಬಾಲನಿಗೆ ಅನ್ನಪ್ರಾಶನ. ಅವನಿಗೆ ಸಮಪ್ರಾಯರಾದ ನೆರೆಮಕ್ಕಳನ್ನು ಊಟಕ್ಕೆ ಬರಹೇಳಬೇಕೆಂದು ಬಂದೆನು. ಬಂದಂತೆಯೇ ಸಿಕ್ಕಿದೆ; ಬೆಳಿಗ್ಗೆ ನಿನ್ನನ್ನು ನೋಡಿದ ಪುಣ್ಯವೊಂದು; ನಿನ್ನನ್ನು ಜತೆಯಲ್ಲಿರಿಸಿಕೊಂಡು, ಇಂತಹ ಉತ್ಸಹ ಕಾಲದಲ್ಲಿ ಹಳೇ ದ್ವೇಷವನ್ನು ಬಿಟ್ಟು ಆಲಿಂಗಿಸಿಕೊಳ್ಳಲಾಗುವ ಪುಣ್ಯವೊಂದು, ಇನ್ನು ವಿಳಂಬಮಾಡದೆ ಕೆಳಕ್ಕಿಳಿದು ಬಾ! ಬಂದೆಯಾದರೆ ಒಡನೆಯೆ ಮನೆಗೆ ತೆರಳುವ,–ಅನ್ಯಥಾ ಎಣಿಸಬೇಡ. ಅಲ್ಲಿ ತಾನೆ ನನ್ನ ಮರಿಯನ್ನು ನಿನ್ನೊಡನೆ ಆಟವಾಡಲು ಬಿಡುವೆನು. ಭೋಜನ ಮುಗಿದ ಮೇಲೆ, ನಿದ್ದೇ ತಿಳಿದು, ದಣಿವಾರಿಸಿಕೊಂಡು, ಇಲ್ಲಿಗೆ ನನ್ನ ಮರಿಯೊಡನೆ ನಿನ್ನನ್ನು ಕಳುಹಿಕೊಡುವೆನು; ಬಾರಪ್ಪ!"

—ಎಂದು ಆಮಂತ್ರಿಸಲಾರಂಭಿಸಿತು.

ಆದರೆ, ಮನುಷ್ಯಸಂಸಾರದಲ್ಲಿ ಪಾಲಿತವಾದ ಆ ಕೋಳೀಮರಿಗೆ ಮತ್ತಾರೂ ಬುದ್ಧಿ ಹೇಳಿಕೊಡಬೇಕಾಗಿಲ್ಲ. "ಇದೋ, ಬರುವೆನು. ಆದರೆ, ಇಲ್ಲಿ ತಾನೆ ನಮ್ಮ ನಾಯಿಯನ್ನು ಕಾವಲಾಗಿಸಿ ಬರುವೆನು"–ಎಂದು ನಾಯಿಯನ್ನು ಕೊಕ್ಕಿನಿಂದ ಕುಕ್ಕಿ, ಅದರ ತೂಕಡಿಕೆಯನ್ನು ಕಳೆಸಲು ಉಪಕ್ರಮಿಸಿತು.

"ಕೋಳಿಯನ್ನು ಬಾರೆಂದರೆ ಅದು ನಾಯಿಯನ್ನು,—ಆ ಬರ್ಬರ ಪಾಷಂಡಿಯನ್ನು,—ಕರೆದುತರುವುದಂತೆ! ನೀಚರಾದವರನ್ನು ನಮ್ಮ ವರ್ಗಕ್ಕೆ ಸೇರಿಸಿಕೊಳ್ಳುವಾಗಲೇ ನೋಡಬೇಕು. ಎಲ್ಲಿ ನರಿ, ಎಲ್ಲಿ ಕುಕ್ಕುಟ!"

—ಎಂದು ಗೊಣಗುಟ್ಟುತ್ತ ಅಲ್ಲಿಂದ ತೆರಳಿತು. ತಮ್ಮ ಕೂಟಕ್ಕೆ ಫಕ್ಕನೆ ಸಿಕ್ಕಲಾರದವರನ್ನು ಸಾಮಾನ್ಯ ಬುದ್ಧಿಯುವರೆಂದು ಯಾರೂ ಕರೆದರೆ, ಇಂತಹ ವಿದ್ಯಮಾನಗಳೂ ಉಂಟಾಗುವುವು. ನರಿಯು ಹೇಗೆಯೋ ಕೆಡುಕೂಟದವರೂ ಹಾಗೆಯೇ!

—o—

ಪ್ರಭಾತ

ತಾ. 8—2—1976ರಂದು 42ನೇ ವರ್ಷವನ್ನು ಪ್ರವೇಶಿಸುತ್ತದೆ.

ಈ ಸಂದರ್ಭದಲ್ಲಿ, ನಮ್ಮ ಹೊಸ ವ್ಯವಸ್ಥೆಯನ್ನು ಸದ್ಯದಲ್ಲೇ ಕಾರ್ಯರೂಪದಲ್ಲಿ ತರಲು ನಿರ್ಣಯಿಸಿರುವೆವೆಂದು ತಿಳಿಸಲು ಸಂತೋಷಪಡುತ್ತೇವೆ.

ಮೂವರು ಸಹಾಯಕ ಸಂಪಾದಕರು ಮತ್ತು ಹಲವು ಪ್ರಸಿದ್ಧ ಸಾಹಿತಿಗಳ ಸಹಕಾರದಿಂದ ಈ ಹೊಸ ಕಾರ್ಯಕ್ರಮ ರಚನೆಯಾಗುತ್ತಿದ್ದು, ಹೊಸ ರೂಪ ವೆತ್ತಿ ಪ್ರಕಟಿಸಲ್ಪಡಲು ನಿಶ್ಚಯಿಸಿರುವ "ಪ್ರಭಾತ" ಸಂಚಿಕೆಯ ಮಾದರಿ ಸಂಚಿಕೆಯನ್ನು ಶೀಘ್ರದಲ್ಲೇ ವಾಚಕಲೋಕದ ಪರಿಶೀಲನೆ, ಸಲಹೆ ಮತ್ತು ಅನುಮೋದನೆಗಾಗಿ ಒಪ್ಪಿಸಲಾಗುವುದು,

ಪ್ರತಿ ರವಿವಾರ ಪ್ರಕಟವಾಗುವ "ಪ್ರಭಾತ"ದ ಸಂಚಿಕೆಗಳು, ವರ್ಷದ ಐವತ್ತೆರಡು ಸಂಚಿಕೆಗಳೂ, ಐವತ್ತೆರಡು ಮನೋರಂಜಕ ಹಾಗೂ ವಿಚಾರಪೂರ್ಣ ವಿಷಯಗಳನ್ನು ಹೊಂದಿಕೊಂಡಿರುವುವು. ಉದಾಹರಣಾರ್ಥ: ಸಣ್ಣ ಕತೆಗಳನ್ನು ಕೊಡುವಾಗ, ಒಂದು ಸಂಚಿಕೆಯ ತುಂಬ ಒಂದು ವರ್ಗದ ಸಣ್ಣಕತೆಗಳನ್ನು ಮಾತ್ರ ಕೊಡಲಾಗುವುದು. ಹಾಗೆಯೇ, ವಿಜ್ಞಾನ, ಕವನಗಳು, ಸುಭಾಷಿತ, ಗಾದೆಗಳು, ಪ್ರಸಿದ್ಧ ಪುರುಷರ ಮತ್ತು ಜ್ಞಾನಿಗಳ ಚರಿತ್ರ ಹಾಗೂ ನುಡಿಗಳು, ವೀರ ಪುರುಷರ ಮತ್ತು ವೀರಮಹಿಳೆಯರ ಜೀವನಚರಿತ್ರ ಮತ್ತು ವಿಶೇಷ ಘಟನೆಗಳು, ವಿಜ್ಞಾನಿಗಳ ಸಂಶೋಧನೆಗಳು, ಸಂತಶ್ರೇಷ್ಠರ ಕೃತಿಗಳು, ಮತಸ್ಥಾಪಕರ ಬೋಧನೆ...............ಇತ್ಯಾದಿ ಇನ್ನೂ ಹಲವಾರು ವಿಷಯಗಳು—ಪ್ರಕಟವಾಗುವುವು.

ಸಣ್ಣ ಕತೆಗಳು:

1. ಕನ್ನಡ. 2. ಮಲೆಯಾಳಂ. 3. ತಮಿಳು. 4. ತೆಲುಗು, 5. ಮರಾಠಿ. 6. ಗುಜರಾಥಿ. 7. ಹಿಂದೀ. 8. ಪಂಜಾಬಿ. 9. ಬಂಗಾಳಿ. 10. ಉರ್ದು ಇತ್ಯಾದಿ.

ವಿದೇಶೀ ಸಾಹಿತ್ಯದಿಂದ ಸಣ್ಣ ಕತೆಗಳು:

1. ಇಂಗ್ಲೆಂಡ್. 2. ಫ್ರಾನ್ಸ್, 3. ಜರ್ಮನಿ. 4. ರಷ್ಯ, 5. ಅಮೆರಿಕ. 6. ಶ್ರೀಲಂಕಾ. 7. ಅರಬ್ ದೇಶಗಳು. 8. ಇಟಲಿ. 9. ಬರ್ಮಾ. 10. ಜಪಾನ್. 11. ಚೀನ. ಇತ್ಯಾದಿ.

ಸಣ್ಣ ಕತೆಗಳಲ್ಲಿ ವಿಭಾಗಗಳು:

1. ಪ್ರಣಯ. 2. ಸಾಹಸ. 3. ತ್ಯಾಗ. 4. ಸಾಧನೆ. 5. ಲಘು ಹಾಸ್ಯ, 6. ವ್ಯಂಗ್ಯ. 7. ಪತ್ತೆದಾರಿ. 8. ಪಾತಕ. 9. ಮನೋರೋಗ. 10. ದುರಂತ—ಇತ್ಯಾದಿ.

ಐತಿಹಾಸಿಕ ಕಥೆಗಳು:

ಭಾರತ ಹಾಗೂ ಇತರ ರಾಷ್ಟ್ರಗಳ ಐತಿಹಾಸಿಕ ಕಥೆಗಳು.

ಇತಿಹಾಸ:

ಭಾರತದ ಪ್ರತಿಯೊಂದು ರಾಜ್ಯದ ಇತಿಹಾಸ (ಎಲ್ಲ ಮುಖ್ಯ ವಿವರಗಳೊಂದಿಗೆ) ಮತ್ತು ಇತರ ರಾಷ್ಟ್ರಗಳ ಕುರಿತಾದ ವಿವರಗಳು.

ಏಕಾಂಕ ನಾಟಕಗಳು:

ಕರ್ನಾಟಕದ ಲೇಖಕರ ಏಕಾಂಕಗಳಲ್ಲದೆ ಇತರ ರಾಜ್ಯಗಳ ಮತ್ತು ರಾಷ್ಟ್ರಗಳ ಏಕಾಂಕ ನಾಟಕಗಳು.

ಕವನಗಳು:

ಕನ್ನಡ ನಾಡಿನ ಹಿಂದಿನ ಮತ್ತು ಇಂದಿನ ಕವಿಶ್ರೇಷ್ಠರ ಕೃತಿಗಳಿಂದ ಆಯ್ದ ಕವನಗಳು.

ಸಂಶೋಧಕರು ಮತ್ತು ಸಂಶೋಧನೆಗಳು:

ಜಗತ್ತಿನ ಮಹಾವಿಜ್ಞಾನಿಗಳ, ಸಂಶೋಧಕರ ಸಾಧನೆ ಮತ್ತು ಯಶಸ್ಸು ಕುರಿತಾದ ವಿವರ.

ರಂಗಭೂಮಿ:

ರಂಗಭೂಮಿಯ ಇತಿಹಾಸ, ರಂಗಭೂಮಿಯನ್ನು ಶ್ರೀಮಂತಗೊಳಿಸಿದ ನಟವರರು, ನಾಟಕಕಾರರು.

ನೃತ್ಯ:

ನೃತ್ಯದ ಉಗಮ, ಬೆಳವಣಿಗೆ, ಪ್ರಭೇದಗಳು, ಪ್ರಸಿದ್ಧ ನೃತ್ಯಕಲಾವಿದರು.

ಚಿತ್ರಕಲಾವಿದರು:

ಅವರ ಜೀವನಚರಿತ್ರ.

ಸಂಗೀತ ವಿದ್ವಾಂಸರು:

ಅವರ ಜೀವನಚರಿತ್ರ, ರಚನೆಗಳು ಇತ್ಯಾದಿ.

ಪತ್ರಿಕೋದ್ಯಮ:

ಪತ್ರಿಕೋದ್ಯಮದ ಇತಿಹಾಸ, ಬೆಳವಣಿಗೆ. ಪ್ರಸಿದ್ಧ ಪತ್ರಿಕೋದ್ಯಮಿಗಳು.

ಕೈಗಾರಿಕೋದ್ಯಮಿಗಳು:

ಅವರ ಸಾಧನೆ, ಯಶಸ್ಸು.

ಶಿಕ್ಷಣಸಂಸ್ಥೆಗಳನ್ನು

ಕಟ್ಟಿದವರ ಜೀವನಚರಿತ್ರ; ಸಂಸ್ಥೆಗಳ ಇತಿಹಾಸ.

ಬೇಂಕುಗಳು

ಇತ್ಯಾದಿ ಸಂಸ್ಥೆಗಳನ್ನು ಕಟ್ಟಿ ಬೆಳೆಸಿತಂದವರು.

ರಾಜಕೀಯ ಧುರೀಣರ

ಜೀವನಚರಿತ್ರಗಳಿಂದ ಆರಿಸಿತೆಗೆದ ವಿಶೇಷ ಘಟನೆಗಳು. (ರಾನಡೆ, ಗೋಖಲೆ, ತಿಲಕ, ಗಾಂಧಿಜಿ, ಸರದಾರ ಪಟೇಲ್, ನೆಹರುಗಳು, ಸಿ. ಆರ್. ದಾಸ್, ರಾಜಾಜಿ—ಮೊದಲಾದವರು.)

ಮತಸ್ಥಾಪಕರು:

ದಕ್ಷಿಣ ಭಾರತದ ಐವರು ಮತಸ್ಥಾಪಕರ ಜೀವನಪರಿಚಯ ಮತ್ತು ತತ್ತ್ವದ ಸಾರಾಂಶ.

ಗಾದೆಗಳು:

ಕನ್ನಡ, ಮಲೆಯಾಳಂ, ತಮಿಳು ಇತ್ಯಾದಿ ಭಾಷೆಗಳ ಗಾದೆಗಳಲ್ಲದೆ, ಇಂಗ್ಲೆಂಡ್, ಫ್ರಾನ್ಸ್, ಇಟಲಿ ಮೊದಲಾದ ಕಡೆಗಳ ಗಾದೆಗಳು (ಕನ್ನಡ ಅನುವಾದ ಸಹಿತ.)

ಶ್ರೇಷ್ಠ ನಾಟಕಕಾರರು, ಕವಿಗಳು:

ಜಗತ್ತಿನ ಶ್ರೇಷ್ಠ ಕವಿಗಳ ಮತ್ತು ನಾಟಕಕಾರರ ಕೃತಿಗಳಿಂದ ಉದ್ಧರಿಸಿದ, ಶಾಶ್ವತ ಮೌಲ್ಯದ ಮೌಕ್ತಿಕಗಳು. (ಭಾಸ, ಬಾಣಭಟ್ಟ, ಕಾಳಿದಾಸ, ಭವಭೂತಿ ಇತ್ಯಾದಿ; ಶೇಕ್ಸ್‌ಪಿಯರ್, ಮೊಲಿಯರ್, ಗಯಟೆ, ಬರ್ನಾರ್ಡ್ ಷೊ............ಇತ್ಯಾದಿ.)

ವರುಷದಲ್ಲಿ ಹೊರಡುವ 52 ಸಂಚಿಕೆಗಳೂ, 52 ಅಮೂಲ್ಯ ವಿಷಯಗಳಿಂದ ತುಂಬಿದ್ದು, ಎಲ್ಲವೂ ಸಂಗ್ರಹಯೋಗ್ಯವಾಗುವಂತೆಯೇ ಕನ್ನಡಿಗರಿಗೊಪ್ಪಿಸಲಾಗುವುವು,

ಈ ವ್ಯವಸ್ಥೆಯು ಕರ್ನಾಟಕದಲ್ಲೆ ನೂತನವಾದುದು. ಚಂದಾದರ ಇತ್ಯಾದಿ ಹೆಚ್ಚಿನ ವಿವರಗಳು ಮುಂದೆ ಪ್ರಕಟಿಸಲ್ಪಡುವುವು—ಮತ್ತು, ಮಾದರಿ ಪುಟಗಳನ್ನೊಳಗೊಂಡ ಒಂದೊಂದು ಪ್ರತಿಯು ಪ್ರಥಮತಃ ಓದುಗರಿಗೆ, ಶಕ್ಯವಿದ್ದಷ್ಟು ಬೇಗನೇ ಒಪ್ಪಿಸಲಾಗುವುದು.

ಫೋನ್ : 3728.

ಪ್ರಭಾತ, ರಥಬೀದಿ, ಮಂಗಳೂರು—575001.

★ ಉತ್ತಮ ಭವಿಷ್ಯದ ಕೈಗಾರಿಕಾಕ್ಷೇತ್ರ ★

(ಶ್ರೀ ಟಿ. ಎ. ಪೈ, ಕೈಗಾರಿಕಾ ಸಚಿವರು)

ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ೧೯೭೫ ಒಂದು ಐತಿಹಾಸಿಕ ವರ್ಷ. ಮುಖ್ಯ ಆರ್ಥಿಕ ಕ್ಷೇತ್ರಗಳಲ್ಲಿ ನಾವು ಗಣನೀಯ ಸಾಧನೆ ಸಾಧಿಸಿದ್ದು ಇದೇ ವರ್ಷದಲ್ಲಿ. ಆರ್ಥಿಕ ಸ್ಥಿತಿಯಲ್ಲಿ ಕೆಲವು ಮೂಲಭೂತ ಬದಲಾವಣೆ ಸಾಧಿಸಿದ್ದು ಪ್ರಾಯಶಃ ಎಲ್ಲಕ್ಕಿಂತ ಮುಖ್ಯ ವಿಷಯ. ಆ ಬದಲಾವಣೆಗಳಲ್ಲಿ, ಅಪ್ರಕಟಿತ ವರಮಾನ ಮತ್ತು ಸಂಪತ್ತು ಹಾಗೂ ಕಳ್ಳಸಾಗಾಣಿಕೆ ಮತ್ತಿತರ ಸಮಾಜವಿರೋಧಿ ಚಟುವಟಿಕೆಗಳನ್ನು ಯಶಸ್ವೀಯಾಗಿ ತಡೆಗಟ್ಟಿದುದು ಪ್ರಮುಖ ಅಂಶ. ದುಡಿಮೆ ಮತ್ತು ಉತ್ಪಾದನೆಗಳತ್ತ ಉದ್ದಿಮೆ ಮತ್ತು ಕಾರ್ಮಿಕ ಮನೋಭಾವದಲ್ಲಿ ಉತ್ತಮ ಬದಲಾವಣೆ ಕಂಡುಬಂದುದೂ ಸಹ ಈ ಐತಿಹಾಸಿಕ ವರ್ಷದಲ್ಲೇ. ಉತ್ಪಾದಕರು ಮತ್ತು ನೌಕರರಲ್ಲಿ ಮೂಡಿರುವ ಶಿಸ್ತು ನಮ್ಮ ಭವಿಷ್ಯದ ನಾಂದಿ.

ಈ ವರ್ಷದ ಆರ್ಥಿಕ ಸಾಧನೆಗಳಲ್ಲಿ ಹಣದುಬ್ಬರದ ಯಶಸ್ವೀ ಹತೋಟಿಗೆ ಮೊದಲ ಸ್ಥಾನ. ವರ್ಷದಾದ್ಯಂತ ಬೆಲೆಗಳು ಇಳಿಮುಖವಾಗಿದ್ದು ವರ್ಷದ ಅಂತ್ಯದಲ್ಲಿ ಸಗಟು ಬೆಲೆಗಳ ಸೂಚ್ಯಂಕ ೧೯೭೪ರ ಸೆಪ್ಟಂಬರ್‌ಗಿಂತ ಗಮನಾರ್ಹ ಪ್ರಮಾಣದಲ್ಲಿ ಇಳಿದಿತ್ತು. ಬಹುತೇಕ ರಾಷ್ಟ್ರಗಳು ಹಣದುಬ್ಬರ ಸಮಸ್ಯೆಯನ್ನೆದುರಿಸುತ್ತಿರುವಾಗ ನಮ್ಮ ಈ ಸಾಧನೆ ಪವಾಡವೇ ಸರಿ. ಇದರ ಜೊತೆಗೆ ಆವಶ್ಯಕ ವಸ್ತುಗಳ ವಿತರಣೆ ವ್ಯವಸ್ಥೆ ಸುಧಾರಿಸಿರುವುದು ಗಮನಿಸಬೇಕಾದ ಅಂಶ. ಇಂದು ಯಾವುದೇ ಆವಶ್ಯಕ ವಸ್ತುವಿನ ಕೊರತೆಯಿಲ್ಲ. ಮುಂಗಾರು ಬೆಳೆಯೂ ಉತ್ತಮವಾಗಿದ್ದು ಆಹಾರ ಧಾನ್ಯಗಳ ಪೂರೈಕೆಯನ್ನು ಉತ್ತಮಗೊಳಿಸಲು ಮತ್ತು ಬೆಲೆಗಳನ್ನು ಸಮಂಜಸ ಮಟ್ಟದಲ್ಲಿ ಕಾಯ್ದುಕೊಂಡು ಬರಲು ಸಹಾಯಕವಾಗಿದೆ.

ವರ್ಷದ ಕೈಗಾರಿಕಾ ಪ್ರಗತಿಯನ್ನು ಸಾಮಾನ್ಯ ಆರ್ಥಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಅವಲೋಕಿಸುವುದು ಅಗತ್ಯ. ಹಣದುಬ್ಬರದ ವಿರುದ್ಧ ಹೋರಾಟ ಮತ್ತು ಮೂಲಭೂತ ಬದಲಾವಣೆಗಳ ಕಾಲದಲ್ಲಿ ಕೆಲವು ಕೈಗಾರಿಕೆಗಳಿಗೆ ಹೊಂದಾಣಿಕೆ ಸಮಸ್ಯೆ ಇದ್ದರೂ ಕೈಗಾರಿಕಾ ಅಭಿವೃದ್ಧಿಗೆ ಉತ್ತಮ ಭವಿಷ್ಯ ರೂಪುಗೊಂಡಿರುವುದು ಹರ್ಷದ ವಿಷಯ. ಮೂಲ ಕೈಗಾರಿಕಾ ಕ್ಷೇತ್ರಗಳ ಈಗಿನ ಸಾಧನೆ ಮುಂಬರುವ ವರ್ಷಗಳಲ್ಲಿ ಮೊದಲಿಗಿಂತ ಹೆಚ್ಚಿತ ತ್ವರಿತ ಕೈಗಾರಿಕಾ ಅಭಿವೃದ್ಧಿಯ ಆಶಾಕಿರಣವನ್ನು ಮೂಡಿಸಿದೆ.

ಸರ್ಕಾರಿ ಕ್ಷೇತ್ರದ ಸಾಧನೆ

ಕೈಗಾರಿಕಾ ಉತ್ಪಾದನೆಯಲ್ಲಿ ಸರ್ಕಾರೀ ಉದ್ದಿಮೆಗಳು ಗಣನೀಯ ಪ್ರಗತಿ ಸಾಧಿಸಿದೆ. ಅದು ಈಗ ಕೈಗಾರಿಕೋದ್ಯಮದ ಪ್ರಮುಖ ಕ್ಷೇತ್ರವೆಂದು ಪರಿಗಣಿಸಲ್ಪಟ್ಟಿದೆ. ಸರ್ಕಾರಿ ಉದ್ದಿಮೆಗಳಲ್ಲಿ ೧೯೭೫ರ ಒಟ್ಟು ಸರಾಸರೀ ಉತ್ಪಾದನೆಗಿಂತ ಹೆಚ್ಚಿನ ಪ್ರಮಾಣದ ಉತ್ಪಾದನೆ ಕಂಡುಬಂದಿದೆ. ೧೯೭೫ರ ಎಪ್ರಿಲ್–ಸಪ್ಟೆಂಬರ್ ಅವಧಿಯಲ್ಲಿ ಮಾರಾಟದ ಉಕ್ಕಿನ ಉತ್ಪಾದನೆ ಶೇಕಡಾ ೧೬ರಷ್ಟು ಏರಿತು. ಕಲ್ಲಿದ್ದಲು ಮತ್ತು ವಿದ್ಯುಚ್ಛಕ್ತಿ ಉತ್ಪಾದನೆ ಕ್ರಮವಾಗಿ ಶೇಕಡಾ ೧೧ ಮತ್ತು ೯ರಷ್ಟು ಏರಿದವು. ಈ ಮೂಲಕ್ಷೇತ್ರಗಳಲ್ಲದೆ ಇತರ ಸರ್ಕಾರೀ ಉದ್ದಿಮೆಗಳೂ ಸಹ ಗಮನಾರ್ಹ ಪ್ರಗತಿ ಸಾಧಿಸಿವೆ. ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಸಂಸ್ಥೆಯ ವಿದ್ಯುಚ್ಛಕ್ತಿ ಉಪಕರಣ ಉತ್ಪಾದನೆ ಶೇಕಡಾ ೪೬ರಷ್ಟು ಏರಿದರೆ ವಿದ್ಯುಚ್ಛಕ್ತಿಯೇತರ ಉಪಕರಣಗಳ ಉತ್ಪಾದನೆಯಲ್ಲಿ ಶೇಕಡಾ ೨೫ರಷ್ಟು ಹೆಚ್ಚಳ ಕಂಡು ಬಂದಿತು. ರಸಗೊಬ್ಬರದ ಉತ್ಪಾದನೆಯಲ್ಲಿ ಈ ವರ್ಷದ ಪ್ರಗತಿ ಅಸಾಧಾರಣ. ೧೯೭೫ರ ಎಪ್ರಿಲ್–ಸಪ್ಟೆಂಬರ್ ಅವಧಿಯಲ್ಲಿ ರಸಗೊಬ್ಬರದ ಉತ್ಪಾದನೆ ಶೇಕಡಾ ೫೮ರಷ್ಟು ಅಧಿಕ. ಸರ್ಕಾರಿ ಕ್ಷೇತ್ರದ ಎರಡು ಸೀಮೆಂಟ್ ಕಾರ್ಖಾನೆಗಳು ಇದೇ ಅವಧಿಯಲ್ಲಿ ಶೇಕಡಾ ೧೯ರಷ್ಟು ಹೆಚ್ಚು ಸೀಮೆಂಟನ್ನು ಉತ್ಪಾದಿಸಿವೆ. ಅಲ್ಯೂಮಿನಿಯಂ, ತಾಮ್ರ ಮತ್ತು ಕಚ್ಚಾ ತೈಲದ ಉತ್ಪಾದನೆಯಲ್ಲಿಯೂ ಸಹ ಹಿಂದಿನ ವರ್ಷಕ್ಕಿಂತ ಸುಧಾರಣೆ ಕಂಡು ಬಂದಿದೆ.

ಇತರ ಕೈಗಾರಿಕೆಗಳ ಪೈಕಿ ವನಸ್ಪತಿ ಮತ್ತು ಸಕ್ಕರೆ ಉತ್ಪಾದನೆ ೧೯೭೫ರ ಏಪ್ರೀಲ್ ಅಕ್ಟೋಬರ್ ಅವಧಿಯಲ್ಲಿ ಶೇಕಡಾ ೫೮ ಮತ್ತು ೧೪ರಷ್ಟು ಅಧಿಕವಾಗಿದೆ. ಸಾರಿಗಾ ಕ್ಷೇತ್ರದಲ್ಲಿ ಸಾರಿಗೆ ವಾಹನಗಳ ಉತ್ಪಾದನೆಗಳಲ್ಲಿ ಶೇಕಡಾ ೮ರಷ್ಟು, ಸ್ಕೂಟರುಗಳ ಉತ್ಪಾದನೆಯಲ್ಲಿ ಶೇಕಡಾ ೧೪ರಷ್ಟು, ಮೊಪೆಡ್‌ಗಳ ಉತ್ಪಾದನೆಯಲ್ಲಿ ಶೇಕಡಾ ೨೫ರಷ್ಟು ಮತ್ತು ರೈಲ್ವೆ ವ್ಯಾಗನ್ನುಗಳ ಉತ್ಪಾದನೆಯಲ್ಲಿ ಶೇಕಡಾ ೧೬ರಷ್ಟು ಹೆಚ್ಚಳ ಕಂಡುಬಂದಿದೆ.

ಅನೇಕ ಆವಶ್ಯಕ ವಸ್ತುಗಳ ಪೂರೈಕೆಯಲ್ಲಿ ಒತ್ತಡ ಕಡಿಮೆಯಾಗುತ್ತಿದೆಯಲ್ಲದೆ ಕೊರತೆಯ ದೂರು ಕೇಳಿಬರುತ್ತಿಲ್ಲ. ಮಕ್ಕಳ ಆಹಾರ, ಸಾಬೂನು, ಲಾರಿ ಬಸ್ಸುಗಳ ಟೈರುಗಳು ಮುಂತಾದ ಅನೇಕ

(೧೦ನೇ ಪುಟ ನೋಡಿರಿ)

ಗೊಂಡ್ವನ ಭೂಖಂಡವು ನಿಜವಾಗಿಯೂ ಇದ್ದಿತೇ?

ಬಹು ಹಳೆಯ ಕಾಲದ ಹಿಂದೆ ಅಸ್ತಿತ್ವದಲ್ಲಿ ಇದ್ದಿತೆಂದು ನಂಬಲಾಗುವ ಗೊಂಡ್ವನ ಭೂಮಿಯ ಕುರಿತ ಯಾವುದೇ ಹೊಸ ದತ್ತಾಂಶಗಳೂ ತುಂಬ ಕುತೂಹಲಕಾರಿ. ಗೊಂಡ್ವನವು ಏಕ ಬೃಹತ್ ಪರಮ ಭೂಖಂಡವಾಗಿದ್ದಿತು. ಅದರ ಖನಿಜಗಳು ಒಂದೇ ಬಗೆಯಾಗಿದ್ದವು, ಅವುಗಳು ಒಂದೇ ಕಾಲದಲ್ಲಿ ರಚಿತಗೊಂಡವು ಎಂದೆಲ್ಲ ನಂಬಲಾಗುತ್ತದೆ. "ಸರಿ ಸುಮಾರು ೨೦೦ ಮಿಲಿಯ ವರ್ಷಗಳ ಹಿಂದೆ ಗೊಂಡ್ವನವು ಬೇರೆ ಬೇರೆ ಭೂಖಂಡ ಭಾಗಗಳಾಗಿ ಛಿನ್ನವಿಚ್ಛಿನ್ನಗೊಂಡಿತು. ಆಸ್ಟ್ರೇಲಿಯ, ಅಂಟಾರ್ಕ್‌ಟಿಕಾ, ದಕ್ಷಿಣ ಅಮೆರಿಕ, ಆಫ್ರಿಕ ಮತ್ತು ಹಿಂದೂಸ್ತಾನಗಳು ಅದರ ವಿಘಟಿತ ಭಾಗಗಳನ್ನು ಪ್ರತಿನಿಧಿಸುತ್ತವೆ" ಎಂಬುದಾಗಿ ಪ್ರಖ್ಯಾತ ಭೂಗರ್ಭ ವಿಜ್ಞಾನಿ ಪ್ರೊ. ಎಂ. ರಾವಿಚ್ ಅವರು ಇತ್ತೀಚೆಗೆ "ಇಜ್ವೆಸ್ತಿಯ" ಪತ್ರಿಕೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಈ ವಿಜ್ಞಾನಿಯು ತಾವು ಆಸ್ಟ್ರೇಲಿಯಾದಲ್ಲಿ ಸಂಗ್ರಹಿಸಿದ ಶಿಲೆಗಳನ್ನೂ ಮತ್ತು ಸೋವಿಯೆತ್ ಶೋಧಕರು ಅಂಟಾರ್ಕ್‌ಟಿಕ್ ಖಂಡದಿಂದ ತಂದ ಶಿಲಾಮಾದರಿಗಳನ್ನೂ ತುಲನೆ ಮಾಡಿ ನೋಡಿದ ಬಳಿಕ ಇಂಥ ತೀರ್ಮಾನಕ್ಕೆ ಬಂದಿದ್ದಾರೆ. ಆಸ್ಟ್ರೇಲಿಯಾ ಮತ್ತು ಅಂಟಾರ್ಕ್‌ಟಿಕ್ ಖಂಡಗಳಲ್ಲಿಯ ಪರ್ವತವ್ಯೂಹಗಳು ಒಂದೇ ನಮೂನೆಯಾಗಿರುವ ಬಗ್ಗೆಯೂ ಮನಮುಟ್ಟುವಂಥ ಹೊಸ ಸಾಕ್ಷ್ಯಗಳನ್ನು ಅವರು ಕಂಡುಹಿಡಿದಿದ್ದಾರೆ. ಗೊಂಡ್ವನದಲ್ಲಿ ನಮ್ಮ ಆಸಕ್ತಿ ಕೇವಲ ತಾತ್ವಿಕವಾದುದಲ್ಲವೆಂದು ಪ್ರೊ. ರಾವಿಚ್ ಹೇಳುತ್ತಾರೆ. ಗೊಂಡ್ವನದ ರಹಸ್ಯಗಳನ್ನು ಅರಿತು ಬಯಲುಗೊಳಿಸಿದರೆ, ಎಲ್ಲ ದಾಕ್ಷಿಣಾತ್ಯ ಖಂಡಗಳಲ್ಲಿಯ ಖನಿಜಗಳ ವಿತರಣೆಯನ್ನು ಉತ್ತಮವಾಗಿ ಅರಿತುಕೊಳ್ಳಲು ಸಾಧ್ಯವಾಗುತ್ತದೆಯೆಂದೂ ಅವರು ಅದರ ಪ್ರತ್ಯಕ್ಷ ಮಹತ್ವವನ್ನೂ ಸೂಚಿಸುತ್ತಾರೆ.

——



(೯ನೇ ಪುಟದಿಂದ)

ಅವಶ್ಯಕ ಸಾಮಗ್ರಿಗಳ ಉತ್ಪಾದನೆಯಲ್ಲಿ ಸುಧಾರಣೆ ಕಂಡುಬಂದಿದೆ. ಕಾಗದದ ಉತ್ಪಾದನೆ ಸ್ವಲ್ಪ ಪ್ರಮಾಣದಲ್ಲಿ ಇಳಿದಿದ್ದರೂ ಶೈಕ್ಷಣಿಕ ಕ್ಷೇತ್ರ ಅಥವಾ ಕೈಗಾರಿಕಾ ಬಳಕೆಗಾಗಿ ಕೊರತೆ ಕಂಡುಬಂದಿಲ್ಲ. ಇದೇ ರೀತಿ, ವ್ಯವಸ್ಥಿತ ಕ್ಷೇತ್ರದಲ್ಲಿ ಬೆಂಕಿಕಡ್ಡಿಯ ಉತ್ಪಾದನೆ ಕುಂಠಿತಗೊಂಡಿದ್ದರೂ ಸಣ್ಣಪುಟ್ಟ ಕೈಗಾರಿಕೆಗಳು ಈ ಕೊರತೆಯನ್ನು ತುಂಬಿಕೊಟ್ಟಿವೆ.

ಸರಳ ವಿಧಾನ

ಕೈಗಾರಿಕಾ ಲೈಸನ್ಸ್ ಅರ್ಜಿಗಳ ಅನುಮೋದನೆ ವಿಧಾನಗಳನ್ನು ಸರಳಗೊಳಿಸಲಾಗಿದ್ದು ಇಲಾಖೆಯು ಅಂತಹ ಅರ್ಜಿಗಳನ್ನು ನಿಯಮಿತ ಅವಧಿಯಾದ ೯೦ ದಿನಗಳಲ್ಲಿ ವಿಲೇವಾರಿ ಮಾಡುವಲ್ಲಿ ಯಶಸ್ವಿಯಾಗಿದೆ. ನಿಯಮಿತ ಅವಧಿಗಿಂತ ಹೆಚ್ಚು ಅವಧಿ ಉಳಿಯುವ ಅರ್ಜಿಗಳ ಸಂಖ್ಯೆ ಈಗ ಬಹಳ ಕಡಿಮೆ. ಕಳೆದ ಕೆಲವು ತಿಂಗಳುಗಳಲ್ಲಿ ಎಲ್ಲಾ ವಿಧದ ಅರ್ಜಿಗಳ ವಿಲೇವಾರಿ ಮತ್ತು ಆಡಳಿತದಲ್ಲಿ ಹೆಚ್ಚಿನ ದಕ್ಷತೆ ಕಂಡುಬಂದಿದೆ. ೧೯೭೫–೭೬ರ ಹೊಸ ಆಮದು ಧೋರಣೆ ಸುದೀರ್ಘ ವಿಧಾನಗಳನ್ನು ಸರಳಗೊಳಿಸಿರುವುದರಿಂದ ೩೦ ದಿನಗಳೊಳಗಾಗಿ ಶೇಕಡಾ ೮೦ರಷ್ಟು ಲೈಸನ್ಸ್‌ಗಳನ್ನು ನೀಡಲು ಸಹಾಯಕವಾಗಿದೆ.

ಉತ್ತಮ ಭವಿಷ್ಯ

ಹೊಸ ಉದ್ದಿಮೆಗಳಿಗೆ ಆರ್ಥಿಕ ನೆರವು ನೀಡುವ ಧೋರಣೆ ಮುಂದುವರಿದಿದೆ. ಈ ಹೊಸ ಉದ್ದಿಮೆಗಳು ಹೋಟೆಲ್, ಆಹಾರವಸ್ತುಗಳು, ರಬ್ಬರ್ ವಸ್ತುಗಳು, ಕಾಗದ, ಚರ್ಮ, ಮೋಟಾರ್‌ಸೈಕಲ್ ಮತ್ತು ಸ್ಕೂಟರ್ ಬಿಡಿಭಾಗಗಳ ಕೈಗಾರಿಕೆಗಳು ಸೇರಿವೆ. ಐ. ಡಿ. ಬಿ. ಐ. ಮತ್ತು ರಾಜ್ಯ ಕೈಗಾರಿಕಾ ಅಭಿವೃದ್ಧಿ ಕಾರ್ಪೊರೇಷನ್‌ಗಳು ಹೊಸ ಉದ್ದಿಮೆದಾರರಿಗೆ ಸೂಕ್ತ ನೆರವು ನೀಡುತ್ತಿವೆ.

ದೇಶದ ೧೯೭೪ರ ಅಂತ್ಯದ ಆರ್ಥಿಕ ಸ್ಥಿತಿ ೧೯೭೬ರ ಆಶಾದಾಯಕ ಪರಿಸ್ಥಿತಿಯ ದ್ಯೋತಕ ಮುಂಗಾರಿ ಫಸಲಿನ ದ್ವಿದಳ ಧಾನ್ಯಗಳ ಸಮೃದ್ಧ ಬೆಳೆ, ಆಹಾರಧಾನ್ಯ ಸಂಗ್ರಹಣಾ ಪ್ರಮಾಣ ಮತ್ತು ಹಿಂಗಾರಿ ಫಸಲಿನ ಉತ್ತಮ ಭವಿಷ್ಯ ಮುಂದಿನ ಸಾಲಿನಲ್ಲಿ ಆಹಾರಧಾನ್ಯಗಳ ಬೆಲೆಗಳನ್ನು ಸ್ಥಿರಗೊಳಿಸುವ ನಿರೀಕ್ಷೆಯಿಂದೆ, ಖಾದ್ಯ ತೈಲ, ವನಸ್ಪತಿ ಮತ್ತು ಸಕ್ಕರೆ ಮುಂತಾದ ಇತರ ಬಳಕೆ ವಸ್ತುಗಳಿಗೂ ಸಹ ಉತ್ತಮ ಭವಿಷ್ಯ ಕಂಡುಬಂದಿದೆ. ಕಲ್ಲಿದ್ದಲು, ಉಕ್ಕು ಮತ್ತು ವಿದ್ಯುಚ್ಛಕ್ತಿ ಮುಂತಾದ ಮೂಲ ಕೈಗಾರಿಕೆಗಳ ಉತ್ಪಾದನಾ ಪ್ರಗತಿ ಕೈಗಾರಿಕಾ ಉತ್ಪಾದನಾ ಪ್ರಗತಿಯ ಮಟ್ಟವನ್ನು ಕಾಯ್ದುಕೊಂಡು ಬರಲು ಸಹಾಯಕವಾಗಿದೆ.

ನಿರ್ಮಾಣ ಕಾರ್ಯ, ವಾಹನಗಳು, ಕೆಲವೊಂದು ಬಳಕೆ ವಸ್ತುಗಳು ಮತ್ತು ಜವಳಿ ಕ್ಷೇತ್ರದ ಉತ್ಪಾದನೆ ಕುಂಠಿತಗೊಂಡಿರುವುದು ನಿಜ. ಅವುಗಳ ಉತ್ಪಾದನಾ ಪ್ರೋತ್ಸಾಹನೆಗೆ ಬೆಲೆಗಳ ಮತ್ತಷ್ಟು ಇಳಿತ ಮತ್ತು ಕೆಲವು ಕ್ಷೇತ್ರಗಳ ಪುನರ್ ಮಾರ್ಪಾಟು ಅಗತ್ಯ. ಈ ಕಾರ್ಯಕ್ಕಾಗಿ ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಹೌಸಿಂಗ್ ಮತ್ತು ನಗರ್ ಅಭಿವೃದ್ಧಿ ಕಾರ್ಪೊರೇಷನ್‌ಗಳ ಮೂಲಕ ನಿರ್ಮಾಣ ಕಾರ್ಯಗಳ ಪ್ರೋತ್ಸಾಹ, ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಸುಧಾರಣೆಗೆ ಕೇಂದ್ರದಿಂದ ಮತ್ತಷ್ಟು ಹಣನೀಡಿಕೆ ಮತ್ತು ನಿಯಂತ್ರಿತ ಬಟ್ಟೆ ಧೋರಣೆಯ ಪುನರ್ ರಚನೆ ಇವೇ ಆ ಕ್ರಮಗಳು. ಕೆಲವೊಂದು ಕ್ಷೇತ್ರಗಳಲ್ಲಿ ಅನಾವಶ್ಯಕವಾಗಿ ತಲೆದೋರಿದ್ದ ಹಿಂಜರಿತ ಭೀತಿ ತೊಲಗಿ ಉತ್ಪಾದನಾ ಸುಧಾರಣೆ ಕಂಡುಬಂದಿದೆ, ಆದುದರಿಂದ ಹಿಂದೆ ಕುಂಠಿತಗೊಂಡಿದ್ದ ಕೈಗಾರಿಕೆಗಳು ಮುಂದಿನ ವರ್ಷದಲ್ಲಿ ಇತರ ಕೈಗಾರಿಕೆಗಳಂತೆ ಅಭಿವೃದ್ಧಿ ಪಥದತ್ತ ಸಾಗುವ ಆಶೆಯಿದೆ.

ಪ್ರಸಕ್ತ ಪರಿಸ್ಥಿತಿಯನ್ನು ಅವಲೋಕಿಸಿದಲ್ಲಿ, ೧೯೭೬ರಲ್ಲಿ ಕೈಗಾರಿಕಾ ಬೆಳವಣಿಗೆಗೆ ಕಳೆದ ಕೆಲವು ವರ್ಷಗಳಿಗಿಂತ ಉತ್ತಮ ಭವಿಷ್ಯವಿದೆಯೆಂದು ಹೇಳಬಹುದು. ಪೂರೈಕೆ ವ್ಯವಸ್ಥೆಯ ಸುಧಾರಣೆ ಮತ್ತು ಸರ್ಕಾರದ ಧೋರಣೆಗಳ ಅಭಾವವನ್ನು ಪಡೆದುಕೊಳ್ಳುವುದು ಈಗ ಕೈಗಾರಿಕೆಗಳಿಗೆ ಸೇರಿದ್ದು. ಆರ್ಥಿಕ ಅಭಿವೃದ್ಧಿಗೆ ಸಚೇತಕವಾಗುವ ಮತ್ತು ಸಾಮಾಜಿಕ ನ್ಯಾಯದಿಂದೊಡಗೂಡಿದ ಆರ್ಥಿಕ ಪ್ರಗತಿಯನ್ನು ಸಾಧಿಸಲು ಸರ್ಕಾರದ ನಿರ್ಧಾರ ಸದೃಢ.

ರಾಮಾಯಣ: ಸೋವಿಯತ್ ಒಕ್ಕೂಟದಲ್ಲಿ ತುಂಬ ಜನಪ್ರಿಯ

(ವೀರೇಂದ್ರ ತ್ರಿಪಾಠಿ)

ಇತ್ತೀಚೆಗೆ (ಡಿಸೆಂಬರ್ ೮ರಿಂದ ೧೨ರ ವರೆಗೆ] ರಾಮಚರಿತಮಾನಸದ ೪೦೦ನೇ ವರ್ಧಂತಿ ಪ್ರಯುಕ್ತ ದಿಲ್ಲಿಯಲ್ಲಿ, "ಏಶಿಯಾದಲ್ಲಿ ರಾಮಾಯಣ ಪರಂಪರೆ" ಎಂಬ ವಿಷಯದ ಮೇಲೆ ಅಂತರರಾಷ್ಟ್ರೀಯ ವಿಚಾರಗೋಷ್ಠಿಯೊಂದು ಸಾಹಿತ್ಯ ಅಕಾಡೆಮಿ ಮತ್ತು ಭಾರತ ಸರ್ಕಾರದ ಶಿಕ್ಷಣ ಸಚಿವಾಲಯಗಳ ಆಶ್ರಯದಲ್ಲಿ ನಡೆಯಿತು. ಸೋವಿಯತ್ ಒಕ್ಕೂಟದಲ್ಲೂ ಈ ಮಹಾಕಾವ್ಯ ಎಷ್ಟೊಂದು ಜನಪ್ರಿಯವಾಗಿದೆಯೆಂಬುದು ಬಹಳಷ್ಟು ಜನರಿಗೆ ತಿಳಿಯದು. ಅಂತೆಯೆ ಈ ವಿಚಾರಗೋಷ್ಠಿಯಲ್ಲಿ ಅದೂ ಅಷ್ಟೇ ಆಸಕ್ತಿ ವಹಿಸಿದ್ದಿತು.

ರಾಮಾಯಣ ಮಹಾಕಾವ್ಯ ಜಗತ್ತಿನ ಎಲ್ಲೆಡೆಯೂ, ಅದರಲ್ಲೂ ಏಶಿಯಾದಲ್ಲಿ ವಿಶೇಷ ಆದರ ಹಾಗೂ ಮೆಚ್ಚುಗೆಗಳಿಗೆ ಪಾತ್ರವಾಗಿದೆ. ಆದರೆ ಸೋವಿಯತ್ ಒಕ್ಕೂಟದಲ್ಲಿ ಅದು ಪ್ರಿಯವಾಗಿರುವಷ್ಟು, ಅದರಲ್ಲೂ ಮಕ್ಕಳ ಮಧ್ಯೆ ಪ್ರಿಯವಾಗಿರುವಷ್ಟೂ ಬೇರೆಲ್ಲೂ ಆಗಿಲ್ಲವೆಂದು ಧಾರಾಳವಾಗಿ ಹೇಳಬಹುದು.

ತುಲಸಿದಾಸರ "ರಾಮಚರಿತಮಾನಸ" ಅಥವಾ "ರಾಮಾಯಣ"ವೆಂಬ ಜನಪ್ರಿಯ ಹೆಸರಿನ ಕೃತಿಯು ಮೊಟ್ಟಮೊದಲು ೧೯೪೮ರಲ್ಲಿ ಸೋವಿಯತ್ ಒಕ್ಕೂಟದಲ್ಲಿ ಪ್ರಕಟಿಸಲ್ಪಟ್ಟಿತು. ಭಾರತ ಮತ್ತು ಸೋವಿಯತ್ ಒಕ್ಕೂಟಗಳ ಮಧ್ಯೆ ರಾಜತಾಂತ್ರಿಕ ಸಂಬಂಧಗಳು ಸ್ಥಾಪನೆಗೊಂಡ ಐತಿಹಾಸಿಕ ಸಂದರ್ಭ ಅದು. ಅನುವಾದಕ ಎ. ಬರಾನ್ನಿಕೋವ್ ಅವರು ತಾವೇ ಬರೆದ ಮುನ್ನುಡಿಯಲ್ಲಿ ಇವರ ಪ್ರಕಟಣೆಯು ಸೋವಿಯತ್ ಒಕ್ಕೂಟ ಮತ್ತು ಭಾರತಗಳ ನಡುವಣ ನಿಕಟ ಸಾಂಸ್ಕೃತಿಕ ಸಂಬಂಧಗಳಿಗೆ ತುಂಬ ಹಿತಕರವಾಗಿರುತ್ತದೆ ಯೆಂಬ ಆಶಯವನ್ನು ವ್ಯಕ್ತಪಡಿಸಿದ್ದರು.

ಅಕಾಡೆಮಿಷಿಯನ್ ಎ. ಬರಾನ್ನಿಕೋವ್ ಅವರು ಈ ಮಹಾಕಾವ್ಯದ ಅನುವಾದವನ್ನು ೧೯೩೮ರಲ್ಲಿ ಆರಂಭಿಸಿ ೧೯೪೪ರಲ್ಲಿ ಪೂರ್ಣಗೊಳಿಸಿದರು. ಅವರ ಭಾಷಾಂತರಕ್ಕೆ ಆಧಾರ ಕೃತಿ, ೧೯೨೨ರಲ್ಲಿ ಕಾಶಿ ನಾಗರೀ ಪ್ರಚಾರಿಣಿ ಸಭಾದಿಂದ ಪ್ರಕಟವಾದ ಮತ್ತು ಶಾಮಸುಂದರ್ ದಾಸ್ ಅವರಿಂದ ಟೀಕುಗಳೊಡನೆ ಸಂಪಾದಿತವಾದ ಕೃತಿ. ಬರಾನ್ನಿಕೋವ್ ಅವರು ತಮ್ಮ ಈ ಕೆಲಸದಲ್ಲಿ ಭಾರತದ ಅನೇಕ ಮೂಲ ಪ್ರತಿಗಳನ್ನೂ ಉಪಯೋಗಿಸಿಕೊಂಡರು.

ರಾಮಾಯಣದ ರಶಿಯನ್ ಭಾಷಾಂತರವನ್ನು ಖ್ಯಾತ ಹಿಂದೀ ವಿಮರ್ಶಕ ರಾಮ್ ಬಿಲಾಸ್ ಶರ್ಮ ಅವರು ವಿಮರ್ಶಿಸುತ್ತ ಮುಕ್ತ ಕಂಠದಿಂದ ಪ್ರಶಂಸಿಸಿದರು. ತಮ್ಮ ವಿಮರ್ಶೆಯಲ್ಲಿ ಒಂದೆಡೆ ಅವರು ಹೀಗೆ ಉದ್ಗರಿಸಿದ್ದಾರೆ: "ಸ್ವತಃ ಸೋವಿಯೆತ್ ಒಕ್ಕೂಟವು ಅತ್ಯಂತ ಸಂಕಷ್ಟದ ಹಾಗೂ ಗಂಡಾಂತರದ ಸ್ಥಿತಿಯಲ್ಲಿದ್ದಾಗ, ಪ್ರತಿಯೊಂದು ರೂಬಲನ್ನೂ ಉಳಿಸಬೇಕಾದಂಥ ಪರಿಸ್ಥಿತಿಯಿದ್ದಾಗ, ಸೋವಿಯತ್ ಜನರ ಪ್ರತಿಯೊಂದು ದುಡಿಮೆಯ ಗಂಟೆಯೂ ಫ್ಯಾಸಿಸಮ್ಮಿನ ವಿರುದ್ಧ ಹೋರಾಟಕ್ಕೆ ಉಪಯೋಗಿಸಲ್ಪಡಬೇಕಾದಾಗ ಸನ್ನಿವೇಶವಿದ್ದಾಗ, ಇಂಥ ಮಹಾಕಾವ್ಯವೊಂದರ ಭಾಷಾಂತರಕ್ಕೆ ಸಮಯ ಹಾಗೂ ಪ್ರಯತ್ನಗಳನ್ನು ವಿನಿಯೋಗಿಸಬೇಕಾದರೆ ಮನುಷ್ಯಕೋಟಿಯಲ್ಲಿ, ವಿಜ್ಞಾನ ಹಾಗೂ ಸಂಸ್ಕೃತಿಗಳಲ್ಲಿ ಸೋವಿಯತ್ ಜನರಿಗೆ ಎಷ್ಟೊಂದು ಶ್ರದ್ಧೆ ಇದ್ದಿರಬೇಕು. ಆದರೆ ತುಲಸೀದಾಸ್ ಕೃತಿಯ ಭಾಷಾಂತರ ಕಾರ್ಯವೂ ನಿಜವಾಗಿಯೂ ಇದೇ ಉದ್ದೇಶವನ್ನು ಸಾಧಿಸುವುದಿಲ್ಲವೆ?"

ತುಲಸೀದಾಸರ ಕುರಿತು ಎ. ಬರಾನ್ನಿಕೋವ್ ಅವರು ನಡೆಸಿದ ಸಂಶೋಧನೆಯ ಅನೇಕ ಉದ್ಧರಣಗಳನ್ನು ಭಾಷಾಂತರಿಸಿ ಭಾರತದಲ್ಲಿ ಪ್ರಕಟಿಸಲಾಗಿದೆ. ೧೯೫೫ರಲ್ಲಿ ಅವರ ಕೃತಿಯ ಸಂಪೂರ್ಣ ಹಿಂದೀ ಭಾಷಾಂತರವನ್ನು ಲಕ್ನೋದಲ್ಲಿ ಪ್ರಕಟಿಸಲಾಯಿತು. ಇದಕ್ಕೆ ಪೀಠಿಕೆ ಬರೆದಿರುವ ಭಾರತದ ವಿದ್ವನ್ಮಣಿ ರಾಹುಲ್ ಸಾಂಕೃತ್ಯಾಯನ ಅವರು ರಶಿಯಾ-ಭಾರತ ಸಾಂಸ್ಕೃತಿಕ ಸಂಬಂಧಗಳ ವಿಕಾಸದಲ್ಲಿ ಅಕಾಡೆಮಿಷಿಯನ್ ಎ. ಬರಾನ್ನಿಕೋವ್ ಅವರ ಪಾತ್ರವನ್ನು ತುಂಬ ಪ್ರಶಂಸಿಸಿದ್ದಾರೆ.

ಭಾರತದ ಛಂದಸ್ಸನ್ನು ಅತ್ಯಂತ ಸಮೀಪದ ರಶಿಯನ್ ಛಂದಸ್ಸಿಗೆ ತರಲು ಬರಾನ್ನಿಕೋವ್ ಅವರು ಪ್ರಯತ್ನಿಸಿರುವುದು ಕೃತಿಯ ಒಂದು ವಿಶಿಷ್ಟ ಲಕ್ಷಣವಾಗಿದೆ. ಪ್ರತಿಯೊಂದು ರಶಿಯನ್ ಸಾಲಿನಲ್ಲೂ ಭಾರತೀಯ ಪದ್ಯದಲ್ಲಿರುವಷ್ಟೇ ಶಬ್ದಗಳನ್ನು ಇರಿಸಿಕೊಳ್ಳಲಾಗಿದೆ ಹಾಗೂ ಯಾವುದೇ ಐರೋಪ್ಯ ಪ್ರತಿಮೆ ಹಾಗೂ ಅಲಂಕಾರಗಳಿಗೂ ಅವಕಾಶವನ್ನು ನೀಡಲಾಗಿಲ್ಲ. ಭಾರತಕ್ಕೆ ಮಾತ್ರವೆ ವಿಶಿಷ್ಟವಾಗಿರುವ ಕಲ್ಪನೆ ಹಾಗೂ ಭಾವಗಳನ್ನು ರಶಿಯನ್ ಭಾಷೆಯಲ್ಲಿ ಅವುಗಳಿಗೆ ಸಮಾನವಾದವುಗಳು ಇಲ್ಲದಂಥ ಸಂದರ್ಭಗಳಲ್ಲಿ ಮೂಲವನ್ನು ಹಾಗೇ ಉಳಿಸಿಕೊಳ್ಳಲಾಗಿದೆ.

ಸೋವಿಯತ್ ಒಕ್ಕೂಟದಲ್ಲಿ ರಾಮಾಯಣದ ಜನಪ್ರಿಯತೆಯ ಹೆಚ್ಚಿನ ಶ್ರೇಯಸ್ಸು ಮಹಿಳೆಯೊಬ್ಬಾಕೆಗೂ ಅಷ್ಟೇ ಸೇರಬೇಕಾಗಿದೆ. ನೆಹ್ರೂ ಪ್ರಶಸ್ತಿವಿಜೇತೆ ನತಾಲಿಯಾ ಗುಸೇವ ಅವರು ಮಕ್ಕಳ ರಂಗಭೂಮಿಗೆ ರಾಮಾಯಣದ ಅವತರಣಿಕೆಯನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಮಕ್ಕಳ ಥೇಟರಿಯಲ್ಲಿ ಹಲವಾರು ವರ್ಷಗಳಿಂದ ಇದು ಸತತವಾಗಿ ಪ್ರದರ್ಶಿತಗೊಳ್ಳುತ್ತಿದೆ. ತುಲಸೀದಾಸರ ರಾಮಚರಿತಮಾನಸದ ೪೦೦ನೆ ವರ್ಧಂತಿ ಸಮಯಕ್ಕೆಂದು ಸಂಗೀತರಚಕ ದ್ಜಿಮಾನಿ ಮಿಖಾಲ್ಕೋವ್ ಅವರು ರಾಗವೊಂದನ್ನು ರಚಿಸಿದರು. ರಾಮಾಯಣದ ಪ್ರತಿಮೆಗಳಿಗೂ, ತಿರುಳಿಗೂ ಈ ರಾಗವು ಅತ್ಯಂತ ಸುಂದರವಾಗಿ ಸಮರಸದಿಂದ ಹೊಂದಿಕೊಳ್ಳುತ್ತದೆ.

ವರ್ಧಂತಿ ವರ್ಷದಲ್ಲಿ ಹಲವಾರು ಸಭೆ ಸಮ್ಮೇಳನಗಳು ಸೋವಿಯತ್ ಒಕ್ಕೂಟದಲ್ಲಿ ನಡೆದಿವೆ. ಮಾಸ್ಕೋದಲ್ಲಿ ನಡೆದ ಅಂಥ ಒಂದು ಸಭೆಯಲ್ಲಿ ಖ್ಯಾತ ಸೋವಿಯತ್ ಇಂಡೊಲಜಿಸ್ಟ್ (ಭಾರತವಿದ್ಯಾವಿದ) ಪ್ರಾಚಾರ್ಯ ಎಮ್. ಜೆಲ್ಯಿಷೆವ್ ಅವರು ಮಾತನಾಡುತ್ತ "ರಾಮಾಯಣವು ಜಾಗತಿಕ ಸಾಹಿತ್ಯದಲ್ಲಿ ಒಂದು ಅತ್ಯಂತ ಭವ್ಯ ಕೃತಿಯಾಗಿದೆ. ಜನರ ಮನಸ್ಸಿನ ಮೇಲೆ ಅದು ಮಹತ್ ಪ್ರಭಾವವನ್ನು ಬೀರುತ್ತ ಬಂದಿದೆ. ಅದು ಜನರ ಹೃದಯ ಮನಸ್ಸುಗಳನ್ನೆಲ್ಲ ಸೂರೆಗೊಳ್ಳುತ್ತಿದೆ" ಎಂದು ಹೇಳಿದರು. ತುಲಸೀದಾಸರ ಈ ಅಪೂರ್ವ ಜನಪ್ರಿಯತೆಗೆ ಕಾರಣವೇನು? ಚೆಲ್ಯಿಷೇವ್ ಅದನ್ನು ಹೀಗೆ ವಿವರಿಸಿದರು: "ತುಲಸೀದಾಸರ ರಾಮಾಯಣವು ನ್ಯಾಯ ಮತ್ತು ಸುಖಕ್ಕೆ ಕರೆಕೊಡುವ ಕಥೆಯಾಗಿದೆ. ದೌರ್ಜನ್ಯ ಹಾಗೂ ನಿರಂಕುಶತೆಗಳ ವಿರುದ್ಧ ಜನರು ಅಣಿಗೊಳ್ಳುವಂತೆ ಅದು ಸಹಾಯಕವಾಗಿದೆ. ಸೋವಿಯತ್ ಜನರು ಭಾರತೀಯರ ಸಂಪನ್ನ ಸಾಂಸ್ಕೃತಿಕ ಬಳುವಳಿಗಳನ್ನು ತುಂಬು ಪ್ರೀತಿ ಹಾಗೂ ಆದರಗಳಿಂದ ನೋಡುತ್ತಾರೆ" ಎಂದರವರು.

—೦—

ಜವಳಿ ಉದ್ಯಮ

ವಿವಿಧ ಬಣ್ಣಗಳಿಂದ ಜಗಜಗಿಸುವ ಭಾರತೀಯ ಬಟ್ಟೆಗಳು ನೋಡಲು ಬಲು ಅಂದ. ಬಟ್ಟೆಗಳ ವಿನ್ಯಾಸ ಕಲೆ, ಭಾರತಕ್ಕೆ ಶತಮಾನಗಳಷ್ಟು ಹಿಂದಿನದು. ಇಲ್ಲಿಯ ಹತ್ತಿಬಟ್ಟೆಗಳು ಮಂಜಿನಷ್ಟು ಶುಭ್ರ. ರೇಷ್ಮೆ ಬಟ್ಟೆ ಬಾಳೆನಾರಿನಷ್ಟು ನವುರು. ಇವು ಕೈಮಗ್ಗ ಕ್ಷೇತ್ರಕ್ಕೆ ಭಾರತೀಯ ನೇಕಾರರ ಮತ್ತು ಕುಶಲಕರ್ಮಿಗಳ ಕೊಡುಗೆ.

ಕೈಮಗ್ಗದ ಬಟ್ಟೆಗಳು

ಭಾರತದ ಹತ್ತಿಬಟ್ಟೆ ನೇಯ್ಗೆ ಇತಿಹಾಸ, ಕ್ರಿ. ಪೂ. ೩೦೦೦ ವರ್ಷಗಳಷ್ಟು ಹಳೆಯದು. ಅತ್ಯಂತ ನವುರಾದ ಈ ಬಟ್ಟೆಗಳು ಚಿನ್ನ, ಬೆಳ್ಳಿ ಮತ್ತು ಅಮೂಲ್ಯ ಹರಳುಗಳಿಂದ ಅಲಂಕೃತಗೊಂಡು ರಾಜ-ಮಹಾರಾಜರ ಉಡುಗೆಯಾಗಿ ರಾರಾಜಿಸುತ್ತಿದ್ದವು. ಕೆಲವು ಮಸ್ಲಿನ್ ಬಟ್ಟೆಗಳಂತೂ ಕುಶಲತೆಯ ಸಂಕೇತವಾಗಿದ್ದವು. ಕೇವಲ ೯೦೦ ಗ್ರಾಂ ತೂಕದ ಹಾಗೂ ೧೩ ಮೀಟರ್ ಉದ್ದದ ಬಟ್ಟೆಯನ್ನು ಉಂಗುರದೊಳಗೆ ತೂರಿಸಬಹುದಾಗಿತ್ತು.

ಭಾರತದಲ್ಲಿ ಹತ್ತಿಬಟ್ಟೆ ಮತ್ತು ರೇಷ್ಮೆ ಮಗ್ಗಗಳು, ಅವುಗಳಿಲ್ಲದಿರುವ ಪ್ರದೇಶಗಳನ್ನು ಗುರುತಿಸಲಾರದಷ್ಟು ವಿಶಾಲವಾಗಿ ವಿಸ್ತರಿಸಿವೆ. ಪ್ರತಿಯೊಂದು ವಲಯಕ್ಕೂ ತನ್ನದೇ ಆದ ವೈಶಿಷ್ಟತೆ ಇದೆ.

ಬನಾರಸ್ ಮತ್ತು ಔರಂಗಾಬಾದ್ ಸೀರೆಗಳು ಆಕರ್ಷಕ ವಿನ್ಯಾಸ, ಹೊಳೆಯುವ ಬಣ್ಣ ಮತ್ತು ಶ್ರೇಷ್ಠ ಕುಶಲತೆಗೆ ಸುಪ್ರಸಿದ್ಧ. ಮುರ್ಶಿದಾಬಾದಿನ ಬಲೂಚಾರ್ ರೇಷ್ಮೆ ಸೀರೆಗಳು, ಮಧ್ಯಪ್ರದೇಶದ ಚಂದೇರಿಯ ವಿಶಿಷ್ಟ ಸೀರೆಗಳು, ಮನಮೋಹಕ ಮೈಸೂರು ರೇಷ್ಮೆಸೀರೆ ಮತ್ತು ಆಕರ್ಷಕ ಕಾಂಜೀವರಂ ಸೀರೆಗಳು ಫ್ಯಾಷನ್ ಪ್ರಪಂಚಕ್ಕೆ ಚಿರಪರಿಚಿತವಾಗಿವೆ.

ಕಳೆದ ದಶಕದಲ್ಲಿ ರೇಷ್ಮೆ ವಸ್ತುಗಳೂ ಸೇರಿದಂತೆ ಕೈಮಗ್ಗದ ಸೀರೆಗಳು ಮತ್ತು ಉಡುಪುಗಳ ರಫ್ತು ಹೆಚ್ಚಿದೆ. ೧೯೭೫ರ ರಫ್ತು ಪ್ರಮಾಣ ೧೦೪೯ ದಶಲಕ್ಷ ರೂ.ಗಳೆಂದು ಅಂದಾಜು.

ಜವಳಿ ಗಿರಣಿಗಳು

ವ್ಯವಸ್ಥಿತ ಹತ್ತಿ ಜವಳಿ ಕೈಗಾರಿಕೆ ಭಾರತದ ಕೈಗಾರಿಕಾ ಕ್ಷೇತ್ರದಲ್ಲಿ ಅತ್ಯಂತ ದೊಡ್ಡದು. ೬೯೫ ಜವಳಿ ಗಿರಣಿಗಳು ದೇಶದಾದ್ಯಂತ ಪ್ರಸರಿಸಿವೆ. ಈ ಗಿರಣಿಗಳಲ್ಲಿ ೧೦ ಲಕ್ಷಕ್ಕೂ ಹೆಚ್ಚು ನುರಿತ ಕಾರ್ಮಿಕರು ಕೆಲಸಮಾಡುತ್ತಿದ್ದಾರೆ, ೧೯೭೫ರಲ್ಲಿ ಜವಳಿ ಉದ್ಯಮಗಳ ಒಟ್ಟು ಸಾಮರ್ಥ್ಯ ೧೮.೯೯ ದಶಲಕ್ಷ ಕದಿರುಗಳು ಮತ್ತು ೨,೦೭,೯೮೦ ಲೂಮುಗಳು. ೧೯೭೫ರಲ್ಲಿ ದೇಶದ ಹತ್ತಿ ಬಟ್ಟೆಯ ಒಟ್ಟು ಉತ್ಪನ್ನ ೮೨೧೨ ದಶಲಕ್ಷ ಮೀಟರುಗಳು. ೧೯೬೫ರಲ್ಲಿ ೭೬೪೩ ದಶಲಕ್ಷ ಮೀಟರ್ ಬಟ್ಟೆ ಉತ್ಪಾದನೆಯಾಗಿತ್ತು.

—೦—

23·5 ಕೋಟಿ ರೂ.ಗಳ ಸಾಂಬಾರ ರಫ್ತು

ಭಾರತವು ೧೯೭೫-೭೬ರ ಪ್ರಥಮಾರ್ಧದಲ್ಲಿ ೨೩.೫ ಕೋಟಿ ರೂ. ಬೆಲೆಯ ೨೧,೩೯೦ ಟನ್ ಸಾಂಬಾರ ವಸ್ತುಗಳನ್ನು ರಫ್ತುಮಾಡಿದೆ. ಈ ಅವಧಿಯಲ್ಲಿ ಮೆಣಸಿನಕಾಯಿ, ಶುಂಠಿ ಹಾಗೂ ಮಸಾಲೆ ಪುಡಿಯ ರಫ್ತು ಪ್ರಮಾಣ ಹಾಗೂ ವಿದೇಶೀ ವಿನಿಮಯ ಗಳಿಕೆಯಲ್ಲಿ ಏರಿಕೆಯಾಗಿದೆ. ಆದರೆ, ಏಲಕ್ಕಿಯನ್ನು ಕಡಿಮೆ ಪ್ರಮಾಣದಲ್ಲಿ ರಫ್ತು ಮಾಡಿ ಹೆಚ್ಚು ವಿದೇಶೀ ವಿನಿಮಯ ಗಳಿಸಲಾಗಿದೆ.

೧೯೭೫ರ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ೯೩೧೩ ಟನ್ ಮೆಣಸು ರಫ್ತುಮಾಡಿ ೧.೨೩ ಕೋಟಿ ರೂಪಾಯಿಯನ್ನೂ ೫೦೦ ಟನ್ ಏಲಕ್ಕಿ ರವಾನಿಸಿ ೪.೭೦ ಕೋಟಿ ರೂಪಾಯಿಯನ್ನೂ ೧೯೨೧ ಟನ್ ಶುಂಠಿ ಹಾಗೂ ೩೬೦೦ ಟನ್ ಹಳದಿ ರಫ್ತುಮಾಡಿ ತಲಾ ೧.೪೫ ಕೋಟಿ ರೂಪಾಯಿಯನ್ನೂ, ಮಸಾಲೆ ಪುಡಿ ರವಾನೆಯಿಂದ ೫೪ ಲಕ್ಷ ರೂಪಾಯಿಯನ್ನೂ ಗಳಿಸಲಾಯಿತು. ಭಾರತವು ಸಂಬಾರಗಳ ರಫ್ತಿನಿಂದ ೧೯೭೪-೭೫ರಲ್ಲಿ ೬೧.೩ ಕೋಟಿ ರೂ.ಗಳನ್ನೂ ೧೯೭೩-೭೪ರಲ್ಲಿ ೫೫.೧ ಕೋಟಿ ರೂ.ಗಳನ್ನೂ ಗಳಿಸಿತ್ತು.

—೦—

ಮಂಗಳೂರಲ್ಲಿ ಕರ್ನಾಟಕ ರಾಜ್ಯಪಾಲರು

ಪ್ರಥಮಬಾರಿ ಮಂಗಳೂರಿಗೆ ಆಗಮಿಸಿದ ಕರ್ನಾಟಕ ರಾಜ್ಯದ ನೂತನ ರಾಜ್ಯಪಾಲ ಶ್ರೀ ಉಮಾಶಂಕರ ದೀಕ್ಷಿತರ ಬಗ್ಗೆ ಮಂಗಳೂರು ಪುರಸಭೆಯು ತಾ. ೨೨ರಂದು ಸಂಜೆ ಪುರಭವನದಲ್ಲಿ ನಾಗರಿಕ ಸನ್ಮಾನವನ್ನು ಏರ್ಪಡಿಸಿತ್ತು. ಮಾನಪತ್ರಕ್ಕೆ ಉತ್ತರನೀಡಿ ಮಾಡಿದ ಭಾಷಣದಲ್ಲಿ ಶ್ರೀ। ದೀಕ್ಷಿತರು, "ಯಾವುದೇ ಬೆಳೆಯುತ್ತಿರುವ ನಗರಪ್ರದೇಶಗಳಿಗೆ ನಿಯೋಜಿತ ಯೋಜನೆಯಿರಬೇಕಾದುದು ಅಗತ್ಯ. ಆರ್ಥಿಕ ಕೊರತೆ ಕಂಡುಬರುವಲ್ಲಿ ಆಕ್ಟ್ರಾಯಿ ಒಂದನ್ನೇ ಅವಲಂಬಿಸುವ ಬದಲು ಇತರ ಅನೇಕ ವಿಧಗಳಿಂದ ಅದರ ಅನುಕೂಲ ಪಡೆದುಕೊಳ್ಳಬಹುದು. ನಾನು ವಿವಿಧ ಅಧಿಕಾರದಲ್ಲಿದ್ದಾಗ ಆಕ್ಟ್ರಾಯಿ ರದ್ದತಿ ಹಾಗು ಈ ಬಗ್ಗೆ ಎರಡು ಸಲಹೆಗಳನ್ನು ಸಲ್ಲಿಸಿದ್ದು ಈ ಪೈಕಿ ಒಂದು ಪರಿಶೀಲನೆಯಲ್ಲಿದೆ. ಅಭಿವೃದ್ಧಿ ಹೊಂದುತ್ತಿರುವ ಮಂಗಳೂರಿನಂತಹ ನಗರಗಳಲ್ಲಿ ಹೆಚ್ಚುತ್ತಿರುವ ಬೇಡಿಕೆ ಆವಶ್ಯಕತೆಗಳನ್ನು ಪೂರೈಸುವರೆ ಆರ್ಥಿಕ ಮೂಲಗಳಿಗಾಗಿ ಪುರಸಭಾ ತೆರಿಗೆ ಮತ್ತಿತರ ಉತ್ಪಾದನಾ ಸಂಸ್ಥೆಗಳ ಮೇಲಣ ತೆರಿಗೆಯನ್ನು ವಸೂಲುಮಾಡುವ ಕಾರ್ಯ ಶೀಘ್ರ ಜ್ಯಾರಿಗೆ ತರಬಹುದು" ಮುಂತಾಗಿ ಸಲಹೆಕೊಟ್ಟರು. ಆರಂಭದಲ್ಲಿ ನಗರಸಭಾಪತಿ ಬ್ಲೇಸಿಯಸ್ ಡಿ'ಸೋಜರು ಸ್ವಾಗತಬಯಸಿ ನಾಗರಿಕರ ಪರವಾಗಿ ರಾಜ್ಯಪಾಲರಿಗೆ ಮಾನಪತ್ರ ಅರ್ಪಿಸಿದ್ದರು.

ರೋಟರಿ ಕ್ಲಬ್ ವರ್ಧಂತಿ

ಮಂಗಳೂರು ನೊರ್ತ್ ರೋಟರಿ ಕ್ಲಬ್ಬಿನ ೭ನೇ ವರ್ಧಂತ್ಯುತ್ಸವವು ತಾ. ೨೧ರಂದು ಸಾಯಂಕಾಲ ಪಿ. ವಿ. ಎಸ್. ಕಲಾಕುಂಜದಲ್ಲಿ ಕ್ಲಬ್ಬಿನ ಅಧ್ಯಕ್ಷ ರೋ। ಬಿ. ಪಿ. ಬಾಳಿಗರ ಅಧ್ಯಕ್ಷತೆಯಲ್ಲಿ ನಡೆಯಿತು. ಮಂಗಳೂರು ರೋಟರಿ ಕ್ಲಬ್ಬಿನ ಅಧ್ಯಕ್ಷ ಶ್ರೀ। ಮಧುಸೂದನ ಡಿ. ಕುಶೆ, ಬಂಟ್ವಾಳ ರೋಟರಿ ಕ್ಲಬ್ ಅಧ್ಯಕ್ಷ ಶ್ರೀ। ಪಿ. ಸದಾಶಿವ ರೈ, ಬೆಳ್ತಂಗಡಿ ರೋಟರಿ ಕ್ಲಬ್ ಅಧ್ಯಕ್ಷ ಶ್ರೀ। ಬಿ. ರವಿಚಂದ್ರ ಮತ್ತು ಕುಂದಾಪುರ ರೋಟರಿ ಕ್ಲಬ್ ಅಧ್ಯಕ್ಷ ಶ್ರೀ। ನಾರಾಯಣರಾವ್ ಇವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ಅಭಿನಂದನಾ ಭಾಷಣಗಳನ್ನು ಮಾಡಿದರು. ಈ ಸಂದರ್ಭದಲ್ಲಿ ಕ್ಲಬ್ಬಿನ ಮಾಜಿ ಅಧ್ಯಕ್ಷರುಗಳಿಗೆ ಪುಷ್ಪಹಾರಗಳನ್ನು ತೊಡಿಸಿ ಸನ್ಮಾನಿಸಲಾಯಿತು. ಶ್ರೀ। ಎಸ್. ಪಾಂಡುರಂಗ ನಾಯಕ್ ಮತ್ತು ಶ್ರೀ। ಪಿ. ವಾಸುದೇವರಾವ್ ಇವರಿಗೆ ರೋಟರಿ ದೀಕ್ಷೆಯಿತ್ತು ಕ್ಲಬ್ಬಿನ ನೂತನ ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಯಿತು. ಕ್ಲಬ್ಬಿನ ೨೦ ಮಂದಿ ಚಾರ್ಟರ್ಡ್ ಸದಸ್ಯರಲ್ಲಿ ಶೇಕಡಾ ೧೦೦ರ ಹಾಜರಿ ಪಾಲಿಸಿಕೊಂಡು ಬಂದ ೮ ಮಂದಿಗೆ ಈ ಸಂದರ್ಭದಲ್ಲಿ ಮೆಮೆಂಟೋಗಳನ್ನು ಹಂಚಲಾಯಿತು. ಕ್ಲಬ್ಬು ಪ್ರಾರಂಭವಾಗುವಾಗ ಇದ್ದ ಸದಸ್ಯರ ಸಂಖ್ಯೆ ಈ ದಿನ ನೂತನವಾಗಿ ಸೇರಿಸಲ್ಪಟ್ಟ ಇಬ್ಬರು ಹೊಸ ಸದಸ್ಯರ ಸಹಿತ ೫೭ಕ್ಕೆ ಮುಟ್ಟಿದೆ. ಪ್ರಾರಂಭದಲ್ಲಿ ರೋ। ಬಿ. ಪಿ. ಬಾಳಿಗರು ಸ್ವಾಗತಿಸಿ ಕೊನೆಯಲ್ಲಿ ರೋ। ಆರ್. ಎನ್. ಮಣೇಲ್ ಧನ್ಯವಾದಗಳನ್ನರ್ಪಿಸಿದರು. ಕ್ಲಬ್ಬಿನ ಇಂಟರಾಕ್ಟ್ ಸದಸ್ಯರಿಂದ ಕನ್ನಡ ಪ್ರಹಸನವೊಂದು ಅಂತ್ಯದಲ್ಲಿ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು.

ಕ್ರೀಡಾಕೂಟ

ದಕ್ಷಿಣ ಕನ್ನಡ ಜಿಲ್ಲೆಯ ೪೩ ಜೂನಿಯರ್ ಕಾಲೇಜುಗಳ ಮತ್ತು ೭ ಅಧ್ಯಾಪಕ ತರಬೇತಿ ಸಂಸ್ಥೆಗಳ ವಾರ್ಷಿಕ ಕ್ರೀಡಾಕೂಟವು ಈ ಬಾರಿ ಅಳಿಕೆಯ ಸತ್ಯಸಾಯಿ ವಿಹಾರದ ಭವ್ಯ ಕ್ರೀಡಾಂಗಣದಲ್ಲಿ ನಡೆಯಿತು. ೨೩ ಕಾಲೇಜುಗಳ ೨೦೦ ಕ್ರೀಡಾಪಟುಗಳು ಅದರಲ್ಲಿ ಭಾಗವಹಿಸಿದ್ದರು. ವಿಧಾನಸಭಾಸದಸ್ಯ ಶ್ರೀ। ಯು. ಟಿ. ಫರೀದ್ ಕ್ರೀಡಾಕೂಟವನ್ನು ಉದ್ಘಾಟಿಸಿದ್ದರು.

ವೈ. ಎಂ. ಸಿ. ಎ. ಸಮ್ಮೇಳನ

ಬೆಂಗಳೂರು, ಮೈಸೂರು, ಹುಬ್ಬಿ, ಧಾರವಾಡ, ಬೆಳಗಾವಿ, ಮಡಿಕೇರಿ ಮತ್ತು ಗುಲ್ಬರ್ಗಾಗಳ ವೈ. ಎಂ. ಸಿ. ಎ.ಯ ೨೦ ಮಂದಿ ಪ್ರತಿನಿಧಿಗಳ ಸಮ್ಮೇಳನವೊಂದು ಇತ್ತೀಚೆಗೆ ಮಂಗಳೂರಿನ ಕರ್ನಾಟಕ ಥಿಯೊಲೊಜಿಕಲ್ ಕೊಲೇಜಿನಲ್ಲಿ ಜರಗಿತು. ರೆ। ಎಸ್. ಆರ್. ಫುರ್ತಾದೋ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ವೈ. ಎಂ. ಸಿ. ಎ.ಯ ಕರ್ನಾಟಕ ಏರಿಯಾ ಮೆನೇಜರ್ ಡಾ। ಸಿ. ಡಿ. ಜತ್ತನ್ನ ಅವರು ವೈ. ಎಂ. ಸಿ. ಎ. ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿವರಣೆಯಿತ್ತರು.

ಮಂಗಳೂರು ರೋಟರಿ ಕ್ಲಬ್ಬಿನಲ್ಲಿ ಲಾಯನ್ ನಾರಾಯಣಾಚಾರ್

ಮಂಗಳೂರು ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯು ತಾ. ೨೨ರಂದು ಸಂಜೆ ಮೋತಿಮಹಲಿನಲ್ಲಿ ಶ್ರೀ। ಮಧುಸೂದನ ಡಿ. ಕುಶೆಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಮಂಗಳೂರು ಲಾಯನ್ಸ್ ಕ್ಲಬ್ ಅಧ್ಯಕ್ಷ ಆರ್. ನಾರಾಯಣ ಆಚಾರ್ ರವರು ಮುಖ್ಯ ಅತಿಥಿಯಾಗಿ ಭಾಗವಹಿಸಿ, "ಸಾಮಾಜಿಕ ಸ್ಥಿತಿಗತಿಗಳಲ್ಲಿ ಮಾರ್ಪಾಟ" ಎಂಬ ವಿಷಯದ ಕುರಿತು ವಿಚಾರಪರಿಪ್ಲುತ ಭಾಷಣಗೈದಿದ್ದರು. ಆರಂಭದಲ್ಲಿ ರೋ। ಡಾ। ಎಸ್. ಆರ್. ಭಂಡಾರಿಯವರಿಂದ ಪ್ರಾರ್ಥನೆ, ಅಧ್ಯಕ್ಷರಿಂದ ಸ್ವಾಗತ, ಕಾರ್ಯದರ್ಶಿಯವರ ಪ್ರಕಟಣೆಗಳಾದ ಮೇಲೆ ರೋ। ಪಿ. ಸಂಬಿಯಾರ್‌ರವರು ಮುಖ್ಯ ಅತಿಥಿಗಳ ಪರಿಚಯಮಾಡಿಕೊಟ್ಟರು. ಶ್ರೀ। ಆಚಾರ್‌ರವರು ತಮ್ಮ ಭಾಷಣದಲ್ಲಿ, "ಬದಲಾವಣೆಯು ಪ್ರಕೃತಿಯನ್ನೂ ಬಿಟ್ಟಿಲ್ಲ ಎನ್ನುವಾಗ ಅದಕ್ಕೆ ತಕ್ಕಂತೆ ಹೊಂದಿಕೊಳ್ಳುವುದು ಅಗತ್ಯ, ಜನಸಾಮಾನ್ಯವನ್ನು ಉದ್ಧರಿಸುವ ಪ್ರಯತ್ನ ನಡೆಯಬೇಕು. ಸ್ಥಾನಮಾನ, ಅಂತಸ್ತುಗಳನ್ನು ಮರೆತು ಜನಸಾಮಾನ್ಯನ ಮಟ್ಟಕ್ಕಿಳಿಯಲು ಸೇವಾಸಂಸ್ಥೆಗಳು ದುಡಿದರೇನೆ ಅವುಗಳಿಗೆ ಉಳಿವು; ಇಲ್ಲದೆಹೋದಲ್ಲಿ ಅಳಿವು ನಿಶ್ಚಿತ" ಎಂಬುದಾಗಿ ಹೇಳಿದರು. ಕೊನೆಯಲ್ಲಿ ಶ್ರೀ। ಕೆ. ರಾಮಮೋಹನರಾವ್ ಧನ್ಯವಾದಗಳನ್ನರ್ಪಿಸಿದರು.

ಜೇಸಿ ಪದಗ್ರಹಣ ಸಮಾರಂಭ

ಮಂಗಳೂರು ಜ್ಯೂನಿಯರ್ ಚೇಂಬರಿನ ೧೯೭೬ನೇ ಸಾಲಿನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಇತ್ತೀಚೆಗೆ ಮೋತಿಮಹಲಿನಲ್ಲಿ ಜರಗಿತು. ಜೇಸಿ ಬಿ. ಶ್ರೀಕಾಂತ ಕಾಮತ್ ಅಧ್ಯಕ್ಷರಾಗಿ, ಜೇಸಿ ದಯಾಲನ್ ರಾಜೇಶ್, ಜೇಸಿ ಅಡ್ರಿನ್ ಸಲ್ಡಾನ ಉಪಾಧ್ಯಕ್ಷರುಗಳಾಗಿ, ಜೇಸಿ ಕೆ. ಸುರೇಶ ಭಂಡಾರಿ ಕಾರ್ಯದರ್ಶಿಯಾಗಿ, ಜೇಸಿ ಕಿರಣದತ್ ಜೊತೆಕಾರ್ಯದರ್ಶಿಯಾಗಿ. ಜೇಸಿ ಎಂ. ರಂಗ ಪೈ, ಖಜಾಂಚಿಯಾಗಿ ೧೯೭೬ನೇ ಸಾಲಿನ ಅಧಿಕಾರ ಸ್ವೀಕಾರಗೈದರು. ಸಿಂಡಿಕೇಟ್ ಬ್ಯಾಂಕಿನ ಅಧಿಕಾರಿ ಜೇಸಿ ಗರ್ನೆಟ್ ರೇಗೊ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿದ್ದರು.

ಕರಾವಳಿ ಹಾಕ್ಕಿ ಪ್ರಶಸ್ತಿ

ತಾ. ೨೧ರಂದು ಮಂಗಳೂರು ನೆಹರೂ ಮೈದಾನಿನಲ್ಲಿ ನಡೆದ ಎಂ. ಜಿ. ಎಸ್. ಸ್ಮಾರಕ ಕರಾವಳಿ ವಲಯ ಹಾಕ್ಕಿಫೈನಲಿನಲ್ಲಿ ಮಂಗಳೂರು ಸೈಂಟ್ ಎಲೋಸಿಯಸ್ ಕೊಲೇಜು ಕಾರ್ಕಳದ ಶ್ರೀ ಭುವನೇಂದ್ರ ಕೊಲೇಜನ್ನು ೩-೨ ಗೋಲುಗಳಿಂದ ಸೋಲಿಸಿ ಪ್ರಶಸ್ತಿಯನ್ನು ತನ್ನದಾಗಿಸಿತು.

ನಿಧನ

ಕೆನರಾ ಬ್ಯಾಂಕಿನಲ್ಲಿ ದೀರ್ಘಕಾಲದ ಸೇವೆ ಸಲ್ಲಿಸಿ ಇತ್ತೀಚೆಗೆ ಬ್ಯಾಂಕಿನ ಬೆಂಗಳೂರು ಸ್ಟಾಫ್ ಟ್ರೈನಿಂಗ್ ಕೊಲೇಜಿನ ಸುಪರಿಂಟೆಂಡೆಂಟ್ ಸ್ಥಾನದಿಂದ ನಿವೃತ್ತರಾದ ಶ್ರೀ। ಪಿ. ಎಲ್. ನಾಯಕ್ ಅವರ ಧರ್ಮಪತ್ನಿ ಶ್ರೀಮತಿ ರಮಾಬಾಯಿ ಎಲ್. ನಾಯಕ್ ಅವರು ಅಲ್ಪಕಾಲದ ಅಸ್ವಸ್ಥದ ಬಳಿಕ ಕಳೆದ ತಾ. ೧೯ರಂದು ಪ್ರಾತಃಕಾಲ ಬೆಂಗಳೂರಿನ ಸ್ವಗೃಹದಲ್ಲಿ ತಮ್ಮ ೫೫ನೇ ವಯಸ್ಸಿನಲ್ಲಿ ದೈವಾಧೀನರಾದರು. ಇಬ್ಬರು ಪುತ್ರರು, ಮೂವರು ಪುತ್ರಿಯರು, ಪತಿ, ವೃದ್ಧ ಮಾತೆ, ಅಜ್ಜಿ ಮತ್ತು ಅಪಾರ ಬಂಧುಮಿತ್ರರನ್ನು ಅವರು ಅಗಲಿದ್ದಾರೆ.

—೦—

ಕಾಫಿ ಉದ್ಯಮದ ಬೆಳೆವಣಿಗೆ

ಭಾರತದಲ್ಲಿ ಕಾಫಿ ಉತ್ಪಾದನೆಯು ಕಳೆದ ೩೫ ವರ್ಷಗಳಲ್ಲಿ ಶೇಕಡ ೫೩೫ರಷ್ಟು ಏರಿದೆ. ೧೯೪೧ರಲ್ಲಿ ೧೪,೪೫೪ ಟನ್‌ಗಳಿದ್ದುದು ೧೯೭೪-೭೫ರಲ್ಲಿ ೯೨,೦೦೦ ಟನ್‌ಗೇರಿದೆ.

೧೯೭೪-೭೫ರಲ್ಲಿ ಕಾಫಿ ರಫ್ತು ಗಳಿಕೆ ೫೮ ಕೋಟಿ ರೂಪಾಯಿಯ ಹೊಸ ಮಜಲಿಗೇರಿತು.

ಕಾಫಿ ಮಂಡಳಿಯ ಚಟುವಟಿಕೆಗಳು ಕಾಫಿ ಉದ್ಯಮದಲ್ಲಿ ಸರ್ವಾಂಗೀಣವಾಗಿ ವಿಸ್ತರಿಸಿದೆ.

೫೪ ಸಾವಿರಕ್ಕಿಂತಲೂ ಹೆಚ್ಚು ಕಾಫಿ ಎಸ್ಟೇಟುಗಳ ೫೨ ಸಾವಿರ ಸಣ್ಣಪ್ರಮಾಣದ ಕಾಫಿ ಬೆಳೆಗಾರರಿಗೆ ಸಹಾಯಮಾಡುವುದೇ ಮಂಡಳಿಯ ಮುಖ್ಯೋದ್ದೇಶವಾಗಿದೆ. ಕಾಫಿ ಎಸ್ಟೇಟುಗಳಲ್ಲಿ ಸುಮಾರು ೨.೫ ಲಕ್ಷ ಕಾರ್ಮಿಕರಿರುವುದರಿಂದ ಅವರಿಗಾಗಿ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ದೇಶದಲ್ಲಿ ವಾರ್ಷಿಕ ೪೦ ಸಾವಿರ ಟನ್ ಕಾಫಿ ಮಾರಾಟವಾಗುತ್ತಿದೆ.

—೦—

ಹೆದ್ದಾರಿಗಳು — ಅಭಿವೃದ್ಧಿಯ ಬಾಗಿಲು

[ಶ್ರೀ। ಜೆ. ಎಸ್. ಮಾರ್ಯಾ]

ಹೆದ್ದಾರಿಗಳು ದೇಶದ ಜೀವನಾಡಿಗಳಿದ್ದಂತೆ. ಅವುಗಳ ದೃಢತೆಯೇ ದೇಶದ ಭವಿಷ್ಯ.

ಸ್ವಾತಂತ್ರ್ಯದ ನಂತರದ ಅಭಿವೃದ್ಧಿ ಚಟುವಟಿಕೆಗಳಿಂದಾಗಿ ರಸ್ತೆಸಂಪರ್ಕಗಳ ಅವಶ್ಯಕತೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಿದೆ. ಕಳೆದ ದಶಕದಲ್ಲಿ ರಸ್ತೆಗಳ ಮುಖಾಂತರದ ಸರಕು ಸಾಗಣಿಕೆ ಕಾರ್ಯ ದ್ವಿಗುಣಗೊಂಡಿದೆ. ಸಾಗಾಣಿಕೆಯ ಪ್ರಮಾಣ ೧೯೭೩–೭೪ರಲ್ಲಿ ೬೫ ಬಿಲಿಯ ಟನ್ ಕಿಲೋಮೀಟರ್‌ಗಳಿಗೇರಿತು. ೧೯೭೮–೭೯ರಲ್ಲಿ ಇದು ೧೧೦ ಬಿಲಿಯನ್ ಟನ್ ಕಿಲೋಮೀಟರಿಗೇರುವ ಅಂದಾಜು ಇದೆ. ಈ ಒತ್ತಡವನ್ನು ಭರಿಸುವ ಸಲುವಾಗಿ ಹೆದ್ದಾರಿ ಜಾಲವನ್ನು ಸದೃಢಗೊಳಿಸುವುದು ಅತ್ಯಗತ್ಯ.

ಹಲವಾರು ರಾಷ್ಟ್ರೀಯ ಆದ್ಯತೆ ಕ್ಷೇತ್ರಗಳಿಂದಾಗಿ ಹೆದ್ದಾರಿಗಳಿಗಾಗಿ ದೊರೆತಿರುವ ಹಣ ಸಂಪನ್ಮೂಲ ಅತ್ಯಲ್ಪ. ಲಭ್ಯವಿರುವ ಹಣವನ್ನು ಪ್ರಯೋಜನಕಾರಿಯಾಗಿ ಬಳಸಿಕೊಳ್ಳುವುದೇ ಸದ್ಯದ ಗುರಿ. ರಸ್ತೆ ಅಭಿವೃದ್ಧಿಗಾಗಿ ಸರ್ಕಾರ ದ್ವಿಮುಖ ಸೂತ್ರವೊಂದನ್ನು ರೂಪಿಸಿದೆ. ಒಂದು ಕಡೆ ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಸಂಪರ್ಕಗಳ ನಿರ್ಮಾಣ ಪ್ರಯತ್ನ ನಡೆದಿದ್ದರೆ ಮತ್ತೊಂದು ಕಡೆ ಮೂಲ ರಸ್ತೆ ಜಾಲಗಳ ನಿರ್ಮಾಣಕಾರ್ಯ ನಡೆದಿದೆ.

ಆಧುನಿಕ ತಂತ್ರಗಳ ಬಳಕೆ

ರಸ್ತೆಗಳ ನಿರ್ಮಾಣಕಾರ್ಯಗಳಲ್ಲಿ ಆಧುನಿಕ ತಂತ್ರಗಳನ್ನು ಬಳಸಿಕೊಳ್ಳಲಾಗುತ್ತಿದೆ. ಹೆದ್ದಾರಿ ನಿರ್ಮಾಣಕಾರ್ಯ ಇಂದು ಒಂದು ವಿಜ್ಞಾನವಾಗಿ ಮಾರ್ಪಟ್ಟಿದೆ.

ಭೂಸ್ವಾಧೀನ, ಪ್ರಗತಿಯ ಅಂದಾಜು, ವಸ್ತುಗಳ ಸಂಗ್ರಹಣೆ, ವಿನ್ಯಾಸ, ಗುಣಮಟ್ಟ ಮುಂತಾದ ಕಾರ್ಯಗಳ ನಿರ್ವಹಣೆಗಾಗಿ ವಿಶೇಷ ಘಟಕಗಳನ್ನು ಸ್ಥಾಪಿಸಲಾಗಿದೆ. ಪೂರ್ವಭಾವೀ ಮತ್ತು ಸುದೀರ್ಘ ಅನ್ವೇಷಣಾಕಾರ್ಯಗಳಿಗಾಗಿ ಪ್ರತ್ಯೇಕ ವಿಭಾಗಗಳನ್ನು ಸ್ಥಾಪಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಪೂರ್ವಭಾವೀ ಯೋಜನೆಯ ಹಂತದಲ್ಲೇ ಸಮಸ್ತ ವಿವರಗಳನ್ನು ಸಂಗ್ರಹಿಸಿ ಪರೀಕ್ಷಿಸಿದಲ್ಲಿ ಗರಿಷ್ಟ ಮಟ್ಟದಲ್ಲಿ ವೆಚ್ಚದ ಉಳಿತಾಯವನ್ನು ಸಾಧಿಸಬಹುದೆಂದು ಅನುಭವದಿಂದ ತಿಳಿದುಬಂದಿದೆ. ವಿಶೇಷವಾಗಿ ತಾಂತ್ರಿಕ ಅನ್ವೇಷಣಾ ಕಾರ್ಯಗಳನ್ನು ಕೈಗೊಳ್ಳುವ ಸಲುವಾಗಿ ಅನ್ವೇಷಣಾ ವಿಭಾಗಗಳನ್ನು ವಿಸ್ತರಿಸಲಾಗುತ್ತಿದೆ.

ಸುಧಾರಿತ ತರಬೇತಿ

ಸೂಕ್ತ ತರಬೇತಿ ಪಡೆದ ಹೆದ್ದಾರಿ ಇಂಜಿನಿಯರುಗಳ ದಳವೊಂದನ್ನು ಸ್ಥಾಪಿಸುವತ್ತ ವಿಶೇಷ ಗಮನ ಹರಿಸಲಾಗಿದ್ದು, ಕಳೆದ ೨೫ ವರ್ಷಗಳಲ್ಲಿ ಈ ದಿಸೆಯಲ್ಲಿ ಪ್ರಗತಿ ಸಾಧಿಸಲಾಗಿದೆ. ಸಿಬ್ಬಂದಿಗೆ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಪರಿಚಯ ಮಾಡಿಕೊಡುವ ಸಲುವಾಗಿ ರಾಷ್ಟ್ರೀಯ ಲೆಬೊರೇಟರಿಗಳು ಮತ್ತು ವಿಶ್ವವಿದ್ಯಾನಿಲಯಗಳು ರಿಫ್ರೆಷರ್ ವರ್ಗಗಳನ್ನು ನಡೆಸುತ್ತಿವೆ. ಹಡಗು ಮತ್ತು ಸಾಗಾಣಿಕೆ ಖಾತೆಯ ರಸ್ತೆ ವಿಭಾಗವು ಈಗಾಗಲೇ ದೇಶದ ವಿವಿಧ ಭಾಗಗಳಲ್ಲಿ ಹೆದ್ದಾರಿಗಳ ವಿನ್ಯಾಸ ಮತ್ತು ನಿರ್ಮಾಣಕಾರ್ಯಗಳಿಗೆ ಸಂಬಂಧಿಸಿದ ಇತ್ತೀಚಿನ ವೈಜ್ಞಾನಿಕ ತಂತ್ರಗಳ ಬಗ್ಗೆ ಪರಿಚಯಮಾಡಿಕೊಡುವ ಸಲುವಾಗಿ ಅನೇಕ ತರಬೇತಿ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇದೆಲ್ಲದರ ಜೊತೆಗೆ ಅನೇಕ ಇಂಜಿನಿಯರುಗಳು ವಿದೇಶಗಳಲ್ಲಿಯೂ ಸಹ ತರಬೇತಿ ಪಡೆದಿದ್ದಾರೆ.

ಸಂಶೋಧನಾಕಾರ್ಯಗಳ ಮೂಲಕ ಹೊಸ ತಂತ್ರಗಳನ್ನು ರೂಪಿಸಲು ಈಗ ಪ್ರಯತ್ನ ನಡೆದಿದೆ. ಸ್ಥಳೀಯವಾಗಿ ದೊರೆಯುವ ವಸ್ತುಗಳನ್ನು ನಿರ್ಮಾಣಕಾರ್ಯದಲ್ಲಿ ಬಳಸಿ ವೆಚ್ಚದ ಉಳಿತಾಯಮಾಡುವುದೇ ಇದರ ಉದ್ದೇಶ. ಪರೀಕ್ಷಣಾ ಪ್ರಯೋಗಶಾಲೆಗಳನ್ನು ಸ್ಥಾಪಿಸುವ ಸಲುವಾಗಿ ರಾಜ್ಯಗಳ ಹೆದ್ದಾರಿ ಇಲಾಖೆಗಳಿಗೆ ಕೇಂದ್ರ ಸರ್ಕಾರ ನೆರವುನೀಡುತ್ತಿದೆಯಲ್ಲದೆ ಬಹುತೇಕ ರಾಜ್ಯಗಳು ಈಗಾಗಲೇ ಇಂಥ ಪ್ರಯೋಗಾಲಯಗಳನ್ನು ಹೊಂದಿವೆ.

ಗುಣಮಟ್ಟ

ರಸ್ತೆಗಳ ನಿರ್ಮಾಣ ಹಂತದಲ್ಲಿ ಗುಣಮಟ್ಟವನ್ನು ಕಾಯ್ದುಕೊಂಡು ಬರುವ ಸಲುವಾಗಿ ಇಂಡಿಯನ್ ರೋಡ್ ಕಾಂಗ್ರೆಸ್ ವೈಜ್ಞಾನಿಕ ಸೂತ್ರಗಳನ್ನು ರೂಪಿಸಿದೆ. ಗುಣಮಟ್ಟವನ್ನು ಕಾಯ್ದುಕೊಂಡು ಬರುವ ಸಲುವಾಗಿ ಎಲ್ಲಾ ಹೆದ್ದಾರಿ ಇಲಾಖೆಗಳಲ್ಲೂ ಪ್ರತ್ಯೇಕ ವಿಭಾಗಗಳನ್ನು ರಚಿಸಲಾಗಿದೆ.

ಈ ಎಲ್ಲ ಪ್ರಯತ್ನಗಳಿಂದಾಗಿ ಇಂದು ನಮ್ಮ ದೇಶವು ಅತ್ಯುತ್ತಮ ಹೆದ್ದಾರಿ ಇಂಜಿನಿಯರುಗಳನ್ನು ಹೊಂದಿದೆ. ಅವರ ಸೇವೆ, ಕಾರ್ಯಕುಶಲತೆ ದೇಶದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲೂ ಪ್ರಶಂಸೆಗೆ ಪಾತ್ರವಾಗಿದೆ.

ಭಾರತದಲ್ಲಿ ಕೃಷಿಕ್ಷೇತ್ರ

೧೯೭೫ರ ಅಂದಾಜಿನಂತೆ, ಒಟ್ಟು ೬೦ ಕೋಟಿ ಜನಸಂಖ್ಯೆಯ ಶೇಕಡಾ ೮೦ ಭಾಗ ಜನರು ಗ್ರಾಮೀಣ ಪ್ರದೇಶದಲ್ಲಿರುತ್ತಾರೆ ಹಾಗೂ ಒಟ್ಟು ಕಾರ್ಮಿಕರಲ್ಲಿ ಶೇಕಡಾ ೭೯ ಭಾಗ ಜನರು ಕೃಷಿಕಾರ್ಯದಲ್ಲಿ ತೊಡಗಿದ್ದಾರೆ. ಒಟ್ಟು ಬೆಳೆಯಿರುವ ೧೬೭೦ ಲಕ್ಷ ಹೆಕ್ಟೇರ ಪ್ರದೇಶದ ೭೫ ಪ್ರತಿಶತ ಭಾಗ ಭೂಮಿಯಲ್ಲಿ ಆಹಾರ ಧಾನ್ಯಗಳನ್ನು ಬೆಳೆಯಲಾಗುತ್ತದೆ.

೧೯೭೦–೭೧ರಲ್ಲಿ ಕೃಷಿ ಉತ್ಪಾದನೆಯು ೧೦೮.೪ ಮಿಲಿಯ ಟನ್ನುಗಳಿಗೆ ಹೆಚ್ಚಿತಲ್ಲದೆ ಒಂದು ವಿಕ್ರಮವನ್ನೇ ಸ್ಥಾಪಿಸಿತು. (೧೯೬೪-೬೫ರಲ್ಲಿ ಕೃಷಿ ಉತ್ಪಾದನೆ ಕೇವಲ ೮೯ ಮಿಲಿಯ ಟನ್ ಇತ್ತು.) ೧೯೭೧-೭೨ ಮತ್ತು ೧೯೭೨-೭೩ರಲ್ಲಿ ಕ್ಷಾಮ, ಪ್ರವಾಹ, ಬಿರುಗಾಳಿ ಮುಂತಾದ ನೈಸರ್ಗಿಕ ಪ್ರಕೋಪದಿಂದಾಗಿ ಕೃಷಿ ಉತ್ಪಾದನೆಯಲ್ಲಿ ಇಳಿಕೆಯುಂಟಾಯಿತಲ್ಲದೇ ೧೯೭೩ — ೭೪ರಲ್ಲಿ ಕೂಡ ಈ ವಿಕ್ರಮವನ್ನು ಮುಟ್ಟುವುದು ಸಾಧ್ಯವಾಗಲಿಲ್ಲ. (೧೯೭೫-೭೬ರಲ್ಲಿ ಮಾತ್ರ ಕೃಷಿ ಉತ್ಪಾದನೆಯು ಹಿಂದಿನ ಎಲ್ಲ ದಾಖಲೆಗಳನ್ನು ಮುರಿದು ೧೧೪ ಮಿಲಿಯ ಟನ್‌ಗೆ ಮುಟ್ಟಬಹುದೆಂದು ಅಂದಾಜು ಮಾಡಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಕೃಷಿಕ್ಷೇತ್ರದಲ್ಲಿ ಹೊಸ ತಾಂತ್ರಿಕತೆಯ ಬಳಸುವಿಕೆಯು ಗಣನೀಯ ಪ್ರಮಾಣದಲ್ಲಿ ಹೆಚ್ಚಿದ್ದು ಅಧಿಕ ಇಳುವರಿ ಬೀಜಗಳು, ರಾಸಾಯನಿಕ ಗೊಬ್ಬರ ಮತ್ತು ಆಧುನಿಕ ಕೃಷಿ ಉಪಕರಣಗಳ ಬೇಡಿಕೆಯು ಕೂಡ ಹೆಚ್ಚಿದೆ.

——

ಯಂತ್ರೋಪಕರಣಗಳು

೧೯೬೦ರವರೆಗೆ ಭೂ ಸಾಗುವಳಿ ಮತ್ತು ನೀರಾವರಿಯಲ್ಲಿ ಯಂತ್ರೋಪಕರಣಗಳ ಬಳಕೆ ಬಹಳ ವಿರಳವಾಗಿತ್ತು. ಕೃಷಿ ಅಭಿವೃದ್ಧಿಯ ಮಹತ್ವ ಹೆಚ್ಚಿದಂತೆ ಕೃಷಿ ಯಾಂತ್ರೀಕರಣವು ಮಹತ್ವವನ್ನು ಪಡೆಯುತ್ತಿದೆ. ಟ್ರ್ಯಾಕ್ಟರ್‌ಗಳ ಉಪಯೋಗವು ೧೯೬೬ ರಲ್ಲಿ ೫೪,೦೦೦ದಿಂದ ೧೯೭೪—೭೫ರಲ್ಲಿ ೨,೪೩,೧೦೦ಕ್ಕೆ ಹೆಚ್ಚಿದೆ. ರಾಜ್ಯಗಳಲ್ಲಿ ಕೃಷಿ ಯಂತ್ರೋಪಕರಣಗಳನ್ನು ಪೂರೈಸುವದಕ್ಕಾಗಿ ಅಗ್ರೋ ಇಂಡಸ್ಟ್ರೀಜ ಕಾರ್ಪೊರೇಷನ್‌ಗಳನ್ನು ಅನೇಕ ರಾಜ್ಯಗಳಲ್ಲಿ ಸ್ಥಾಪಿಸಲಾಗಿದೆ. ಇದಲ್ಲದೆ ಟ್ರ್ಯಾಕ್ಟರ್ ಮುಂತಾದುವುಗಳನ್ನು ನಡೆಸುವುದು ಮತ್ತು ದುರಸ್ತಿ ಮಾಡಲು ತರಬೇತಿ ಕೂಡ ನೀಡಲಾಗುತ್ತಿದೆ.

——

ನಿವೇಶನ ನೀಡಿಕೆಯಲ್ಲಿ ಜಿಲ್ಲೆಗೆ ದ್ವಿತೀಯ ಸ್ಥಾನ

ದಕ್ಷಿಣ ಕನ್ನಡ ಜಿಲ್ಲೆಯ ೫೭,೨೫೪ ಜನರಲ್ಲಿ ೧೨೪೩ ಜನರನ್ನುಳಿದು ಮಿಕ್ಕವರಿಗೆ ಸರಕಾರದಿಂದ ನಿವೇಶನ ದೊರಕಿದೆ. ರಾಜ್ಯದ ನಿವೇಶನ ನೀಡಿಕೆಯಲ್ಲಿ ಗುಲ್ಬರ್ಗಾ ಜಿಲ್ಲೆಯು ಪ್ರಥಮ ಮತ್ತು ದಕ್ಷಿಣ ಕನ್ನಡ ಜಿಲ್ಲೆಯು ದ್ವಿತೀಯ ಸ್ಥಾನ ಗಳಿಸಿವೆ.

● ತಾ. ೧೮ರಂದು ಮಂಗಳೂರು ನೆಹರೂ ಮೈದಾನದಲ್ಲಿ ಅಂತ್ಯವಾದ ತಾಜ್‌ಮಹಾಲ್ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಮಣಿಪಾಲದ ಸಿಂಡಿಕೇಟ್ ರಿಕ್ರಿಯೇಶನ್ ಕ್ಲಬ್‌ದವರು ಮಂಗಳೂರು ಕೋಲ್ಟ್ಸ್ ತಂಡವನ್ನು ಪರಾಭವಗೊಳಿಸಿದರು.

★ ನಿರಾತಂಕ ರೈಲ್ವೆ ಪ್ರಯಾಣ ★

ರೈಲ್ವೆಯಲ್ಲಿ ಸಮಾಜವಿರೋಧಿ ಶಕ್ತಿಗಳ ಚಟುವಟಿಕೆಗಳಿಂದಾಗಿ ಬಹಳಕಾಲದಿಂದ ಲೂ ಸಾಚಾ ಪ್ರಯಾಣಿಕರಿಗೆ ಸ್ವಸ್ಥ ಪ್ರಯಾಣ ಸೌಲಭ್ಯವನ್ನೊದಗಿಸಿಕೊಡಲಾಗಿಲ್ಲ. ರೈಲ್ವೆ ಅಧಿಕಾರಿಗಳು ಪ್ರಯಾಣಿಕರಿಗೆ ದೇಶದಾದ್ಯಂತ ಸುರಕ್ಷಿತ, ನಿರಾತಂಕ ಮತ್ತು ಸ್ವಸ್ಥ ಪ್ರಯಾಣವನ್ನೊದಗಿಸಿಕೊಡಲು ಅಗತ್ಯ ಕ್ರಮಂಗಳನ್ನು ಕೈಗೊಂಡಿದ್ದಾರೆ. ಆದರೂ, ಸಮಾಜವಿರೋಧಿ ಶಕ್ತಿಗಳು ಟಿಕೆಟ್‌ರಹಿತ ಪ್ರಯಾಣ, ಅನವಶ್ಯಕವಾಗಿ ಸರಪಳಿ ಎಳೆಯುವುದು, ಶುಲ್ಕನೀಡದೆ ಸಾಮಾನನ್ನು ಸಾಗಿಸುವುದರಲ್ಲಿ ತೊಡಗಿರುವುದರಿಂದ ರೈಲ್ವೆ ಸೇವೆಗಳು ತುಂಬಾ ಹದಗೆಡಲು ಅವಕಾಶವುಂಟಾಗಿದೆಯಲ್ಲದೆ, ರೈಲ್ವೆ ಆದಾಯವು ಸೋರಿಹೋಗಲು ಕಾರಣವಾಗಿದೆ.

ಕೆಲವು ರೈಲ್ವೆಗಳಲ್ಲಿ ವೇಳೆಯ ಅನುಪಾಲನವು ಶೇಕಡಾ ೬೦ ಭಾಗಕ್ಕೂ ತೀರಾ ಕಡಿಮೆಯಾದುದುಂಟು. ಇದಕ್ಕೆ ಮುಖ್ಯ ಕಾರಣ ಸಮಾಜವಿರೋಧಶಕ್ತಿಗಳೇ. ಅನಗತ್ಯವಾಗಿ ಸರಪಳಿಗಳನ್ನೆಳೆದು, ರೈಲನ್ನು ನಿಲ್ಲಿಸಿ ತಡವಾಗಿ ಓಡಲು ಈ ಶಕ್ತಿಗಳು ಕಾರಣವಾಗಿದ್ದುವು.

ರೈಲ್ವೆಗೆ ಬಡಿದಿರುವ ಮತ್ತೊಂದು ಉಪದ್ರವವೆಂದರೆ, ಟಿಕೆಟ್‌ರಹಿತ ಪ್ರಯಾಣ. ಅಧಿಕಸಂಖ್ಯೆಯಲ್ಲಿನ ಜನರು ಟಿಕೆಟ್ಟಿಲ್ಲದೆ ಪ್ರಯಾಣಮಾಡುತ್ತಿದ್ದು, ರೈಲುಗಳಲ್ಲಿ ಜನ ಬಹಳವಾಗಿ ತುಂಬಿಹೋಗುತ್ತಿತ್ತು. ಇದರಿಂದಾಗಿ ಟಿಕೆಟ್ ಪಡೆದು ಪ್ರಯಾಣ ಮಾಡುತ್ತಿರುವ ಸಾಚಾ ಪ್ರಯಾಣಿಕರಿಗೆ ಅಗಾಧವಾದ ತೊಂದರೆ ಉಂಟಾಗುತ್ತಿತ್ತು. ಅವರ ಮೇಲೆ ಕ್ರಮ ಕೈಗೊಳ್ಳಲು ಮುಂದಾದ ಟಿಕೆಟ್ ತನಿಖಾಧಿಕಾರಿಗಳ ಮೇಲೆ ಹಲ್ಲೆಗಳು ನಡೆದುದೂ ಉಂಟು.

ರೈಲು ಬೋಗಿಗಳಲ್ಲಿ, ಪ್ಲೆಟ್‌ಫೋರ್ಮ್‌ಗಳಲ್ಲಿ ಪ್ರಯಾಣಿಕರಿಗೆ ಒದಗಿಸಿಕೊಡಲಾದ ಸೌಲಭ್ಯಗಳು . ಕಾಣೆಯಾದಾಗ ಅವರಿಗೆ ಉಂಟಾಗುವ ತೊಂದರೆಗಳು ಅಸದಳ, ಬೋಗಿಗಳಲ್ಲಿ ಜೋಡಿಸಲಾದ ಫ್ಯಾನು, ದೀಪ ಮೊದಲಾದವುಗಳನ್ನು ಸಾಮಾನ್ಯವಾಗಿ ಸಮಾಜವಿರೋಧಿ ಶಕ್ತಿಗಳು ಕದ್ದೊಯ್ಯುತ್ತಿದ್ದುವು.

ಪ್ರಸ್ತುತ ವರ್ಷದ ಅವಧಿಯಲ್ಲಿ ರೈಲ್ವೆಯ ಇಡೀ ಚಟುವಟಿಕೆಗಳನ್ನು ಸುವ್ಯವಸ್ಥೆಗೊಳಿಸಲಾಗಿದೆ. ಪ್ರಯಾಣಿಕರ ಅಗತ್ಯಗಳನ್ನು ಮನಗಂಡು, ಒದಗಿಸಿಕೊಡಲು ಎಲ್ಲಾ ಕ್ರಮಂಗಳನ್ನು ಕೈಗೊಳ್ಳಲಾಗಿದೆ. ರೈಲುಗಳು ವೇಳೆಗೆ ಸರಿಯಾಗಿ ತಪ್ಪದೆ ಓಡುವಂತೆ ನೋಡಿಕೊಳ್ಳಲಾಗುತ್ತಿದೆ.

ಈಗ ಟಿಕೆಟ್‌ರಹಿತ ಪ್ರಯಾಣಿಕರು ಮತ್ತು ಸರಪಳಿ ಎಳೆಯುವವರ ಹಾವಳಿಯು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. ರೈಲುಗಳ ವೇಳಾ ಪರಿಪಾಲನೆಯಲ್ಲಿ ತೀವ್ರ ಸುಧಾರಣೆ ಉಂಟಾಗಿದೆ. ಈಗ ರೈಲ್ವೆ ಕಚೇರಿಗಳಲ್ಲಿ ಉದ್ಯೋಗಿಗಳ ಹಾಜರಿಯು ಶೇಕಡಾ ನೂರರಷ್ಟು ಸುಧಾರಿಸಿದೆ. ರೈಲ್ವೆ ಕಾರ್ಯಾಗಾರಗಳ ಉತ್ಪಾದನೆಯಲ್ಲಿ ಶೇಕಡಾ ೨೫ರಷ್ಟು ಹೆಚ್ಚಳವುಂಟಾಗಿದೆ. ೪೦೦ಕ್ಕೂ ಹೆಚ್ಚು ರೈಲ್ವೆ ಆಸ್ತಿ ಅಪರಾಧಿಗಳನ್ನು ಮೀಸಾ ಮತ್ತು ಡಿ. ಐ. ಆರ್. ಅನ್ವಯ ಬಂಧಿಸಲಾಗಿದೆ. ಕಳುವಾದ ಸುಮಾರು ೩೦ ಲಕ್ಷ ರೂ.ಗಳ ಮೌಲ್ಯದ ರೈಲ್ವೆ ಆಸ್ತಿಯನ್ನು ಮರಳಿ ಪಡೆಯಲಾಗಿದೆ, ೮೦೦ಕ್ಕೂ ಹೆಚ್ಚು ಭ್ರಷ್ಟಾಚಾರಿ ರೈಲ್ವೆ ಉದ್ಯೋಗಿಗಳನ್ನು ತಾತ್ಕಾಲಿಕ ವಜಾಮಾಡಲಾಗಿದೆ; ಇಲ್ಲವೆ ಪೂರ್ಣವಾಗಿ ವಜಾಮಾಡಲಾಗಿದೆ, ಇಲ್ಲವೆ ಶಿಕ್ಷಾರೂಪದಲ್ಲಿ ವರ್ಗಮಾಡಲಾಗಿದೆ.

ಈ ವರ್ಷದ ಅವಧಿಯಲ್ಲಿ ೬೦ ಸಾವಿರಕ್ಕೂ ಹೆಚ್ಚು ವಿಶೇಷ ದಾಳಿಗಳನ್ನು ಟಿಕೆಟ್ ರಹಿತ ಪ್ರಯಾಣಿಕರ ಮೇಲೆ ಕೈಗೊಳ್ಳಲಾಗಿದೆಯಲ್ಲದೆ, ೧೬ ಲಕ್ಷಕ್ಕೂ ಹೆಚ್ಚು ಪ್ರಯಾಣಿಕರ ಮೇಲೆ ಕ್ರಮಕೈಗೊಳ್ಳಲಾಗಿದೆ.

ಅನಧಿಕೃತವಾಗಿ ಸ್ಥಳ ಮತ್ತು ಬರ್ತ್‌ಗಳ ಕಾಯ್ದಿರಿಸುವಿಕೆಯಲ್ಲಿ ತೊಡಗಿದ್ದ ಪ್ರವಾಸೀ ಏಜೆಂಟ್‌ಗಳನ್ನು ಉಚ್ಛಾಟನೆಗೊಳಿಸಲಾಗಿದೆ. ಟಿಕೆಟ್ ಪಡೆಯಲು ನಿಲ್ಲುತ್ತಿದ್ದ ಉದ್ದನೆಯ ಕ್ಯೂಗಳು ಈಗ ಕಡಿಮೆಯಾಗಿವೆ. ಅನವಶ್ಯಕವಾಗಿ ಸರಪಳಿ ಎಳೆಯುವ ದುಷ್ಕೃತ್ಯವು ಈಗ ಇದ್ದಕ್ಕಿದ್ದಂತೆ ಮಾಯವಾಗಿದೆ. ರೈಲ್ವೆ ಅಪರಾಧಗಳ ಕಳವುಗಳ ಸಂಖ್ಯೆಯು ಗಣನೀಯವಾಗಿ ಕಡಮೆಯಾಗಿದೆ.

ಈ ತುರ್ತುಪರಿಸ್ಥಿತಿಯಿಂದಾಗಿ ಬಂದ ಈ ಎಲ್ಲಾ ಕ್ರಮಂಗಳಿಂದಾಗಿ ಇಂದು ರೈಲು ಪ್ರಯಾಣವು ಸುರಕ್ಷಿತ, ನಿರಾತಂಕ ಮತ್ತು ಸ್ವಸ್ಥ ಪ್ರಯಾಣವಾಗಿ ಪರಿಣಮಿಸಿದೆ.

—೦—

'ವಾರ್ತಾವರದಿ' ಎಂದರೇನು?

(೪ನೇ ಪುಟದಿಂದ ಮುಂದುವರಿದುದು)

ವನ ಮುಖ್ಯ ಕರ್ತವ್ಯ. ತನ್ನ ಈ ಕಾರ್ಯದಲ್ಲಿ ಅವನು–ಚಾಣಾಕ್ಷ ಸವಾಲುಗಾರನಾಗಿಯೂ, ಆತ್ಮೀಯ ಗೆಳೆಯನಾಗಿಯೂ, ಜಾಗೃತ ಆಲಿಸುವವನಾಗಿಯೂ, ವಿಚಕ್ಷಣ ಪತ್ತೇದಾರನಾಗಿಯೂ ಮತ್ತು ಮಾರ್ಮಿಕ ವಕೀಲನಾಗಿಯೂ ಇರತಕ್ಕದು. ತನಗೆ ಬೇಕಾದ ಸುದ್ದಿ, ಅಭಿಪ್ರಾಯ, ನಿಲುವಳಿ ಮುಂತಾದ ಪ್ರತಿಕ್ರಿಯೆಗಳನ್ನು ಸಾರ್ವಜನಿಕ ಹಿತಾಸಕ್ತಿಯಿರುವ ವ್ಯಕ್ತಿಗಳಿಂದ ಹೊರಡಿಸಿ ವರದಿ ಹಾಳೆಗಳ ಮೇಲೆ ನುಣುಪು ಪೆನ್ಸಿಲಿನಿಂದ ಸಂಗ್ರಹಿಸುವ ಹೊಣೆಗಾರಿಕೆ ಸುದ್ದಿಗಾರನಲ್ಲಿರಲೇ ಬೇಕು. ಪತ್ರಿಕಾಕ್ಷೇತ್ರದಲ್ಲಿ 'ಸಂದರ್ಶನ'ಕ್ಕೆ ಅಗ್ರಸ್ಥಾನವಿದೆಯೆಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಕ್ಷೇತ್ರವೈವಿಧ್ಯಗಳು

'ಸಂದರ್ಶನ'ದಲ್ಲಿರುವಂತೆ-ವಾರ್ತಾವರದಿಯಲ್ಲಿ ಇನ್ನೂ ಹಲವಾರು ಪ್ರಾಮುಖ್ಯ ವಿಚಾರಕ್ಷೇತ್ರಗಳಿವೆ. ಸ್ಥೂಲವಾಗಿ ಇವುಗಳೆಂದರೆ–ಕ್ರೀಡಾರಂಗ (Sports) ವಾಣಿಜ್ಯ (Business), ಪೋಲೀಸ್ ವಾರ್ತೆ (Police News), ನ್ಯಾಯಾಲಯದ ಮೊಕದ್ದಮೆ (Covering the Courts) ಇತ್ಯಾದಿ. ಹೇಗಿದ್ದರೂ, ಯಾವುದೊಂದು ವಿಭಾಗದ ಕುರಿತು ವರದಿಮಾಡುವವನಲ್ಲಿ ಆಯಾಯ ನಿರ್ದಿಷ್ಟ ವಿಚಾರಗಳ ಕುರಿತು ವಿಶೇಷ ಮಾಹಿತಿ ಮತ್ತು ಆಸ್ಥೆಗಳು ಇರುವುದು ಅನಿವಾರ್ಯವೆಂಬುದನ್ನು ಮರೆಯಲಾಗದು.

ಮಾನನಷ್ಟದ ಅಪಾಯ!
(Danger of Defamation)

ಹೊಸತನದ ಹುರುಪಿನಲ್ಲಿ,ಯೌವ್ವನದ ಹುಮ್ಮಸ್ಸಿನಲ್ಲಿ ಹೆಚ್ಚಿನವರು - ಪತ್ರಿಕಾ ಕೆಲಸವನ್ನು ತೀರ ಮನೋರಂಜಕವಾದುದೆಂದೂ, ಸುಲಭಸಾಧ್ಯವಾದುದೆಂದೂ ತಿಳಿದುಕೊಳ್ಳುವರಲ್ಲದೆ. ಅದರಲ್ಲಿರುವ ಹೊಣೆಗಾರಿಕೆಯನ್ನು ಕಂಡುಕೊಳ್ಳುವುದಿಲ್ಲ.

ಅಚ್ಚಿಗಾಗಿ ಕಳುಹಿಸಿ ಕೊಡುವ ಸುದ್ದಿ ಸಂಗ್ರಹಣಾ ಕಾರ್ಯವು ಅಷ್ಟೊಂದು ಸುಲಭತರದ್ದಲ್ಲ. ಇದರಲ್ಲಿ ವಿಶೇಷ ಜವಾಬ್ದಾರಿಯಿದ್ದು–ಸಮಾಜದ, ಹಾಗೂ ಕಾನೂನಿನ ಕೆಲವೊಂದು ನಿಯಮಂಗಳನ್ನು ಪರಿಪಾಲಿಸಬೇಕಾಗಿದೆ. ಆದ್ದರಿಂದ, ಈ ಕಾರ್ಯವು ಅಪ್ರಬುದ್ಧ ಎಳೆಯರಿಗೆ ಹೇಳಿದುದಲ್ಲ. ಇದನ್ನು ಕೈಗೊಳ್ಳುವವರು ಬರಿಯ ದೈಹಿಕವಾಗಿ ಪ್ರಬುದ್ಧರೆನಿಸಿದರೆ ಸಾಲದು–ಮಾನಸಿಕವಾಗಿ ಪರಿಪಕ್ವ ಹೊಂದಿದವರಾಗಿರಬೇಕು.

ಪತ್ರಿಕಾ ಸ್ವಾತಂತ್ರ್ಯವಿದೆಯೆಂದು ಅದನ್ನು ದುರುಪಯೋಗಗೊಳಿಸುವುದು ಸಲ್ಲದು. ಸ್ವಾತಂತ್ರ್ಯವೆಂದರೆ 'ಸ್ವಚ್ಛಂದತೆ' ಯಲ್ಲ. ಅದಕ್ಕೊಂದು ಮೇರೆಯಿದೆ, ಹಿಡಿತವಿದೆ.

ಯಾವುದೊಂದು ಸಂಸ್ಥೆಯ, ಅಥವಾ ವ್ಯಕ್ತಿಯ ಗುಣನಡತೆಯ ಕುರಿತು ತಕ್ಕ ಆಧಾರ, ಪುರಾವೆಗಳಿಲ್ಲದೆ – ಅನ್ಯಾಯವಾಗಿ ಅಪವಾದದ (Libellous) ಲೇಖನಗಳನ್ನು, ಇಲ್ಲವೇ ವರದಿಗಳನ್ನು ಪ್ರಕಟಿಸಿದ್ದೇ ಆದರೆ, ಅಂತಹುಗಳು ದೂಷಕಗಳೆನಿಸುತ್ತವೆ. ಇಂಥವುಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡುದೇ ಆದರೆ-ಅವುಗಳ ಸುದ್ದಿಗಾರ, ಸಂಪಾದಕ, ಪ್ರಕಾಶಕ, ಮತ್ತು ಮುದ್ರಕರು ಕೋರ್ಟಿನಲ್ಲಿ ಮೊಕದ್ದಮೆಗೆ ಗುರಿಯಾಗಲೇ ಬೇಕು. ಮತ್ತು ಕೋರ್ಟು ವಿಧಿಸುವ ದಂಡನೆಗೆ ಒಳಗಾಗಲೂ ಬೇಕು. ಆದ್ದರಿಂದ, ವರದಿಮಾಡುವಾಗ ಸುದ್ದಿಗಾರರು ಬಹಳ ಎಚ್ಚರಿಕೆಯಿಂದ ಕಾರ್ಯವೆಸಗಬೇಕಲ್ಲದೆ, ಕೆಲವೊಂದು ದೂಷಕ ಪದಪ್ರಯೋಗಗಳನ್ನು ಮಾಡಲೂ ಬಾರದು. ಉದಾಹರಣೆಗಾಗಿ—ಕುಡುಕ, ಬೂಟಕ, ನಾಡಾಡಿ ವೈದ್ಯ, ಬೆಂಕಿಇಡುವವ, ಕಜ್ಜಿ ತುರುಕ,ಜೂಜುಗಾರ, ಅಂಗಡಿಗಳ್ಳ, ಕಪಟವೇಷಧಾರಿ, ದ್ರೋಹಿ, ದಿವಾಳಿಖೋರ, ವ್ಯಭಿಚಾರಿ, ಪಟಿಂಗ, ಜಾತಿಹೀನ, ಒಳಸುಚುಗಾರ, ಘಾತಕ, ಲಂಚಖೋರ, ಮಾತಿನ ಮಲ್ಲಯ್ಯ, ಠಕ್ಕ ಇತ್ಯಾದಿ ನಿಂದಕ ಶಬ್ದಗಳನ್ನು ಬಳಸಬಾರದೆಂದಿದೆ.

ಉಪಸಂಹಾರ

ಅಂದಮೇಲೆ-ಸುದ್ದಿಗಾರ ಹಾಗೂ ಪತ್ರಿಕೆಗಳ ಘನತೆ. ಹೊಣೆಗಾರಿಕೆಗಳು ಅದೆಷ್ಟು ಮಹತ್ವದ್ದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಮೇಲಿನ ಎಲ್ಲಾ ನಿಯಮಂಗಳನ್ನು ಪರಿಪಾಲಿಸಿ, ಪ್ರಾಮಾಣಿಕತನದ ವರದಿಗಳನ್ನು ಮಾಡಿದ್ದೇ ಆದರೆ, ಅಂಥ ಸುದ್ದಿಗಾರನ ಗೌರವವು ಹೆಚ್ಚುವುದರೊಂದಿಗೆ, ಅವನ ಪತ್ರಿಕೆಯು ಸಹ ಶಾಶ್ವತ ಜನಾದರಣೀಯವಾಗುವುದೆನ್ನುವುದಕ್ಕೆ ಸಂಶಯವಿರುವುದಿಲ್ಲ.

—೦—

ಮೆಡಿಕಲ್ ರಿಲೀಫ್ ಸೊಸೈಟಿಗೆ ಜೇಸಿ ನೀಡಿಕೆ

ಮಂಗಳೂರು ಜೂನಿಯರ್ ಚೇಂಬರ್ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಇತ್ತೀಚಿಗೆ ಮೋತಿಮಹಲಿನಲ್ಲಿ ಜರಗಿದಾಗ ಜೇಸಿ ಅಧ್ಯಕ್ಷ ಶ್ರೀ। ಬಿ. ಶ್ರೀಕಾಂತ ಕಾಮತ್‌ರವರು ೩೦೦ ರೂಪಾಯಿಗಳ ಚೆಕ್ಕೊಂದನ್ನು ಮಂಗಳೂರು ಮೆಡಿಕಲ್ ರಿಲೀಫ್ ಸೊಸೈಟಿಗೆ ಕೊಡುಗೆಯಾಗಿ ನೀಡಿದರು, ಸೊಸೈಟಿಯ ಕಾರ್ಯದರ್ಶಿ ಡಾ। ಎ. ವಿ. ಶೆಟ್ಟಿಯವರು ಅದನ್ನು ಸ್ವೀಕರಿಸಿದರು.

———

ಉಡುಪಿ ಪರ್ಯಾಯ

ಕೇವಲ ಹದಿನಾಲ್ಕು ವರ್ಷ ಪ್ರಾಯದ ಪುತ್ತಿಗೆ ಮಠದ ಶ್ರೀಮತ್ ಸುಗುಣೇಂದ್ರ ತೀರ್ಥಶ್ರೀಪಾದಂಗಳವರು ತಾ. ೧೮ರಂದು ಮುಂಜಾನೆ ಪವಿತ್ರ ಮುಹೂರ್ತದಲ್ಲಿ ಶ್ರೀ ಮಧ್ವಾಚಾರ್ಯರ ದಿವ್ಯ ಸಿಂಹಾಸನ ಶ್ರೀಕೃಷ್ಣ ಪೂಜಾ ಪರ್ಯಾಯ ದೀಕ್ಷೆಯನ್ನು ಉಡುಪಿಯಲ್ಲಿ ನಡೆದ ವೈಭವ ಯುಕ್ತ ಸಮಾರಂಭದಲ್ಲಿ ವಿದ್ಯುಕ್ತವಾಗಿ ವಹಿಸಿಕೊಂಡರು. ರಾಜ್ಯದ ಬೇರೆ ಬೇರೆ ಕಡೆಗಳಿಂದ, ದೇಶದಾದ್ಯಂತದ ಹಾಗು ಪರದೇಶದಿಂದಲೂ ಸಾವಿರಾರು ಭಕ್ತಾದಿಗಳು ಈ ಉತ್ಸವದಲ್ಲಿ ಪಾಲ್ಗೊಂಡಿದ್ದರು. ಅದಮಾರು ಮಠದ ಹಿರಿಯ ಸ್ವಾಮಿಗಳಾದ ಶ್ರೀ ವಿಭುದೇಶಶ್ರೀಪಾದಂಗಳವರು, ಫಲಿಮಾರು ಮಠದ ಶ್ರೀ ವಿದ್ಯಾಮಾನ್ಯ ಶ್ರೀಪಾದಂಗಳವರು, ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಮತ್ತು ಅದಮಾರು ಮಠದ ಕಿರಿಯ ಸ್ವಾಮಿಗಳಾದ ಶ್ರೀ ವಿಶ್ವಪ್ರಿಯ ತೀರ್ಥ ಶ್ರೀಪಾದಂಗಳವರು ಪರ್ಯಾಯ ದೀಕ್ಷೆ ವಹಿಸಿದ ಶ್ರೀ ಸುಗುಣೇಂದ್ರ ತೀರ್ಥರಿಗೆ ಉಚಿತ ಸಲಹೆಯಿತ್ತು ಆಶೀರ್ವಚನವನ್ನಿತ್ತರು. ಮುಂಜಾನೆ ೬-೩೦ಗಂಟೆಗೆ ಜೋಡುಕಟ್ಟೆಯಿಂದ ಅಭೂತಪೂರ್ವ ಮೆರವಣಿಗೆಯಲ್ಲಿ ಪರ್ಯಾಯ ದೀಕ್ಷೆ ವಹಿಸಲಿರುವ ಸ್ವಾಮಿಜಿಯವರನ್ನು ದರ್ಬಾರಿಗೆ ಕರೆತರಲಾಗಿತ್ತು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿದ್ದ ಕೇಂದ್ರ ಸಚಿವ ಶ್ರೀ| ಟಿ.ಎ. ಪೈ ಮತ್ತು ಕರ್ನಾಟಕದ ಕಂದಾಯ ಸಚಿವ ಶ್ರೀ| ಎನ್. ಹುಚ್ಚಮಾಸ್ತಿ ಗೌಡ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪರ್ಯಾಯ ಪೀಠದಿಂದ ವಿರಮಿಸಿದವರು ಕೃಷ್ಣಾಪುರಮಠದ ಶ್ರೀ| ವಿದ್ಯಾಸಾಗರ ತೀರ್ಥ ಶ್ರೀಪಾದಂಗಳವರು.

ಇಬ್ಬರು ಸಚಿವರಿಗೆ ಪರ್ಯಾಯ ಬಿರುದುಗಳು

ಉಡುಪಿಯಲ್ಲಿ ಜರಗಿದ ಈ ಬಾರಿಯ ಪರ್ಯಾಯಮಹೋತ್ಸವದಲ್ಲಿ ಕೇಂದ್ರ ಸಚಿವ ಶ್ರೀ| ಟಿ. ಎ ಪೈಯವರಿಗೆ 'ಭಾರತ ಭೂಷಣ' ಮತ್ತು ಕರ್ನಾಟಕದ ಕಂದಾಯ ಸಚಿವ ಶ್ರೀ| ಎನ್. ಹುಚ್ಚಮಾಸ್ತಿ ಗೌಡರಿಗೆ 'ಲೋಕಸೇವಾ ಧುರೀಣ' ಎಂಬ ಬಿರುದುಗಳನ್ನು ದಯಪಾಲಿಸಿದ ಸ್ವಾಮಿಜಿಯವರು, ಸಂಸ್ಕೃತದಲ್ಲಿ ಬರೆಯಲಾದ ಮಾನಪತ್ರದೊಂದಿಗೆ ಶಾಲುಹೊದಿಸಿ ಇಬ್ಬರು ಸಚಿವರನ್ನೂ ಗೌರವಿಸಿದ್ದಾರೆ.

ಉಡುಪಿಯಲ್ಲಿ ಸ್ಕೌಟ್ಸ್, ಗೈಡ್ಸ್ ರ‍್ಯಾಲಿ

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಉಡುಪಿ ತಾಲೂಕು ದಳಗಳ ರ‍್ಯಾಲಿಯನ್ನು ಉಡುಪಿ ಸರಕಾರಿ ಹೆಮ್ಮಕ್ಕಳ ತರಬೇತಿ ಶಾಲೆಯ ವಠಾರದಲ್ಲಿ ಇತ್ತೀಚೆಗೆ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥಶ್ರೀಪಾದಂಗಳವರು ಉದ್ಘಾಟಿಸಿದರು. ಸಂಸ್ಥೆಯ ಜಿಲ್ಲಾ ಅಧ್ಯಕ್ಷ ಶ್ರೀ| ಮಣೇಲ ಶ್ರೀನಿವಾಸ ನಾಯ್ಕರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. 'ಉದಯವಾಣಿ' ದೈನಿಕದ ಉಪಸಂಪಾದಕ ಶ್ರೀ| ಬನ್ನಂಜೆ ರಾಮಾಚಾರ್ ಅವರು ಶುಭಾಶಂಸನಾ ಭಾಷಣಮಾಡಿದ್ದರು.

ಕೊಲೆಪ್ರಕರಣದ ಆಪಾದಿತರ ಖುಲಾಸೆ

ಬಂಟ್ವಾಳ ತಾಲೂಕಿನ ಪೆರ್ನೆ ಗ್ರಾಮದಲ್ಲಿ ತಾ. ೮—೧೦—೭೫ರಂದು ಸಂಜೆ ಅಪ್ಪಯ್ಯ ನಾಯಕ್ ಎಂಬವರನ್ನು ಕತ್ತಿಯಿಂದ ಕಡಿದು ಮತ್ತು ಕಲ್ಲಿನಿಂದ ಹೊಡೆದು ಕೊಲೆಗೈದ ಪ್ರಕರಣದಲ್ಲಿ ಆರೋಪಿಗಳೆನ್ನಲಾದ ಕೆ. ಜಯಂತ ಪರವ ಮತ್ತು ಕೊರಗಪ್ಪ ಯಾನೆ ಸೀತಾರಾಮ ಗೌಡ ಎಂಬಿಬ್ಬರನ್ನು ದ. ಕ. ಜಿಲ್ಲಾ ಸೆಶನ್ಸ್ ನ್ಯಾಯಾಧೀಶರಾದ ಶ್ರೀ| ಪಿ. ಎ. ಕುಲಕರ್ಣಿಯವರು ಬಿಡುಗಡೆಗೊಳಿಸಿ ತೀರ್ಪುಕೊಟ್ಟಿರುತ್ತಾರೆ. ಪ್ರಾಸಿಕ್ಯೂಶನ್ ಪರವಾಗಿ ಒಟ್ಟು ೧೬ ಸಾಕ್ಷಿಗಳನ್ನು ಸೆಶನ್ಸ್ ಕೋರ್ಟಿನಲ್ಲಿ ವಿಚಾರಿಸಲಾಗಿತ್ತು.

ಶಿಕ್ಷಕರ ಸಂಘದ ವಾರ್ಷಿಕೋತ್ಸವ

ಮಂಗಳೂರು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಏರ್ಪಡಿಸಿದ ನಗರದ ಶಾಲಾಭಿವೃದ್ಧಿ ಸಮಿತಿಗಳ ಸಮ್ಮೇಳನವನ್ನು ಕರ್ನಾಟಕ ರಾಜ್ಯದ ವಿದ್ಯಾಸಚಿವ ಶ್ರೀ| ಮಲ್ಲಿಕಾರ್ಜುನ ಸ್ವಾಮಿಯವರು ತಾ. ೨೦ರಂದು ಬೆಳಗ್ಗೆ ಪಿ. ವಿ. ಎಸ್, ಕಲಾಕುಂಜದಲ್ಲಿ ಉದ್ಘಾಟಿಸಿದರು. ಭಾರತೀಯ ವಿದ್ಯಾಭವನದ ಮಂಗಳೂರು ಕೇಂದ್ರದ ಅಧ್ಯಕ್ಷ ಶ್ರೀ|ಮಧುಸೂದನ ಡಿ. ಕುಶೆಯವರು ಅಧ್ಯಕ್ಷತೆ ವಹಿಸಿದ್ದರು. ಅಂದು ಅಪರಾಹ್ನ ಶಿಕ್ಷಕರ ಸಂಘದ ವಾರ್ಷಿಕೋತ್ಸವವು ನಡೆದಿತ್ತು. ಈ ಸಂಬಂಧ ಏರ್ಪಡಿಸಿದ ಒಂದು ಶೈಕ್ಷಣಿಕ ವಸ್ತುಪ್ರದರ್ಶನವನ್ನು ಶ್ರೀಮತಿ ಸರೋಜಿನಿ ಎಮ್. ಕುಶೆಯವರು ಉದ್ಘಾಟಿಸಿದ್ದರು.

ನಗರಸಭಾಧಿವೇಶನ

ಮಂಗಳೂರು—ಪಣಂಬೂರು ನಡುವೆ ಅಧಿಕ ಬಸ್ಸುಗಳನ್ನು ಓಡಿಸುವುದರೊಂದಿಗೆ ಕಾರ್ಮಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ರಿಯಾಯಿತಿ ಸೀಸನ್ ಟಿಕೇಟುಗಳನ್ನು ಒದಗಿಸಬೇಕೆಂದು ಸರಕಾರವನ್ನು ವಿನಂತಿಸುವ ನಿರ್ಣಯವೊಂದನ್ನು ತಾ. ೨೧ರಂದು ಸೇರಿದ ಮಂಗಳೂರು ನಗರಸಭಾಧಿವೇಶನದಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

ಉತ್ತರ ರೋಟರಿ ಕ್ಲಬ್ಬಿನ 76--77ನೇ ಸಾಲಿನ ಪದಾಧಿಕಾರಿಗಳು

ಮಂಗಳೂರು ನೊರ್ತ್ ರೋಟರಿ ಕ್ಲಬ್ಬಿನ ೧೯೭೬-೭೭ನೇ ವರ್ಷದ ಪದಾಧಿಕಾರಿಗಳಾಗಿ ಈ ಕೆಳಗಿನವರು ಆಯ್ಕೆಗೊಂಡಿರುವರು: ರೋ| ಆರ್. ಎನ್.ಮಣೇಲ್-ಅಧ್ಯಕ್ಷ, ವಿ. ಡಿ. ಕಾಮತ್—ಉಪಾಧ್ಯಕ್ಷ, ಎಸ್. ನಾರಾಯಣರಾವ್-ಕಾರ್ಯದರ್ಶಿ, ಕಸ್ತೂರಿ ಕೇಶವ ಪೈ—ಖಜಾಂಚಿ, ಜಿ.ಎಸ್. ಪ್ರಭು, ಶಂಕರನಾಯಕ್, ಶ್ರೀನಿವಾಸ ಆಚಾರ್—ಡೈರೆಕ್ಟರರು, ಎಂ. ಲಕ್ಷ್ಮಣ ಕಾಮತ್—ಸಾರ್ಜೆಂಟ್-ಎಟ್-ಆರ್ಮ್ಸ್.

ಉರೂಸ್ ಸಮಾರಂಭ

ಮಂಗಳೂರು ನೆಹರೂ ಮೈದಾನಿನ ಮುಂಭಾಗದಲ್ಲಿ ಪೋಲೀಸ್ ಕಚೇರಿಗೆ ಪಕ್ಕದಲ್ಲಿರುವ ಹಜ್ರತ್ ಸೈದಾನಿ ಬೀಬಿ ಸಾಹಿಬಾರವರ ದರ್ಗದಲ್ಲಿ ತೃತೀಯ ಉರೂಸ್ ಸಮಾರಂಭವು ತಾ. ೧೬ರಿಂದ ೨೦ರ ವರೆಗೆ ವಿವಿಧ ಕಾರ್ಯಕ್ರಮಗಳಿಂದ ಅತ್ಯಂತ ವೈಭವದಲ್ಲಿ ನಡೆಯಿತು. ೨೫ ಸಾವಿರ ಮಹಿಳೆಯರ ಸಮೇತ ಸುಮಾರು ೫೦ ಸಾವಿರಕ್ಕೂ ಮಿಕ್ಕಿದ ಭಕ್ತಾದಿಗಳು ಈ ಉತ್ಸವದಲ್ಲಿ ಭಾಗವಹಿಸಿದ್ದರು.

ಜಿಲ್ಲೆಗೆ ಹೆಚ್ಚಿನ ಭೂನ್ಯಾಯ ಮಂಡಳಿಗಳು

ಭೂಶಾಸನ ಕಾಯಿದೆಯನ್ವಯ ಜಿಲ್ಲೆಯಲ್ಲಿ ಈ ತನಕ ಒಟ್ಟು ೨೪೨೮ ಅರ್ಜಿಗಳನ್ನು ತೀರ್ಮಾನಮಾಡಲಾಗಿದ್ದು, ಈ ಕಾರ್ಯಯೋಜನೆಯನ್ನು ತೀವ್ರಗತಿಯಲ್ಲಿ ಸಾಧಿಸಲು ಅನುಕೂಲವಾಗುವಂತೆ ಮಂಗಳೂರು, ಬಂಟ್ವಾಳ, ಉಡುಪಿ ಮತ್ತು ಕುಂದಾಪುರಗಳಿಗೆ ಹೆಚ್ಚಿನ ನಾಲ್ಕು ಭೂನ್ಯಾಯ ಮಂಡಳಿಗಳನ್ನು ಮಂಜೂರು ಮಾಡಲಾಗಿದೆಯೆಂದು ಜಿಲ್ಲಾಧಿಕಾರಿಯವರಿಂದ ತಿಳಿದು ಬರುತ್ತದೆ.

ಶಾಲಾ ವರ್ಧಂತಿ

ಮಂಗಳೂರು ನವಭಾರತ ನೈಟ್ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. ೧೮ರಂದು ಪುರಭವನದಲ್ಲಿ ಕರ್ನಾಟಕ ಆಯುರ್ವೇದ ಮಂಡಲದ ಅಧ್ಯಕ್ಷ ಡಾ| ಎಂ. ಚಂದ್ರಶೇಖರ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯ ಅತಿಥಿಯಾಗಿ ನಗರದ ಪ್ರಮುಖ ಸಮಾಜಸೇವಾ ಕಾರ್ಯಕರ್ತೆ ಶ್ರೀಮತಿ ಸುನಂದಾ ಎಂ. ಸಿ. ಶಾಸ್ತ್ರಿಯವರು ಉಪಸ್ಥಿತರಿದ್ದು ಬಹುಮಾನ ವಿತರಣೆಗೈದಿದ್ದರು.

ರೋಟರಿ ಅಧ್ಯಯನ ತಂಡ ಮಂಗಳೂರಲ್ಲಿ

ಅಮೇರಿಕಾದಿಂದ ಮಂಗಳೂರಿಗೆ ಆಗಮಿಸಿದ ರೋಟರಿ ಗ್ರೂಪ್ ಸ್ಟಡಿ ಎಕ್ಸ್‌ಚೇಂಜ್ ಟೀಮಿನ ಆರು ಮಂದಿ ಸದಸ್ಯರನ್ನು ಗೌರವಿಸುವರೆ ಮಂಗಳೂರು ರೋಟರಿ ಕ್ಲಬ್ ಮತ್ತು ಮಂಗಳೂರು ಉತ್ತರ ರೋಟರಿ ಕ್ಲಬ್ಬುಗಳ ಸಂಯುಕ್ತ ಸಭೆಯೊಂದು, ತಾ. ೧೮ರಂದು ಸಂಜೆ ಪಿ. ವಿ. ಎಸ್. ಕಲಾಕುಂಜದಲ್ಲಿ ಜರಗಿತ್ತು. ಆರಂಭದಲ್ಲಿ ಮಂಗಳೂರು ರೋಟರಿ ಕ್ಲಬ್ಬಿನ ಅಧ್ಯಕ್ಷ ರೋ| ಮಧುಸೂದನ ಡಿ. ಕುಶೆಯವರು ಸ್ವಾಗತ ಬಯಸಿದ ನಂತರ ಉತ್ತರ ರೋಟರಿ ಕ್ಲಬ್ಬಿನ ಅಧ್ಯಕ್ಷ ರೋ| ಬಿ. ಪಿ. ಬಾಳಿಗ ಅವರು ಅಧ್ಯಯನ ತಂಡದ ಮುಖಂಡ ರಿಚಾರ್ಡ್ ಮೆಕ್ಲಿಂಟಿಕ್ ಅವರ ಪರಿಚಯಮಾಡಿದ್ದರು. ತಂಡದ ನಾಯಕ ರಿಚಾರ್ಡ್ ಮತ್ತು ಇತರ ಸದಸ್ಯರಾದ ಮೈನಾರ್ಡ್ ಎಸ್. ಚೇಬರ್ಸ್, ಎಡ್ವರ್ಡ್ ಜೆ.ಜೊಲ್ನರ್,ಜೊನ್ ಡಬ್ಲ್ಯೂ. ಸ್ನಿಡರ್, ಪೀಟರ್ ಜಯೊರ್ಗನ್, ಮೊತೆಲ್‌ಫೇರ್ ಮತ್ತು ಬೊಮಾರ್ಕ್ಸ್ ಅವರು ತಮ್ಮನ್ನು ಆದರದಿಂದ ಗೌರವಿಸಿದ್ದಕ್ಕಾಗಿ ಕೃತಜ್ಞತೆ ಸೂಚಿಸಿ ಸಮಯೋಚಿತವಾಗಿ ಮಾತನಾಡಿದರು.

ತಾ. ೧೫ರಂದು ಮಂಗಳೂರು ಮೋತಿಮಹಲಿನಲ್ಲಿ ಮಂಗಳೂರು ಬ್ಯಾಂಕರ್ಸ್ ಕ್ಲಬ್ ಆಶ್ರಯದಲ್ಲಿ ಅಮೇರಿಕದಿಂದ ಬಂದ ರೋಟರಿ ಅಧ್ಯಯನ ತಂಡದವರನ್ನು ಭೋಜನ ಸತ್ಕಾರಕೊಟವಿತ್ತು ಗೌರವಿಸಲಾಗಿತ್ತು.

ರಾಜ್ಯಮಟ್ಟದ ಕುಸ್ತಿ

ಕರ್ನಾಟಕ ರಾಜ್ಯ ಕುಸ್ತಿಪಂದ್ಯ ಶ್ರೇಣಿಯನ್ನು ಬರುವ ಮಾರ್ಚ್ ೫ರಿಂದ ೭ರ ತನಕ ಮಂಗಳೂರಲ್ಲಿ ನಡೆಸಲು, ತಾ. ೧೯ರಂದು ಮಂಗಳೂರಲ್ಲಿ ಸೇರಿದ ರಾಜ್ಯಮಟ್ಟದ ಕುಸ್ತಿ ಸಮಿತಿಯು ನಿರ್ಧರಿಸಿದೆ. ಈ ಕುಸ್ತಿ ಪಂದ್ಯ ಶ್ರೇಣಿಯಲ್ಲಿ ಭಾಗವಹಿಸಲು ರಾಜ್ಯದ ೧೦ ಜಿಲ್ಲೆಗಳಿಂದ ೨೫೦ ಕುಸ್ತಿಪಟುಗಳು ಆಗಮಿಸಲಿದ್ದು, ಮಾರ್ಚ್ ತಾ. ೫ರಂದು ಜಿಲ್ಲಾ ಕುಸ್ತಿ ಸಂಸ್ಥೆಗಳ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ.

ಕಾರ್ಕಳ ಸದಾಶಿವರಾಯರ ನಿಧನ

ಮಂಗಳೂರಿನಲ್ಲಿ ದೀರ್ಘಕಾಲ ವಕೀಲಿ ವೃತ್ತಿ ನಡೆಸಿ, ಜನಪ್ರಿಯ ವಕೀಲರೆಂದು ಕೀರ್ತಿಗಳಿಸಿದ ಸುಪ್ರೀಮ್ ಕೋರ್ಟ್ ಆಫ್ ಇಂಡಿಯಾ ಎಡ್ವೊಕೇಟ್ ಕಾರ್ಕಳ ಸದಾಶಿವರಾಯರು ಕಳೆದ ತಾ. ೧೬ರಂದು ತಮ್ಮ ೯೧ನೇ ಹಿರೇವಯಸ್ಸಿನಲ್ಲಿ ದೈವಾಧೀನರಾದರು. ಮಂಗಳೂರಿನ ಶ್ರೀ ಶ್ರೀನಿವಾಸ ಪಾಠಶಾಲೆಯ ಆಡಳ್ತ ಸಮಿತಿಯ ಪ್ರಥಮ ಅಧ್ಯಕ್ಷರಾಗಿದ್ದ ಅವರು ವಿದ್ಯಾಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ ಬಹಳಷ್ಟು ದುಡಿದವರಿರುತ್ತಾರೆ. ಶ್ರೀಯುತರ ನಿಧನದ ವಾರ್ತೆ ಮಂಗಳೂರಿಗೆ ತಲಪುತ್ತಲೇ ಶ್ರೀ ಶ್ರೀನಿವಾಸ ಪಾಠಶಾಲೆಯ ಆಡಳ್ತವರ್ಗ, ಶಿಕ್ಷಕವರ್ಗ, ಮತ್ತು ವಿದ್ಯಾರ್ಥಿವೃಂದದ ದುಃಖಸೂಚಕ ಸಭೆಯೊಂದು ಜರಗಿ, ಮೃತರ ನಿಧನದಲ್ಲಿ ದುಃಖ ಸೂಚಿಸುವ ಠರಾವನ್ನು ಕೈಕೊಳ್ಳಲಾಗಿತ್ತು.

——

Printed at The Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.